ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಲಾಲ್ ಸಲಾಂ ಕಾಂ. ಮಹಮ್ಮದ್ ಅಮೀನ್

ಸಂಪುಟ 12 | ಸಂಚಿಕೆ 8 | ಫೆಬ್ರವರಿ 19-25, 2018 | ಪುಟ 16 | ರೂ. 10/-

web: www.janashakthi.co.in
e-mail : js_weekly@yahoo.com


Unofficial Sususwamy
@swamv39

Ab Tak Teen Logon ko Bhagaya Mitron

ಮತ್ತೊಂದು 'ಮೋದಿ' ಹಗರಣ

ಚಳುವಳಿಗಳು ಮತ್ತು ಹೋರಾಟಗಳ ಮೂಲಕ ಪರ್ಯಾಯ ಮೂಡಿ ಬರುತ್ತದೆ



CPI(M)
22nd CONGRESS
HYDERABAD
18-22,April 2018

ಸಾವಿರಾರು ರೈತರ ಬೃಹತ್ ವಿಧಾನಸೌಧ ಚಲೋ



23 ಫೆಬ್ರವರಿ 2018

KUIDFC ಹಗರಣದಲ್ಲಿ ಶಾಸಕರು ಭಾಗಿ




ತ್ರಿಪುರಾ 8ನೇ ಎಡರಂಗ ಸರ್ಕಾರದತ್ತ

ಸಹಕಾರಿ ರಂಗದ ರತ್ನ ಕೇರಳ



ಮೋದಿಕೇರ್ ಹಿಂದೆ ಏನಿದೆ?



ಹಿರಿಯ ಕಾರ್ಮಿಕ ಮತ್ತು ಕಮ್ಯುನಿಸ್ಟ್ ಮುಖಂಡ ಕಾಂ.ಮೊಹಮ್ಮದ್ ಅಮೀನ್ ನಿಧನ


ಕಾಮ್ರೇಡ್ ಮೊಹಮ್ಮದ್ ಅಮೀನ್, ದೇಶದ ಹಿರಿಯ ಕಾರ್ಮಿಕ ಮುಖಂಡರು, ಸಿಐಟಿಯುನ ಮಾಜಿ ಪ್ರಧಾನ ಕಾರ್ಯದರ್ಶಿ ಫೆಬ್ರುವರಿ 12ರಂದು ಕೊಲ್ಕತಾದಲ್ಲಿ ನಿಧನರಾಗಿದ್ದಾರೆ. ಈ ಹಿಂದೆ ಸಿಪಿಐ(ಎಂ)ನ ಪೊಲಿಟ್‌ಬ್ಯುರೊದ ಸದಸ್ಯರೂ, ರಾಜ್ಯಸಭಾ ಸದಸ್ಯರೂ ಮತ್ತು ಪಶ್ಚಿಮ ಬಂಗಾಲದ ಸಂಯುಕ್ತ ರಂಗ ಮತ್ತು ಜ್ಯೋತಿಬಸು ನೇತೃತ್ವದ ಎಡರಂಗ ಸರಕಾರಗಳಲ್ಲಿ ಮಂತ್ರಿಯೂ ಆಗಿ ಅವರು ಸೇವೆ ಸಲ್ಲಿದ್ದಾರೆ. ಅವರಿಗೆ 90 ವರ್ಷವಾಗಿತ್ತು.

ಸಿಪಿಐ(ಎಂ) ಪೊಲಿಟ್‌ಬ್ಯರೊ ಅವರ ಸೇವೆಗಳನ್ನು ಸ್ಮರಿಸಿಕೊಂಡು ಶ್ರದ್ಧಾಂಜಲಿ ಅರ್ಪಿಸುತ್ತ ಅವರ ನಿಧನ ದೇಶದ ಕಮ್ಯುನಿಸ್ಟ್ ಆಂದೋಲನಕ್ಕೆ ಒಂದು ದೊಡ್ಡ ನಷ್ಟ ಎಂದು ಹೇಳಿದೆ.

ಮೊಹಮ್ಮದ್ ಅಮೀನ್ ಉತ್ತರಪ್ರದೇಶದ ವಾರಣಾಸಿಯಿಂದ ಕೊಲ್ಕತಾಕ್ಕೆ ವಲಸೆ ಬಂದ ಒಂದು ಬಡ ಕುಟುಂಬದಲ್ಲಿ ಜನಿಸಿದರು. ಔಪಚಾರಿಕ ಶಿಕ್ಷಣದ ಅಭಾವ ಮತ್ತು ಬಡತನದಿಂದಾಗಿ 14ನೇ ವರ್ಷದಲ್ಲಿಯೇ ಅವರು ಸಣಬು ಕಾರ್ಖಾನೆಯಲ್ಲಿ ಕಾರ್ಮಿಕನಾಗಿ ದುಡಿಯಲಾರಂಭಿಸಿದರು.

ಬೇಗನೇ ಅವರು ಕಾರ್ಮಿಕ ಆಂದೋಲನ ಸೇರಿದರು, ಬಂಗಾಲ ಜೂಟ್ ಮಿಲ್ ಮಜದೂರ್ ಯೂನಿಯನ್ ಸದಸ್ಯರಾದರು. ಎರಡನೇ ಮಹಾಯುದ್ಧದದ ಅಂತ್ಯದ ವೇಳೆಗೆ ಅವರು ಕಮ್ಯುನಿಸಂನತ್ತ ಆಕರ್ಷಿತರಾಗಿ 1946ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. ದೇಶದ ವಿಭಜನೆಯಾದ ಆರಂಭದ ದಿನಗಳಲ್ಲಿ ಅವರು ಪಕ್ಷದ ಸೂಚನೆಯ ಮೇರೆಗೆ ಪೂರ್ವ ಪಾಕಿಸ್ತಾನಕ್ಕೆ ಹೋದರು. ಅಲ್ಲಿ ಆಂದೋಲನಗಳಿಗೆ ನೇತೃತ್ವ ನೀಡಿದ್ದಕ್ಕೆ ಜೈಲು ಶಿಕ್ಷೆಗೊಳಗಾದರು. ಜೈಲಿನಿಂದ ಬಿಡುಗಡೆಯಾದ ನಂತರ ಪಶ್ಚಿಮ ಬಂಗಾಲಕ್ಕೆ ಮರಳಿದರು.

ಒಬ್ಬ ಉತ್ತಮ ಸಂಘಟಕರಾಗಿದ್ದ ಅವರು ಬ್ಯಾರಕ್‌ಪುರ ಕೈಗಾರಿಕಾ ಪಟ್ಟಿಯಲ್ಲಿ ಸಣಬು, ಬೀಡಿ ಮತ್ತಿತರ ಕಾರ್ಮಿಕರನ್ನು ಸಂಘಟಿಸಿದರು. ತಮ್ಮ ಜೀವಮಾನವಿಡೀ ಅವರು ಕಾರ್ಮಿಕ ವರ್ಗದ ಹಿತಗಳನ್ನು ಪ್ರತಿಪಾದಿಸಿದವರು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ನೆನಪಿಸಿಕೊಂಡಿದೆ.



ಮೊಹಮ್ಮದ್ ಅಮೀನ್ 1955ರಲ್ಲಿ ಕಮ್ಯುನಿಸ್ಟ್ ಪಕ್ಷದ 24 ಪರಗಣ ಜಿಲ್ಲಾ ಸಮಿತಿಗೆ ಆಯ್ಕೆಯಾದರು, 1971ರಲ್ಲಿ ಪಶ್ಚಿಮ ಬಂಗಾಲ ರಾಜ್ಯ ಸಮಿತಿಗೆ ಆಯ್ಕೆಗೊಂಡರು, ಮತ್ತು 1985ರಲ್ಲಿ 12ನೇ ಸಿಪಿಐ(ಎಂ) ಮಹಾಧಿವೇಶನದಲ್ಲಿ ಕೇಂದ್ರ ಸಮಿತಿಗೆ ಆಯ್ಕೆಯಾದರು. 2008ರಲ್ಲಿ ಅವರು ಸಿಪಿಐ(ಎಂ) ಪೊಲಿಟ್‌ಬ್ಯುರೊಗೆ ಆರಿಸಲ್ಪಟ್ಟರು. 2012ರಲ್ಲಿ ಸಿಪಿಐ(ಎಂ)ನ 20ನೇ ಮಹಾಧಿವೇಶನದಲ್ಲಿ ಅವರನ್ನು ಕೇಂದ್ರಸಮಿತಿಯ ಒಬ್ಬ ವಿಶೇಷ ಆಹ್ವಾನಿತರಾಗಿ ಮಾಡಲಾಯಿತು.

ಸಿಐಟಿಯುನ 12ನೇ ಸಮ್ಮೇಳನದಲ್ಲಿ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿಸಲಾಯಿತು. ನಂತರ ಅವರು ಅದರ ಒಬ್ಬ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು.

1969ರಲ್ಲಿ ಮೊಹಮ್ಮದ್ ಅಮೀನ್ ಪಶ್ಚಿಮ ಬಂಗಾಲದ ಟಿಟಾಘರ್ ಕ್ಷೇತ್ರದಿಂದ ವಿಧಾನಸಭೆಗೆ ಆರಿಸಲ್ಪಟ್ಟರು. 1970ರಲ್ಲಿ ಅಜೊಯ್ ಮುಖರ್ಜಿ ನೇತೃತ್ವದ ಸಂಯುಕ್ತ ರಂಗ ಸರಕಾರದಲ್ಲಿ ಸಾರಿಗೆ ಮಂತ್ರಿಯಾದರು. 1971ರಲ್ಲಿ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಎದುರಿಸಿ ಅವರು ವಿಧಾನಸಭಾ ಚುನಾವಣೆಯಲ್ಲಿ ಗೆದ್ದರು. 1977ರ ವಿಧಾನಸಭಾ ಚುನಾವಣೆಗಳಲ್ಲಿ ಅವರು ಪುನರಾಯ್ಕೆಗೊಂಡು ಮೊದಲ ಎಡರಂಗ ಸರಕಾರದಲ್ಲಿ ಸಾರಿಗೆ ಮಂತ್ರಿಗಳಾದರು. ನಂತರ ಅವರು 1996ರಿಂದ 2006ರ ನಡುವೆ ಅಲ್ಪಸಂಖ್ಯಾತ ಇಲಾಖೆಯ ಮಂತ್ರಿಯಾಗಿ ಮತ್ತು ಕಾರ್ಮಿಕ ಮಂತ್ರಿಯಾಗಿ ಸೇವೆ ಸಲ್ಲಿಸಿದರು. 1988 ರಿಂದ 1994 ರವರೆಗೆ ಅವರು ಒಂದು ಅವಧಿಗೆ ಅವರು ರಾಜ್ಯಸಭಾಕ್ಕೂ ಆಯ್ಕೆಯಾಗಿದ್ದರು.

ತಮ್ಮ ರಾಜಕೀಯ ಜೀವನದಲ್ಲಿ ಮೊಹಮ್ಮದ್ ಅಮೀನ್ ಒಟ್ಟು ಎರಡು ವರ್ಷಗಳ ಕಾಲ ಜೈಲಿನಲ್ಲಿ ಕಳೆದರು, ಅಷ್ಟೇ ಅವಧಿಯ ಭೂಗತ ಜೀವನವನ್ನೂ ನಡೆಸಿದರು.

ಮೊಹಮ್ಮದ್ ಅಮೀನ್ ಪತ್ರಕರ್ತರೂ, ಕವಿಯೂ ಕೂಡ. ಪಶ್ಚಿಮ ಬಂಗಾಲ ಸಿಪಿಐ(ಎಂ)ನ ಉರ್ದು ಪತ್ರಿಕೆ 'ಕಿಸಾನ್ ಮಜ್ದೂರ್' ಸಂಪಾದಕರಾಗಿ ಕೆಲಸ ಮಾಡಿದರು. ಅವರ ಕವನಗಳ ಹಲವು ಸಂಗ್ರಹಗಳು ಪ್ರಕಟವಾಗಿವೆ.

ಅವರು ಅತ್ಯಂತ ಸರಳ ಜೀವನ ನಡೆಸಿದವರು, ಅವರ ಆವಶ್ಯಕತೆಗಳು ಬಹಳ ಕಡಿಮೆ. ಸ್ನೇಹಜೀವಿಯಾಗಿದ್ದ ಅವರದ್ದು ನೇರ ನಡೆ, ಸದಾ ಬಡವರು ಮತ್ತು ದಮನಕ್ಕೆ ಒಳಗಾದವರ ಪರಿಸ್ಥಿತಿಗಳ ಬಗ್ಗೆ ಆತಂಕಿತರಾಗಿದ್ದರು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯರೊ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತ ಅವರ ಮೂವರು ಮಕ್ಕಳಿಗೆ ಹಾರ್ದಿಕ ಸಂತಾಪ ವ್ಯಕ್ತಡಿಸಿದೆ.

ಆಸ್ಮಾ ಜಹಾಂಗೀರ್‌ಗೆ ಎಐಡಿಡಬ್ಲ್ಯುಎ ನಮನ

"ಆಕೆಯ ನೆನಪು ಸಮಾನತೆ ಮತ್ತು ನ್ಯಾಯದ ಹೋರಾಟದಲ್ಲಿ ಸದಾ ಸ್ಫೂರ್ತಿದಾಯಕ"


ಫೆಬ್ರುವರಿ 11ರಂದು ಲಾಹೋರ್‌ನಲ್ಲಿ ನಿಧನರಾದ ಆಸ್ಮಾ ಜಹಾಂಗೀರ್ ಮಹಿಳಾ ಹಕ್ಕುಗಳು ಮತ್ತು ಮಾನವ ಹಕ್ಕುಗಳಿಗೆ ಅದಮ್ಯ ಬದ್ಧತೆ ಹೊಂದಿದ್ದ ಒಬ್ಬ ಅಪರೂಪದ ಧೀರ ಮಹಿಳೆ, ಆಕೆಯ ಈ ಬದ್ಧತೆ ತನ್ನ ದೇಶದ ಸರಕಾರದಿಂದ, ಧಾರ್ಮಿಕ ಮೂಲಭೂತವಾದಿಗಳಿಂದ ಮತ್ತು ಇತರ ಹಲವರಿಂದ ಹಲವಾರು ದಾಳಿಗಳ ಎದುರೂ ಕಿಂಚಿತ್ತೂ ಜಗ್ಗದೆ ಅಚಲವಾಗಿತ್ತು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ತನ್ನ ನಮನವನ್ನು ಸಲ್ಲಿಸಿದೆ.

ಆಕೆಯ ಸಾವು ಜಗತ್ತಿನಾದ್ಯಂತ, ವಿಶೇಷವಾಗಿ ಪಾಕಿಸ್ತಾನ ಮತ್ತು ಭಾರತದಲ್ಲಿ ಅಪಾರ ದುಖವನ್ನು, ಗಹನವಾದುದನ್ನು ಕಳಕೊಂಡ ಭಾವವನ್ನು ಉಂಟು ಮಾಡಿದೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಆಸ್ಮಾ ತನ್ನ ದೇಶ ಪಾಕಿಸ್ತಾನದಲ್ಲಿ ಮಹಿಳೆಯರನ್ನು ಕೌಟುಂಬಿಕ ಹಿಂಸಾಚಾರ ಮತ್ತು ಅಸಮಾನ ಕಾನೂನುಗಳಿಂದ ರಕ್ಷಿಸುವ ಒಬ್ಬ ವಕೀಲೆಯಾಗಿ ತನ್ನ ವೃತ್ತಿ ಜೀವನವನ್ನು ಆರಂಭಿಸಿ, ಜೀತದಾಳುಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ದಾಳಿಗಳ ವಿರುದ್ಧವೂ ಹೋರಾಡುವ ಮಾನವ ಹಕ್ಕುಗಳ ಹೋರಾಟಗಾರ್ತಿಯಾಗಿ ಬೆಳೆದರು.

ಆಕೆ ಪಾಕಿಸ್ತಾನದ ಇತರ ಕೆಲವು ಧೀರ ಮಹಿಳೆಯರೊಂದಿಗೆ ವಿಮೆನ್ಸ್ ಆಕ್ಷನ್ ಫೋರಂ(ಮಹಿಳಾ ಕಾರ್ಯಾಚರಣೆ ವೇದಿಕೆ-ಡಬ್ಲ್ಯುಎಎಫ್) ಸ್ಥಾಪಿಸಿ ಮಹಿಳಾ ಹಕ್ಕುಗಳಿಗಾಗಿ ಮತಪ್ರದರ್ಶನಗಳಲ್ಲಿ ಮುಂಚೂಣಿಯಲ್ಲಿದ್ದವರು. ಝಿಯಾ ಆಳ್ವಿಕೆಯಲ್ಲಿ ದುಷ್ಟ ಹುದೂದ್ ಕಾನೂನುಗಳ ವಿರುದ್ಧ ಬೀದಿಗಿಳಿಯುವ ಧೈರ್ಯ ತೋರಿದ್ದು ಈ ಡಬ್ಲ್ಯುಎಎಫ್. ಅಸ್ಮಾ ಮತ್ತು ಇತರರನ್ನು ಪೋಲೀಸರು ಥಳಿಸಿದರು, ಕೂದಲು ಹಿಡಿದೆಳೆದುಕೊಂಡು ಹೋದರು. ಆದರೂ ಈ ಹೋರಾಟಗಾರ್ತಿಯರ ಹುಮ್ಮಸ್ಸು ಕಡಿಮೆಯಾಗಲಿಲ್ಲ. ಝಿಯಾ ಆಡಳಿತ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಒಂದು ನಿರ್ಣಯ ಪಾಸು ಮಾಡಿಸಿ ಆಕೆಗೆ ಧರ್ಮದೂಷಕಳೆಂದು ಮರಣ ದಂಡನೆ ವಿಧಿಸಿತು. ಪಾಕಿಸ್ತಾನದ ಒಂದು ಮೂಲೆಯಲ್ಲಿದ್ದ ಸ್ಥಳದಲ್ಲಿ ಆಕೆಯನ್ನು ಬಂಧನದಲ್ಲಿಡಲಾಯ್ತು. ಇನ್ನೊಬ್ಬ ಧೀರ ವಕೀಲೆ ಅವರ ಪರವಾಗಿ ಗಟ್ಟಿಯಾಗಿ ವಾದಿಸಿ ಸರಕಾರ ಆಕೆಯನ್ನು ಬಿಡುಗಡೆಗೊಳಿಸುವಂತೆ ಮಾಡಿದರು.

ನಂತರವೂ ಸ್ವಲ್ಪವೂ ಅಳುಕದೆ ಅಸ್ಮಾ ಧರ್ಮದೂಷಣೆಯ ಶಿಕ್ಷೆಗೆ ಒಳಗಾದ ಮಸೀಹ್ ಕುಟುಂಬದ ರಕ್ಷಣೆಗೆ ನಿಂತರು. ಇದರಿಂದಾಗಿ ಆಕೆಯ ತಾಯಿ ಮತ್ತು ಇತರ ಕುಟುಂಬದ ಸದಸ್ಯರ ಮೇಲೆ ಸಶಸ್ತ್ರ ಮಂದಿಯ ದಾಳಿಗೂ ಒಳಗಾದರು ಎಂಬುದನ್ನು ಎಐಡಿಡಬ್ಲ್ಯುಎ ತನ್ನ ಶ್ರದ್ಧಾಂಜಲಿ ಹೇಳಿಕೆಯಲ್ಲಿ ನೆನಪಿಸಿಕೊಂಡಿದೆ.



ಆಸ್ಮಾ ಜಹಾಂಗೀರ್ ಪಾಕಿಸ್ತಾನದ ಮಾನವ ಹಕ್ಕುಗಳ ಮಂಡಳಿಯ ಸ್ಥಾಪಕರು ಮತ್ತು ಅಲ್ಲಿನ ಸುಪ್ರಿಂ ಕೋರ್ಟ್ ವಕೀಲರ ಸಂಘಟನೆಯ ಅಧ್ಯಕ್ಷರಾದರು. ವಿಶ್ವಸಂಸ್ಥೆಯ ಧಾರ್ಮಿಕ ಸ್ವಾತಂತ್ರ್ಯದ ವಿಶೇಷ ನಡಾವಳಿ ವರದಿಗಾರರಾಗಿಯೂ ಸೇವೆ ಸಲ್ಲಿಸಿದರು. ಈ ಹುದ್ದೆಯಲ್ಲಿರುವಾಗ ಅವರು ಕಾರ್ಯನಿಮಿತ್ತ ಹಲವು ದೇಶಗಳಿಗೆ, ಭಾರತಕ್ಕೂ ಭೇಟಿ ನೀಡಿದ್ದರು.

ಆಸ್ಮಾ ಎಂದಿಗೂ ನ್ಯಾಯದ ಹುಡುಕಾಟದಲ್ಲಿ ರಾಜಿ ಮಾಡಿಕೊಳ್ಳಲಿಲ್ಲ, ತನ್ನನ್ನು ಈ ಮೊದಲು ಹಲವು ಸಂದರ್ಭಗಳಲ್ಲಿ ವಿರೋಧಿಸಿದವರೂ ಕಿರುಕುಳಕ್ಕೊಳಗಾದಾಗ ಅವರ ರಕ್ಷಣೆಗೆ ನಿಂತರು. ಅವರ ಈ ಧೀರ ಪ್ರಾಮಾಣಿಕ ಗುಣಗಳಿಗಾಗಿ ಆಕೆ ಸದಾಸ್ಮರಣೀಯರು, ನಮ್ಮದೇ ದೇಶದಲ್ಲಿ ಧಾರ್ಮಿಕ ಮೂಲಭೂತವಾದ ಗಂಭೀರ ಬೆದರಿಕೆಗಳನ್ನು ಒಡ್ಡಿರುವ ಈಗಿನ ಸಂದರ್ಭದಲ್ಲಿ ಆಕೆಯ ಉದಾಹರಣೆ ಧಾರ್ಮಿಕ ಮೂಲಭೂತವಾದದ ಹಲವು ಅಪಾಯಗಳನ್ನು ಎದುರಿಸಬೇಕಾದ ನಮ್ಮ ಸಮರಗಳಲ್ಲಿ ಸ್ಫೂರ್ತಿದಾಯಕ ಎಂದು ಎಐಡಿಡಬ್ಲ್ಯುಎ ತನ್ನ ಶ್ರದ್ಧಾಂಜಲಿ ಅರ್ಪಿಸಿದೆ.

"ದಣಿವರಿಯದ, ಎಂದೂ ಜಗ್ಗದ ಮಹಿಳಾ ಮತ್ತು ದಮನಕ್ಕೊಳಗಾದ ಜನತೆಯ ಪರ ಹೋರಾಟಗಾರ್ತಿಗೆ, ತನ್ನ ದೇಶದಲ್ಲಿ ಮಿಲಿಟರಿ ಸರ್ವಾಧಿಕಾರ, ಧರ್ಮಾಂಧರು ಮತ್ತು ಸ್ತ್ರೀದ್ವೇಷಿಗಳ ಎದುರು ತಲೆಬಾಗಲು ನಿರಾಕರಿಸಿದ ಆಸ್ಮಾ ಜಹಾಂಗೀರ್‌ಗೆ ನಮ್ಮ ನಮನ. ಆಕೆಯ ನೆನಪು ಸಮಾನತೆ ಮತ್ತು ನ್ಯಾಯದ ಹೋರಾಟದಲ್ಲಿ ನಮಗೆ ಸದಾ ಸ್ಫೂರ್ತಿ ನೀಡುತ್ತದೆ" ಎಂದು ಎಐಡಿಡಬ್ಲ್ಯುಎ ತನ್ನ ಶ್ರದ್ಧಾಂಜಲಿ ಹೇಳಿಕೆಯಲ್ಲಿ ತಿಳಿಸಿದೆ.

ಕೋಮು ಧ್ರುವೀಕರಣಕ್ಕಾಗಿ ಈ 'ರಾಮರಾಜ್ಯ ರಥಯಾತ್ರೆ' –ಸಿಪಿಐ(ಎಂ) ಪೊಲಿಟ್‌ಬ್ಯುರೊ ಆತಂಕ

ಆರೆಸ್ಸೆಸ್-ಬಿಜೆಪಿಗೆ ಕೋಮುವಾದಿ ಹಿಂದುತ್ವ ವೋಟ್ ಬ್ಯಾಂಕನ್ನು ಬಲಪಡಿಸುವ ದುಷ್ಟತಂತ್ರಗಳನ್ನು ಬಯಲಿಗೆಳೆಯಲು ಜಾತ್ಯತೀತ, ಶಾಂತಿಪ್ರಿಯ ಶಕ್ತಿಗಳಿಗೆ ಕರೆ

ಫೆಬ್ರುವರಿ 13ರಂದು ಉತ್ತರಪ್ರದೇಶದ ಅಯೋಧ್ಯೆಯಿಂದ 'ರಾಮರಾಜ್ಯ ರಥಯಾತ್ರೆ' ಆರಂಭವಾಗಿದೆ. ಆರೆಸ್ಸೆಸ್‌ಗೆ ಸೇರಿದ ವಿಹೆಚ್‌ಪಿಯ ಪ್ರಧಾನ ಕಾರ್ಯದರ್ಶಿ, ಫರೀದಾಬಾದ್‌ನ ಬಿಜೆಪಿ ಸಂಸತ್ ಸದಸ್ಯರು, ಅಯೋಧ್ಯೆಯ ಬಿಜೆಪಿ ಮೇಯರ್ ಮತ್ತು ಇತರ ಬಿಜೆಪಿ ಮುಖಂಡರ ಸಮ್ಮುಖದಲ್ಲಿ ಇದನ್ನು ಉದ್ಘಾಟಿಸಿದ್ದಾರೆ. ಈ ರಥಯಾತ್ರೆಯ ದುಷ್ಪರಿಣಾಮಗಳ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಳವಾದ ಆತಂಕ ವ್ಯಕ್ತಪಡಿಸಿದೆ.

'ರಾಮಾಯಣ'ದಲ್ಲಿ ಹೇಳಿರುವ ಶ್ರೀಲಂಕೆಗೆ ರಾಮನ ಪಯಣದ ದಾರಿಯಲ್ಲಿ ಈ ರಥಯಾತ್ರೆ ಸಾಗಲಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಇದರ ಮುಖ್ಯ ಗುರಿ ಅಯೋಧ್ಯೆಯ ವಿವಾದಿತ ಸ್ಥಳದಲ್ಲಿ(ಸುಪ್ರಿಂ ಕೋರ್ಟಿನಲ್ಲಿ ಈ ಕುರಿತ ಅರ್ಜಿಗಳ ವಿಚಾರಣೆಯನ್ನು ಇನ್ನೂ ನಡೆಸುತ್ತಿದ್ದರೂ) ರಾಮದೇವಸ್ಥಾನವನ್ನು ಕಟ್ಟುವ ಪ್ರತಿಜ್ಞೆಯನ್ನು ಜನಗಳು ಕೈಗೊಳ್ಳುವಂತೆ ಮಾಡುವುದು, 'ರಾಮರಾಜ್ಯ'ದ ಮರುಸ್ಥಾಪನೆ, ಶಾಲಾಪಠ್ಯಕ್ರಮದಲ್ಲಿ 'ರಾಮಾಯಣ'ದ ಬೋಧನೆಯನ್ನು ಸೇರಿಸುವುದು ಮತ್ತು ಭಾನುವಾರದ ಬದಲು ಗುರುವಾರವನ್ನು ವಾರದ ರಜಾದಿನವಾಗಿ 'ರಾಷ್ಟ್ರೀಯ ಹಿಂದೂ ದಿನ'ದ ಆಚರಣೆ ಎಂದು ಸಾರಲಾಗಿದೆ.

ಈ ಯಾತ್ರೆಯ ದಾರಿ ಬಿಜೆಪಿ ಆಳ್ವಿಕೆಯ ರಾಜ್ಯಗಳಾದ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ಮೂಲಕ ಹಾದು, ವಿಧಾನಸಭಾ ಚುನಾವಣೆಗಳು ನಡೆಯಲಿರುವ ಕರ್ನಾಟಕದಲ್ಲಿ ಸುಮಾರು 15 ದಿನಗಳ ಕಾಲ ಸಂಚರಿಸಿ, ಕೇರಳದ ಮೂಲಕ ತಮಿಳುನಾಡಿನಲ್ಲಿ ರಾಮೇಶ್ವರಂ ತಲುಪಲಿದೆಯಂತೆ.

ಈ ಯಾತ್ರೆ ಕಿಚ್ಚು ಹಚ್ಚುವ ಸಾಧ್ಯತೆಯನ್ನು ಹೊಂದಿದ್ದು ಆರೆಸ್ಸೆಸ್-ಬಿಜೆಪಿಗೆ ಕೋಮುವಾದಿ ಹಿಂದುತ್ವ ವೋಟ್‌ಬ್ಯಾಂಕನ್ನು ಬಲಪಡಿವುದಕ್ಕಾಗಿ ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಅಪಾಯವನ್ನು ತುಂಬಿಕೊಂಡಿದೆ. ಕೋಮುಗಲಭೆಗಳನ್ನು, ಹಿಂಸಾಚಾರವನ್ನು ಮತ್ತು ವಿನಾಶಲೀಲೆಯನ್ನು ಹರಿಯ ಬಿಡುವ ಗಂಭೀರ ಅಪಾಯಗಳಿವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಎಚ್ಚರಿಸಿದೆ.

ಕೇಂದ್ರ ಸರಕಾರ ಮತ್ತು ರಾಜ್ಯಸರಕಾರಗಳು ಕೋಮುಶಾಂತಿಯನ್ನು ಕದಡದಂತೆ, ಮತ್ತು ಜೀವನ ಮತ್ತು ಸ್ವಾತಂತ್ರ್ಯದ ವೈಯಕ್ತಿಕ ಹಕ್ಕಿನ ಉಲ್ಲಂಘನೆಯಾಗದಂತೆ ಕಾನೂನು ಮತ್ತು ವ್ಯವಸ್ಥೆಯನ್ನು ಬಲಪಡಿಸಬೇಕು ಎಂದು ಕರೆ ನೀಡಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆರೆಸ್ಸೆಸ್/ಬಿಜೆಪಿಯ ಕೋಮುವಾದಿ ಅಣಿನೆರಿಕೆಯ ದುಷ್ಟ ತಂತ್ರಗಳನ್ನು ಬಯಲಿಗೆಳೆಯಬೇಕು ಎಂದು ಎಲ್ಲ ಜಾತ್ಯತೀತ ಹಾಗೂ ಶಾಂತಿಪ್ರಿಯ ಶಕ್ತಿಗಳಿಗೆ ಕರೆ ನೀಡಿದೆ.

ಸಂಪಾದಕೀಯ

ಕಾಂಗ್ರೆಸಿನ ಮೃದು ಹಿಂದುತ್ವ – ರಾಹುಲ್ ಸ್ಟೈಲ್

ರಾಹುಲ್ ಗಾಂಧಿ ಕರ್ನಾಟಕದಲ್ಲಿ ಕಾಂಗ್ರೆಸ್–ಪರ ಅಧಿಕೃತವಾಗಿ ಚುನಾವಣಾ ಪ್ರಚಾರ ಆರಂಭಿಸಿದ್ದಾರೆ. ಗುಜರಾತ್ ಚುನಾವಣೆಯಲ್ಲಿ ಪ್ರಚಾರದ ಅನುಭವದ ಆಧಾರದ ಮೇಲೆ ಕರ್ನಾಟಕದಲ್ಲಿ ತಮ್ಮ ಚುನಾವಣಾ ಪ್ರಚಾರದ ತಂತ್ರ ಶೈಲಿಗಳಲ್ಲಿ ಕೆಲವು ಬದಲಾವಣೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಇದರಲ್ಲಿ ಒಂದು ಕಾಂಗ್ರೆಸ್ ಹಿಂದೂ–ವಿರೋಧಿ ಮತ್ತು ತಮ್ಮನ್ನು 'ಹಿಂದೂವೇ ಅಲ್ಲ' ಎಂದು ಬಿಂಬಿಸುವ ಬಿಜೆಪಿ ಪ್ರಯತ್ನಗಳಿಗೆ ವಿರುದ್ಧವಾಗಿ ತಾನು 'ಒಳ್ಳೆಯ ಹಿಂದೂ' ಎಂದು ಬಿಂಬಿಸಿಕೊಳ್ಳುವುದು ಒಂದು. ಗುಜರಾತಿನಲ್ಲಿ ಸೋಮನಾಥ ಮುಂತಾದ ದೇವಾಲಯಗಳಿಗೆ ಭೇಟಿ ನೀಡಿದ ಹಾಗೆ ಇಲ್ಲೂ ಮಾಡಲಾಗುತ್ತದೆ ಎಂದು ಇದರರ್ಥವಾಗಿತ್ತು. ಅದೇ ರೀತಿ ಈ ವಾರದ ಭೇಟಿಯ ಕಾಲದಲ್ಲಿ ರಾಹುಲ್ ಹಲವು ದೇವಸ್ಥಾನಗಳು ಹಾಗೂ ಪೂಜಾಸ್ಥಳಗಳಿಗೆ ಪ್ರಜ್ಞಾಪೂರ್ವಕವಾಗಿ (ಚುನಾವಣಾ ತಂತ್ರದ ಭಾಗವಾಗಿ) ಭೇಟಿಯಿತ್ತರು.

ರಾಹುಲ್ ಅವರು ತಮ್ಮ ಚುನಾವಣಾ ಪ್ರಚಾರದ ಭಾಗವಾಗಿ ಯಲಬುರ್ಗಾ, ಬಂಡಿ ಕ್ರಾಸ್, ಕುಷ್ಟಗಿ, ತಾವರಗೇರಾ, ಕನಕಗಿರಿ, ಗಂಗಾವತಿಗಳಲ್ಲಿ ರೋಡ್ ಷೋ ನಡೆಸಿ, ಕಾರಟಗಿಯಲ್ಲಿ ಬಹಿರಂಗ ಸಭೆ ನಡೆಸಿದರು. ಕಾರಟಗಿ ಸಮಾರಂಭದಲ್ಲಿ ಶಾಸಕ ಶಿವರಾಜ ತಂಗಡಗಿ ಅವರು ಉಡುಗೊರೆಯಾಗಿ ನೀಡಿದ ಬೆಳ್ಳಿ ಖಡ್ಗವನ್ನು ರಾಹುಲ್ ಅವರು ಕನಕಗಿರಿಯ ಕನಕಾಚಲಪತಿ ದೇವಸ್ಥಾನಕ್ಕೆ ಅರ್ಪಿಸಿದರು. ಕನಕಾಚಲಪತಿ ದೇವಸ್ಥಾನಕ್ಕೆ ಫೆ. 11ರಂದು ಭೇಟಿ ನೀಡಿ ದರ್ಶನ ಪಡೆದರು. ದೇವಸ್ಥಾನದ ಪಂಚ (ಐದು) ಕಳಸದ ಸ್ಥಳವನ್ನು ಕುತೂಹಲದಿಂದ ವೀಕ್ಷಿಸಿದರು, ಎಂದು ವರದಿಯಾಗಿದೆ.

ಶಿವರಾತ್ರಿ ದಿನದಂದು ಬಸವಕಲ್ಯಾಣದ ಅನುಭವ ಮಂಟಪಕ್ಕೆ ಭೇಟಿ ನೀಡಿದ ರಾಹುಲ್ ಗಾಂಧಿ ಹಣೆಗೆ ವಿಭೂತಿ ಇಡಿಸಿಕೊಂಡು, ರುದ್ರಾಕ್ಷಿ ಮಾಲೆ ಧರಿಸಿ ಸಂಭ್ರಮಿಸಿದರು. ಅವರಿಗೆ ಹುಲಸೂರ ಶಿವಾನಂದ ಸ್ವಾಮೀಜಿ ಇಷ್ಟಲಿಂಗ ನೀಡಿದರು. ಬೀದರ್‌ನ ಅಕ್ಕ ಅನ್ನಪೂರ್ಣ ಮತ್ತು ಅಕ್ಕ ಡಾ. ಗಂಗಾಂಬಿಕಾ ಕೊರಳಿಗೆ ರುದ್ರಾಕ್ಷಿ ಮಾಲೆ ಹಾಕಿದರು. ಗೋರಟಾ ರಾಜಶೇಖರ ಸ್ವಾಮೀಜಿ ಅವರು ಕೈಗೆ ರುದ್ರಾಕ್ಷಿ ಮಣಿಸರ ಕಟ್ಟಿದರು. ಹಾರಕೂಡ ಚನ್ನವೀರ ಶಿವಾಚಾರ್ಯರು ಪುಸ್ತಕ ಹಾಗೂ ಬಸವರಾಜ ಧನ್ನೂರ ಅವರು ಬಸವಣ್ಣನವರ ಮೂರ್ತಿ ನೀಡಿದರು. ಸನ್ಮಾನದ ವೇಳೆ ಭಾಲ್ಕಿ ಗುರುಬಸವ ಪಟ್ಟದ್ದೇವರು ರಾಹುಲ್ ಹಣೆಗೆ ವಿಭೂತಿ ಇಟ್ಟರು, ಎಂದು ವರದಿಯಾಗಿದೆ.

ರಾಹುಲ್ ಗಾಂಧಿ ಒಬ್ಬ ವ್ಯಕ್ತಿಯಾಗಿ ದೇವಾಲಯಗಳಿಗೆ ಹೋಗಬಾರದೆಂದಿಲ್ಲ. ಅವರಿಗೆ ಹಿಂದೂ ದೇವರುಗಳಲ್ಲಿ ನಂಬಿಕೆ ಇರುವುದು ತಪ್ಪೂ ಅಲ್ಲ. ಆದರೆ ಈ ವರೆಗೆ ತಿಳಿದು ಬಂದಂತೆ ರಾಹುಲ್ ಇದನ್ನು ಪ್ರಮುಖವಾಗಿ ಚುನಾವಣಾ ತಂತ್ರವಾಗಿ ಮಾಡುತ್ತಿರುವುದು ಎಂಬುದನ್ನು ಗಮನಿಸಬೇಕು. ಅದೂ ತಪ್ಪಲ್ಲ. ಬಿಜೆಪಿಯ ತಂತ್ರಗಳಿಗೆ ಪ್ರತಿತಂತ್ರ ಹೂಡುವುದು ರಾಜಕೀಯ ಪಕ್ಷದ ಮತ್ತು ನಾಯಕನ ಹಕ್ಕು. ಆದರೆ ಈ ಪರಿಸ್ಥಿತಿ ಬಂದಿರುವುದು ಕಾಂಗ್ರೆಸ್ ನ ಜಾತ್ಯತೀತತೆಯ ಪರಿಕಲ್ಪನೆಗಳಲ್ಲಿ ಮತ್ತು ಅದರ ಜಾರಿಯಲ್ಲಿ ತೀವ್ರ ನ್ಯೂನತೆಗಳಿಂದಾಗಿ. ಕಳೆದ ಒಂದೆರಡು ದಶಕಗಳಿಂದ ಕಾಂಗ್ರೆಸ್ ಪಾಲಿಸುತ್ತಿರುವ 'ಮೃದು ಹಿಂದುತ್ವ' ನೀತಿಯಿಂದಾಗಿ ಇಂತಹ 'ಅನಿವಾರ್ಯತೆ' ಬಂದಿದೆ.

ಧರ್ಮ ಮತ್ತು ರಾಜಕಾರಣವನ್ನು ಬೆರೆಸುವುದರ ವಿರುದ್ಧ ಸೈದ್ಧಾಂತಿಕವಾಗಿಯಾಗಲಿ ಅಥವಾ ಪ್ರಾಯೋಗಿಕವಾಗಲಿ ಕಾಂಗ್ರೆಸ್ ಎಂದೂ ಇರಲಿಲ್ಲ. ರಾಜಕಾರಣದಲ್ಲಿ ಧರ್ಮ ಹೆಚ್ಚಿನ ಪಾತ್ರ ವಹಿಸದೆ ಇದ್ದ ಸಮಯದಲ್ಲೂ ಕಾಂಗ್ರೆಸ್ ನ ಜಾತ್ಯತೀತತೆಯ ಪರಿಕಲ್ಪನೆ ಮತ್ತು ಅದರ ಜಾರಿ ತೀವ್ರವಾಗಿ ದೋಷಪೂರ್ಣವಾಗಿತ್ತು. ಒಂದು ಕಡೆ ಕೋಮುದಂಗೆಗಳ ಸಂಧರ್ಭದಲ್ಲಿ (ಮತ್ತು ನಂತರವೂ) ನಿಷ್ಪಕ್ಷಪಾತವಾಗಿ ದಂಗೆಕೋರರ (ಹೆಚ್ಚಾಗಿ ಸಂಘಪರಿವಾರ ಮತ್ತು ಅವರ ಜತೆ ಶಾಮೀಲಾದ ಕಾಂಗ್ರೆಸಿನ ಒಂದು ವಿಭಾಗ) ವಿರುದ್ಧ ದೃಢ ಕ್ರಮ ಕೈಗೊಳ್ಳದೆ ಮುಸಿಮರಲ್ಲಿ ಅಭದ್ರತೆಯ ಮನೋಭಾವನೆ ಮೂಡಿಸುವುದು. ಇನ್ನೊಂದು ಕಡೆ ಮುಸ್ಲಿಮ್ ಸಾಂಪ್ರದಾಯಿಕ ಧಾರ್ಮಿಕ ನಾಯಕರನ್ನು ಓಲೈಸಿ ಮುಸ್ಲಿಂ ಜನತೆಯಲ್ಲಿ ಇರುವ ಅಭದ್ರತೆಯನ್ನು ಬಳಸಿ ಮತಬ್ಯಾಂಕಾಗಿ ಪರಿವರ್ತಿಸಲು ಪ್ರಯತ್ನಿಸುವುದು. ಹಿಂದೂ ದೇವಾಲಯಗಳಿಗೆ ದಾನ/ಅನುದಾನಗಳ ಮೂಲಕ ಹಿಂದೂ ಧಾರ್ಮಿಕ ನಾಯಕರನ್ನೂ ಓಲೈಸುವ ಹಾಗೂ ಆ ಮೂಲಕ ಹಿಂದೂ ಜನಸಾಮಾನ್ಯರ ಧಾರ್ಮಿಕ ಭಾವನೆಗಳನ್ನು ಚುನಾವಣಾ ರಾಜಕಾರಣಕ್ಕೆ ಬಳಸುವುದರಲ್ಲಿ ಸಹ ಕಾಂಗ್ರೆಸ್ ಎಂದೂ ಹಿಂದೆ ಬಿದ್ದಿಲ್ಲ. 1984ರ ಸಿಖ್–ವಿರೋಧಿ ದಂಗೆ ಮತ್ತು ಆ ನಂತರ ನಡೆದ ಚುನಾವಣೆಯಲ್ಲಿ ಅದರ ಸಿಖ್–ವಿರೋಧಿ ಭಾವನೆ ಬಳಕೆಯಲ್ಲೂ ಕಾಂಗ್ರೆಸ್ ಹಿಂಜರಿಯಲಿಲ್ಲ.

1980ರ ದಶಕದಲ್ಲಿ ಶಾ ಬಾನು ಪ್ರಕರಣ, ರಾಮಾಯಣ ಸೀರಿಯಲ್, ರಾಮಮಂದಿರದ ಬೀಗ ತೆಗೆಯುವ ಕಾಂಗ್ರೆಸಿನ ಧರ್ಮ–ರಾಜಕಾರಣಕ್ಕೆ ಪ್ರತಿಯಾಗಿಯೇ ಬಿಜೆಪಿ ರಾಮಜನ್ಮಭೂಮಿ ಚಳುವಳಿ ಹಮ್ಮಿಕೊಂಡದ್ದು ಎಂದು ಮರೆಯುವಂತಿಲ್ಲ. ಬಿಜೆಪಿ ಉಗ್ರ ಕೋಮುವಾದಿ ಹಿಂದುತ್ವ ರಾಜಕಾರಣ ಅಂಗೀಕರಿಸಿದ ಮೇಲಂತೂ ಕಾಂಗ್ರೆಸ್ ಸಹ ಹೆಚ್ಚೆಚ್ಚು ಕೋಮುವಾದೀಕರಣಗೊಳ್ಳುತ್ತಾ ಹೋಗಿದೆ. ಬಾಬರಿ ಮಸೀದಿ ಧ್ವಂಸ, ಮುಂಬಯಿ ದಂಗೆ, ಗುಜರಾತ್ ಹತ್ಯಾಕಾಂಡಗಳಲ್ಲಿ ಮತ್ತು ಆ ನಂತರ (ಬಿಜೆಪಿಯ ರಾಜಕೀಯ ಸಂಘಟನಾ ಬಲ ಇದ್ದಾಗ್ಯೂ) ತೆಗೆದುಕೊಳ್ಳಬಹುದಾಗಿದ್ದ ದಿಟ್ಟ ಕಟು ಕ್ರಮಗಳನ್ನು ಕಾಂಗ್ರೆಸ್ ಕೈಗೊಳ್ಳಲಿಲ್ಲ. ಮಾತ್ರವಲ್ಲ ಬಿಜೆಪಿ ತನ್ನದಾಗಿಸಿಕೊಂಡ ಹಿಂದೂ ಮತಬ್ಯಾಂಕಿನ ಮೇಲೆ ಕಣ್ಣಿಟ್ಟು ತನ್ನದೇ ಆದ 'ಮೃದು ಹಿಂದುತ್ವ' ನೀತಿ ಆರಂಭಿಸಿತು. ಗುಜರಾತ್ ಮತ್ತು ಉತ್ತರದ ರಾಜ್ಯಗಳಲ್ಲಿ ಒಂದು ಕಡೆ 'ಮೃದು ಹಿಂದುತ್ವ' ಮತ್ತು ಇನ್ನೊಂದು ಕಡೆ ಅದರ 'ಅವಳಿ–ಜವಳಿ'ಯಾದ ಜನ–ವಿರೋಧಿ ನವ–ಉದಾರವಾದಿ ನೀತಿಗಳು ಹಾಗೂ ಅದರ ಜತೆಯಲ್ಲೇ ಬಂದ ಮಹಾ ಭ್ರಷ್ಟಾಚಾರದ ಹಗರಣಗಳಿಂದಾಗಿಯೇ ಬಿಜೆಪಿ ದೇಶದಾದ್ಯಂತ ಪ್ರಬಲ ಶಕ್ತಿಯಾಗಿ ಬೆಳೆದದ್ದು.

ಬಿಜೆಪಿಯ ಕೋಮು ಧ್ರುವೀಕರಣದ ರಾಜಕಾರಣ ಒಂದು 'ಡೆಡ್ ಎಂಡ್' ತಲುಪಿರುವಾಗ, ಜನ ಅದರಿಂದ ರೋಸಿ ಹೋಗುತ್ತಿರುವಾಗ, ಮುಸ್ಲಿಮರು ಕಾಂಗ್ರೆಸಿನ ಜಾತ್ಯತೀತತೆಯಲ್ಲಿ ವಿಶ್ವಾಸ ಕಳೆದುಕೊಂಡಿರುವಾಗ, ಧರ್ಮ ಮತ್ತು (ಕನಿಷ್ಟ) ಚುನಾವಣಾ ರಾಜಕಾರಣ ಬೆರೆಸದ ದಿಟ್ಟ ಜಾತ್ಯತೀತ ರಾಜಕಾರಣಕ್ಕೆ ಅಪಾರ ಅವಕಾಶವಿದೆ. 'ಮೃದು ಹಿಂದುತ್ವ'ದ ನೀತಿ ಬಿಜೆಪಿಯ ಉಗ್ರ ಹಿಂದುತ್ವ ರಾಜಕಾರಣಕ್ಕೆ ಕುಮ್ಮಕ್ಕು ಮತ್ತು ಹೊಸ ಜೀವ ಕೊಡುತ್ತದೆ. ಇದರ ಜತೆಗೆ ಬಿಜೆಪಿಯ ಇನ್ನಷ್ಟು ಉಗ್ರ ನವ–ಉದಾರವಾದಿ ಜನ–ವಿರೋಧಿ ನೀತಿಗಳ ವಿರುದ್ಧ ದೃಢ ನಿಲುವು ತೆಗೆದುಕೊಳ್ಳದೆ ಬದಲಿ ನೀತಿ ಸೂಚಿಸದಿದ್ದರೆ, ಕಾಂಗ್ರೆಸ್ ಉತ್ತರದ ರಾಜ್ಯಗಳಲ್ಲಿ ಆದಂತೆ ಇಲ್ಲೂ ಅಪ್ರಸ್ತುತವಾಗಬಹುದು. ದೇವಾಲಯಗಳಿಗೆ ಭೇಟಿ ನೀಡುವ 'ಮೃದು ಹಿಂದುತ್ವ' ಶೈಲಿ ಕನಿಷ್ಟ ಕರ್ನಾಟಕದಲ್ಲಿ ಬೇಕಾಗಿಲ್ಲ ಎಂಬುದಕ್ಕೆ ಸಿದ್ಧರಾಮಯ್ಯನವರ ಉದಾಹರಣೆಯೇ ಸಾಕು. ಸಿದ್ಧರಾಮಯ್ಯ (ಮೊದಲ ಮೊದಲಾದರೂ) ತಾನು 'ನಾಸ್ತಿಕ' ಅಥವಾ 'ದೇವಾಲಯಕ್ಕೆ ಹೋಗದ ಆಸ್ತಿಕ' ಎಂದು ಹೇಳಿಯೂ ತನ್ನ ಜನಬೆಂಬಲ ಕಳಕೊಂಡಿರಲಿಲ್ಲ ಎಂದು ಗಮನಿಸಬೇಕು. ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿ 'ಮೃದು ಹಿಂದುತ್ವ'ದ ನೀತಿ ಬಿಟ್ಟು, ಬಿಜೆಪಿಯ ಕೋಮು ಧ್ರುವೀಕರಣದ ವಿರುದ್ಧ ನೈಜ ಜಾತ್ಯತೀತತೆ ಎತ್ತಿ ಹಿಡಿಯುವ ಮತ್ತು ಜನಪರ ಆರ್ಥಿಕ ನೀತಿಗಳ ರಾಜಕಾರಣ ಮಾಡಬೇಕು. ಬಿಜೆಪಿಯ ಉಗ್ರ ಬಲಪಂಥೀಯತೆ ವಿರುದ್ಧ ನಡು–ಎಡ ರಾಜಕೀಯ ಜಾಗವನ್ನು ತುಂಬಿದರೆ ಕರ್ನಾಟಕದಲ್ಲೂ ಕೇಂದ್ರದಲ್ಲೂ ರಾಜಕೀಯ ಮುನ್ನಡೆ ಸಾಧಿಸಬಹುದು. ಮೋದಿ ಸರಕಾರ ಮತ್ತು ಬಿಜೆಪಿಯ ವೈಫಲ್ಯಗಳೇ ಬಂಡವಾಳವಾಗುತ್ತದೆ ಎಂದು ನಂಬಿ ಕೂತರೆ ಅಪಾಯ ಖಚಿತ. ●

ಕಂಪೆನಿ ಬೇಸಾಯವನ್ನು ವಿರೋಧಿಸಿ, ಬಡವರಿಗೆ ಜಮೀನು ನೀಡುವಂತೆ ಒತ್ತಾಯಿಸಿ

ಫೆ. 23: ರೈತರ ಬೃಹತ್ ವಿಧಾನಸೌಧ ಚಲೋ

ರಾಜ್ಯ ಸರಕಾರವು, ಈಚೆಗೆ ತನ್ನ ಮಂತ್ರಿ ಮಂಡಲದ ಸಭೆಯಲ್ಲಿ ಬೃಹತ್ ಬೆಂಗಳೂರು ಮತ್ತು ಇತರೇ ಮಹಾನಗರ ಪಾಲಿಕೆಗಳ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ, ಕಂಪನಿಗಳು ಕೃಷಿ ಉದ್ದಿಮೆಯಲ್ಲಿ ತೊಡಗಲು, ಅವಕಾಶ ನೀಡಲು ನಿರ್ಧರಿಸಿ, ವಿಧಾನ ಸಭಾ ಚುನಾವಣೆಯ ಹಿನ್ನೆಲೆಯಲ್ಲಿ, .ಆ ನಿರ್ಣಯವನ್ನು ಬಹಿರಂಗ ಪಡಿಸದೆ ಗುಪ್ತವಾಗಿರಿಸಿದೆ. ಅದೇ ರೀತಿ, ಕೇಂದ್ರ ಸರಕಾರದ " ಕೃಷಿ ಭೂಮಿ ಗೇಣಿ ಮಾದರಿ ಅಧಿನಿಯಮ–2016" ನ್ನು ರಾಜ್ಯದಲ್ಲಿ ಜಾರಿಗೊಳಿಸಿ, ಬೀಳು ಬಿದ್ದಿರುವ ಸುಮಾರು 50ಲಕ್ಷ ಎಕರೆ ಭೂ ಪ್ರದೇಶವನ್ನು ಕಂಪೆನಿಗಳ ಗುತ್ತಿಗೆ ಕೃಷಿಗೊಳಪಡಿಸಲು ಕ್ರಮ ವಹಿಸುತ್ತಿದೆ. ಈ ನೀತಿಗಳನ್ನು ವಿರೋಧಿಸಿ, ಕರ್ನಾಟಕ ಪ್ರಾಂತ ರೈತ ಸಂಘ (ಕೆ.ಪಿ.ಆರ್.ಎಸ್.) ರಾಜ್ಯ ಸಮಿತಿ ಫೆಬ್ರುವರಿ 23ರಂದು ವಿಧಾನ ಸೌಧ ಚಲೋಗೆ ಕರೆ ಕೊಟ್ಟಿದೆ. ಕಂಪನಿಗಳ ಬೇಸಾಯಕ್ಕೆ ಪ್ರತಿರೋಧ ಒಡ್ಡಲು, ಕೃಷಿ ಹಾಗೂ ರೈತರನ್ನು ರಕ್ಷಿಸಲು, ಬಗರ್ ಹುಕುಂ ಬಡ ಸಾಗುವಳಿದಾರರ ಮತ್ತು ದಲಿತರ ಭೂಮಿ ಹಕ್ಕಿಗಾಗಿ ಹೋರಾಡಲು ಈ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಕೆ.ಪಿ.ಆರ್.ಎಸ್. ರಾಜ್ಯ ಸಮಿತಿ ಪತ್ರಿಕಾ ಹೇಳಿಕೆಯಲ್ಲಿ ಹೇಳಿದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳು ರೈತ ವಿರೋಧಿಯಾಗಿ, ಕಾರ್ಪೋರೇಟ್ ಕಂಪನಿಗಳ ಕೈಗೆ ಬೇಸಾಯವನ್ನು ನೀಡುವ ಕೆಲಸದಲ್ಲಿ ತೊಡಗಿವೆ. ಕೇಂದ್ರ ಸರಕಾರ 2018ರ ಬಜೆಟ್‌ನಲ್ಲಿ ಕಂಪೆನಿ ಕೃಷಿಗೆ ಉತ್ತೇಜನ ನೀಡಲು, ದೇಶದ ಕೃಷಿ ಮಾರುಕಟ್ಟೆಗಳನ್ನು ಆನ್‌ಲೈನ್ ಮಾರುಕಟ್ಟೆಗಳಾಗಿ ಎತ್ತರಿಸಿ, ಜಾಗತಿಕ ಮಾರುಕಟ್ಟೆಯ ಜೊತೆ ಜೋಡಿಸಿದೆ. ಇದು ರೈತರ ದುಬಾರಿ ವೆಚ್ಚದ ಕೃಷಿ ಉತ್ಪನ್ನಗಳ ಜೊತೆ, ಕಡಿಮೆ ವೆಚ್ಚದ ಜಾಗತಿಕ ಕೃಷಿ ಉತ್ಪನ್ನಗಳ ನೇರ ಸ್ಪರ್ಧೆಗೆ ಅವಕಾಶ ನೀಡಿದೆ. ಅದೇ ರೀತಿ, ಡಾ. ಎಂ.ಎಸ್.ಸ್ವಾಮಿನಾಥನ್ ಕೃಷಿ ಅಯೋಗದ ಸಲಹೆಯಂತೆ, ಉತ್ಪಾದನಾ ವೆಚ್ಚಕ್ಕೆ ಶೇ 50ರಷ್ಟು ಲಾಭಾಂಶ ಸೇರಿಸಿ, ನಿಗದಿಸಿದ ಬೆಂಬಲ ಬೆಲೆ ಖಾತರಿಯಾಗಿ ದೊರೆಯುವಂತೆ, ಅದನ್ನು ಕಾನೂನನ್ನಾಗಿಸಿ, ರೈತರನ್ನು ನಷ್ಠದಿಂದ ಮೇಲೆತ್ತುವ ಬದಲು, ಹತ್ತಾರು ಕೂಲಿಕಾರರಿಗೆ, ಹಮಾಲರಿಗೆ ಉದ್ಯೋಗ ನೀಡುತ್ತಿರುವ ರೈತರಿಗೆ, ಕಂಪೆನಿ ಬೇಸಾಯದಲ್ಲಿ ಮತ್ತು ಅದರಾಚೆಗೆ ಉದ್ಯೋಗ ನೀಡುವುದಾಗಿ ಕೇಂದ್ರ ಸರಕಾರ ಮಾತನಾಡುತ್ತಿದೆ. ಆ ಮೂಲಕ ರೈತರನ್ನು ಬೇಸಾಯದಿಂದ ಹೊರದೂಡುವ ಹುನ್ನಾರ ನಡೆಸಿದೆ. ದೇಶದಾದ್ಯಂತ ನೀರಾವರಿ ಮತ್ತು ಸಾಲ ಸೌಲಭ್ಯ ದೊರೆಯದೇ, ರೈತರು ಬೀಳು ಬಿಟ್ಟ 10 ಕೋಟಿಗೂ ಅಧಿಕ ಎಕರೆ ಜಮೀನುಗಳನ್ನು ಅಗತ್ಯ ನೆರವು ನೀಡಿ ರೈತರಿಂದಲೇ ಅವುಗಳನ್ನು ಅಭಿವೃದ್ಧಿ ಪಡಿಸುವ ಯಾವ ಪ್ರಯತ್ನವನ್ನೂ ಸರಕಾರಗಳು ಮಾಡುತ್ತಿಲ್ಲ ಎಂದು ಕೆ.ಪಿ.ಆರ್.ಎಸ್ ಹೇಳಿಕೆಯಲ್ಲಿ ದೂರಿದೆ.

ಅದರ ಬದಲು, ಕಾರ್ಪೋರೇಟ್ ಕಂಪೆನಿಗಳು ಆ ಬೀಳು ಜಮೀನುಗಳನ್ನು ಗುತ್ತಿಗೆಗೆ ಪಡೆದು, ಬೇಸಾಯದಲ್ಲಿ ತೊಡಗಲು

ಪುಟ 5 ಕ್ಕೆ



ಉಡುಪಿ : ಸಮಗ್ರ ಕೃಷಿಕೂಲಿಕಾರ್ಮಿಕರ ಕಾನೂನಿಗೆ ಆಗ್ರಹಿಸಿ ಪ್ರತಿಭಟನೆ

ಕೇರಳ, ತ್ರಿಪುರ ಹಾಗೂ ತಮಿಳುನಾಡಿನ ಮಾದರಿಯಲ್ಲಿ ಸಮಗ್ರ ಕೃಷಿಕೂಲಿಕಾರರ ಕಾನೂನು ಅಂಗೀಕರಿಸುವಂತೆ ಒತ್ತಾಯಿಸಿ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಸಮಿತಿ ಮಣಿಪಾಲದ ಜಿಲ್ಲಾಧಿಕಾರಿ ಕಛೇರಿ ಎದುರು ಬೃಹತ್ ಪ್ರತಿಭಟನೆ ನಡೆಸಲಾಯಿತು. ರಾಜ್ಯದ ಕೃಷಿಕೂಲಿಕಾರರಿಗೆ ಯಾವುದೇ ಸೌಲಭ್ಯಗಳಿಲ್ಲದೇ ತೊಂದರೆ ಅನುಭವಿಸುತ್ತಿದ್ದಾರೆ. ರಾಜ್ಯದ ಮುಖ್ಯ ಮಂತ್ರಿ ಸಿದ್ದರಾಮಯ್ಯರವರು ಈ ಕಾರ್ಮಿಕರಿಗೆ ಕನಿಷ್ಠ ವೇತನ ಘೋಷಣೆ ಮಾಡಬೇಕು. ಇ.ಎಸ್.ಐ., ಭವಿಷ್ಯನಿಧಿ ಸೌಲಭ್ಯ ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳನ್ನು ಸಹ ಘೋಷಣೆ ಮಾಡಬೇಕು.



ಕಟ್ಟಡ ನಿರ್ಮಾಣ ಕಾರ್ಮಿಕರು, ಹಮಾಲಿಗಳು, ಬೀಡಿ ಕಾರ್ಮಿಕರು, ಮುಂತಾದ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಸರಕಾರದ ಕಲ್ಯಾಣ ನಿಧಿ ಸ್ಥಾಪಿಸಲಾಗಿದೆ. ಅದೇ ರೀತಿ ಕೃಷಿ ಕೂಲಿಕಾರರಿಗೆ ನಿಧಿ ಸ್ಥಾಪನೆ ಮಾಡಬೇಕು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಆಗ್ರಹಿಸಿದ್ದರು.

ಎಲ್ಲಾ ಕೃಷಿ ಕೂಲಿಕಾರರಿಗೆ ಯಾವುದೇ ಷರತ್ತು ವಿಧಿಸದೇ ಪಡಿತರ ಚೀಟಿ ನೀಡಬೇಕು. ಕಾರ್ಮಿಕರು ಹೆಚ್ಚಿನ ದುಡಿಮೆಗಾಗಿ ಉಪಕಸುಬು ಮಾಡಲು ಸಬ್ಸಿಡಿ ಸಾಲವನ್ನು ಶೇಕಡ 1ರ ಬಡ್ಡಿ ದರದಲ್ಲಿ ನೀಡಬೇಕು. ಉಚಿತ ವಿದ್ಯುತ್ ಸಂಪರ್ಕ ನೀಡಬೇಕು. 60 ವರ್ಷ ತುಂಬಿದ ಕಾರ್ಮಿಕರಿಗೆ ಮಾಸಿಕ ರೂ. 1000/- ನೀಡಬೇಕು. ವಲಸೆ ಕಾರ್ಮಿಕರಿಗೆ ಒಳ್ಳೆಯ ಪರಿಸರದಲ್ಲಿ ಮನೆ ನಿರ್ಮಿಸಿಕೊಡಬೇಕು ಎಂದು ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷ ಯು. ದಾಸಭಂಡಾರಿಯವರು ಹೋರಾಟಗಾರರನ್ನು ಉದ್ದೇಶಿಸಿ ಮಾತನಾಡುತ್ತಾ ಸರಕಾರವನ್ನು ಒತ್ತಾಯಿಸಿದರು.

ಬೇಡಿಕೆ ಈಡೇರುವಂತೆ ಪ್ರತಿಭಟನಾಕಾರರು ಘೋಷಣೆ ಕೂಗಿದ ಬಳಿಕ ಜಿಲ್ಲಾಧಿಕಾರಿ ಮೂಲಕ ಮುಖ್ಯ ಮಂತ್ರಿಯವರಿಗೆ ಮನವಿ ಸಲ್ಲಿಸಿದರು. ಸಂಘಟನೆಯ ಮುಖಂಡರಾದ ಕವಿರಾಜ್ ಎಸ್. ವಿಠಲ ಪೂಜಾರಿ, ರಾಮ ಕಾರ್ಕಡ, ನಾಗರತ್ನ ನಾಡ, ಪದ್ಮಾವತಿ ಶೆಟ್ಟಿ, ಉಮೇಶ್ ಕುಂದರ್, ನಳಿನಿ ಎಸ್. ರಾಜೀವ ಪಡುಕೋಣೆ, ರಮೇಶ್ ಗುಲ್ವಾಡಿ ಮೊದಲಾದವರು ನೇತೃತ್ವ ವಹಿಸಿದರು.

ಸಿಐಟಿಯುವಿನ ಮುಖಂಡರಾದ ಎಚ್. ನರಸಿಂಹ, ಸುರೇಶ್ ಕಲ್ಲಾಗರ, ಕಾಪು ಲಕ್ಷ್ಮಣ, ಕೃಷಿಕೂಲಿಕಾರರ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಸಮಾರೋಪದಲ್ಲಿ ಹೋರಾಟವನ್ನು ಬೆಂಬಲಿಸಿ, ಸಿಐಟಿಯುವಿನ ರಾಜ್ಯ ಮುಖಂಡ ಬಾಲಕೃಷ್ಣ ಶೆಟ್ಟಿ ಮಾತನಾಡಿದರು.

– **ವೆಂಕಟೇಶ ಕೋಣಿ**

ಕಾರವಾರ-ಬೆಂಗಳೂರು ರೈಲು ಪ್ರಯಾಣ ಅವಧಿ ಕಡಿತ : ಹೋರಾಟಕ್ಕೆ ಜಯ

ಕರಾವಳಿ ಜಿಲ್ಲೆಯ ಇಲ್ಲಿನ ಸಂಸದರ ನಿರ್ಲಕ್ಷತೆಯಿಂದಾಗಿ ಜನರು ರೈಲು ಸೇವೆಯಿಂದ ವಂಚಿತರಾಗಿದ್ದರು. ಜನರಿಗೆ ರೈಲು ಸೇವೆ ಒದಗಿಸುವಂತೆ ಸಿಪಿಎಂ ಪಕ್ಷ ಉಡುಪಿ ಜಿಲ್ಲೆಯಲ್ಲಿ ಕಳೆದ 4 ವರುಷಗಳಿಂದ ಹೋರಾಟ ನಡೆಸಿತ್ತು. ಕಾರವಾರದಿಂದ ಬೆಂಗಳೂರಿಗೆ ಚಲಿಸುವ ರೈಲಿನ ಪ್ರಯಾಣ ಅವಧಿ ಕಡಿತಗೊಳಿಸಲು, ಹಾಸನ ಕುಣಿಗಲ್ ಮಾರ್ಗವಾಗಿ ಮತ್ತೊಂದು ರಾತ್ರಿ ರೈಲು ಆರಂಭಿಸುವಂತೆ ಜಿಲ್ಲೆಯ 15ಸಾವಿರ ಜನರಿಂದ ಸಹಿ ಸಂಗ್ರಹಿಸಿ ಹುಬ್ಬಳ್ಳಿ ಜನರಲ್ ಮೇನೆಜರ್ ಮೂಲಕ ಕೇಂದ್ರಕ್ಕೆ ಮನವಿ ಮಾಡಲಾಗಿತ್ತು. ರೈಲು ಸ್ಟೇಷನ್ ಎದುರುಗಡೆ ಪ್ರತಿಭಟನೆಗಳು, ಧರಣಿಗಳು, ಚಲಿಸುವ ರೈಲುಗಳಲ್ಲಿ ಪ್ರಚಾರಾಂದೋಲನ ಹೀಗೆ ಹಲವಾರು ಹೋರಾಟಗಳ ನಂತರ ಫೆ.11, 2018ರಂದು ಪ್ರಯಾಣ ಅವಧಿ ಕಡಿತಗೊಳಿಸಿ ರೈಲು ಸಂಚಾರ ಆರಂಭಗೊಂಡಿರುವುದು ಹೋರಾಟಕೆ ಸಂದ ಜಯವಾಗಿದೆ. ಆದರೆ ಜಿಲ್ಲೆಯ ಜನರಿಗೆ ಮತ್ತೊಂದು ರೈಲು ಆರಂಭಿಸಲು ಹೋರಾಟ ಮುಂದುವರಿಸಬೇಕಾಗಿದೆ.


– **ಸುರೇಶ ಕಲಾಗರ**

ಕರಾವಳಿ

ಸುರತ್ಕಲ್ ಅಕ್ರಮ ಟೋಲ್ ಕೇಂದ್ರದ ರದ್ದತಿಗಾಗಿ ಮತ್ತೆ ಹೋರಾಟ

ಸುರತ್ಕಲ್ ನಲ್ಲಿ ಅಕ್ರಮ ಟೋಲ್ ಕೇಂದ್ರದ ರದ್ದತಿಗಾಗಿ ಡಿವೈಎಫ್ಐ ಹಲವು ಹೋರಾಟಗಳನ್ನು ನಡೆಸಿದೆ. ಈಗಿನ ಟೋಲ್ ಗುತ್ತಿಗೆ ಜೂನ್ ತಿಂಗಳಿಗೆ ಮುಗಿಯಲಿದ್ದು, ಆ ನಂತರ ಸುರತ್ಕಲ್ ಟೋಲ್ ಕೇಂದ್ರದಲ್ಲಿ ಸುಂಕ ಸಂಗ್ರಹ ನಿಲ್ಲಿಸುವುದಾಗಿ, ಈ ಕುರಿತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕೇಂದ್ರ ಕಚೇರಿಗೆ ಪ್ರಸ್ತಾಪ ಕಳುಹಿಸಿರುವುದಾಗಿ ಸ್ಥಳೀಯ ಅಧಿಕಾರಿಗಳು ಹೇಳಿಕೆ ನೀಡಿದ್ದರು. ಇದು ಕೇವಲ ಮಣ್ಣೆರೆಚುವ ತಂತ್ರ ಎಂದು ಡಿವೈಎಫ್ಐ ಅನುಮಾನ ವ್ಯಕ್ತಪಡಿಸಿತ್ತು. ಈಗ ಅನುಮಾನ ನಿಜವಾಗಿದೆ. ಟೋಲ್ ಕೇಂದ್ರದ ಸಮೀಪ ಹೆದ್ದಾರಿ ಪ್ರಾಧಿಕಾರ ರಿಫ್ರೆಷ್ ಮೆಂಟ್, ವಿಶ್ರಾಂತಿ ಕೊಠಡಿ, ಪಾರ್ಕಿಂಗ್ ಯಾರ್ಡ್ ಕಾಮಗಾರಿ ಶುರುಮಾಡಿದೆ. ಶಾಸಕ ಮೊಯ್ದಿನ್ ಬಾವ, ಲೋಕಸಭಾ ಸದಸ್ಯ ನಳಿನ್ ಕುಮಾರ್ ಕಟೀಲ್ ಈ ಕುರಿತು ಮೌನಕ್ಕೆ ಶರಣಾಗಿದ್ದಾರೆ. ಇದನ್ನು ಪ್ರತಿಭಟಿಸಿ ಹೋರಾಟ ತೀವ್ರಗೊಳಿಸದೆ ಜನತೆ ಅಕ್ರಮ ಟೋಲ್ ಗೇಟ್ ನಿಂದ ಮುಕ್ತಿ ಸಿಗದು. ಈ ನಿಟ್ಟಿನಲ್ಲಿ ಫೇ. 16ರಂದು ಸುರತ್ಕಲ್ ಟೋಲ್ ಪ್ಲಾಜಾದ ಬಳಿ ಪ್ರತಿಭಟನೆ ನಡೆಸಲಾಯಿತು.

ಕುಪ್ಪೆಪದವಿನಲ್ಲಿ ಹಕ್ಕುಪತ್ರಕ್ಕಾಗಿ ಧರಣಿ



ಹಕ್ಕುಪತ್ರಕ್ಕೆ ನಿಯಮ ಪ್ರಕಾರ ಹಣ ಕಟ್ಟಿ, ಹಕ್ಕು ಪತ್ರ ಸಿದ್ದವಾಗಿದ್ದರೂ, ಮಂಜೂರಾದ ಹಕ್ಕುಪತ್ರ ನೀಡದೆ ಸತಾಯಿಸುತ್ತಿರುವ ಸ್ಥಳೀಯ ಆಡಳಿತ, ರಾಜಕಾರಣದ ವಿರುದ್ದ ಕುಪ್ಪೆಪದವಿನ ಬಡವರು ನಾಡಕಚೇರಿ ಮುಂದೆ ಮಕ್ಕಳ ಸಹಿತ ಹಗಲು ರಾತ್ರಿ ಧರಣಿ ಕೂತಿದ್ದಾರೆ. ಹೆಣ್ಣುಮಕ್ಕಳ ಜೊತೆಗೆ ಪುಟಾಣಿ ಮಕ್ಕಳೂ ಬೀದಿಯಲ್ಲಿ ಕೂತಿದ್ದಾರೆ. ಹೆಣ್ಣುಮಕ್ಕಳು ಗಂಜಿ ಬೇಯಿಸುತ್ತಿದ್ದಾರೆ.

ಕೇಳಿಸಿದ್ದು

ಪ್ರಶ್ನಿಸಬೇಕಾದೆಡೆ ಪ್ರಶಂಸೆಗಿಳಿಯುವ ಪತ್ರಿಕೋದ್ಯಮ

ಇಡೀ ಜಗತ್ತೇ ಹೊಗಳುತ್ತಿರುವ, ಹಾಲಿವುಡ್ ನಿರ್ದೇಶಕ ಸ್ಟೀವನ್ ಸ್ಪೀಲ್ಬರ್ಗ್ ನಿರ್ದೇಶಿಸಿರುವ ಈ ಸಿನಿಮಾವನ್ನು ಸಂಸದರೊಬ್ಬರು ಹೊಗಳಿದ್ದು ವಿಚಿತ್ರವಾಗಿದೆ ಎಂದು ಮೇಲೆ ಹೇಳಿದ್ದು ಯಾಕೆ ಅಂತ ಕೇಳುತ್ತೀರಾ? ಇಲ್ಲಿದೆ ನೋಡಿ ಕಾರಣ. ಸದರಿ ಸಂಸತ್ ಸದಸ್ಯರು ನಡೆಸುವ ಮಾಧ್ಯಮ ವ್ಯವಹಾರಗಳಲ್ಲಿ ಒಂದು ಇಂಗ್ಲಿಷ್ ನ್ಯೂಸ್ ಚಾನೆಲ್ ಕೂಡಾ ಸೇರಿದೆ. ಅವರು ಸಹಪ್ರವರ್ತಕರಾಗಿರುವ ಈ ಚಾನೆಲ್ನ ಹೆಸರು 'ರಿಪಬ್ಲಿಕ್ ಟಿವಿ' ಅಂತ. 'ದ ಪೋಸ್ಟ್' ಯಾವ ಸಂದೇಶವನ್ನು ಸಾರುತ್ತಿದೆಯೋ ಅದಕ್ಕೆ ಸಂಪೂರ್ಣ ತದ್ವಿರುದ್ಧವಾದದ್ದನ್ನೇ ಮಾಡುತ್ತಾ ಬಂದಿದೆ ಈ ವಾರ್ತಾವಾಹಿನಿ.

ಎಂತಹ ಕಠಿಣ ಪರಿಸ್ಥಿತಿಯಲ್ಲೂ ಮಾಧ್ಯಮಗಳು ಆಳುವ ಸರ್ಕಾರವನ್ನು ಪ್ರಶ್ನಿಸುವ ವಿಚಾರದಲ್ಲಿ ರಾಜಿ ಮಾಡಿಕೊಳ್ಳಬಾರದು ಎನ್ನುವ ಸಂದೇಶವನ್ನು ಸಿನಿಮಾ ಸಾರಿದರೆ, ಸಂಸದರಟಿ.ವಿ.ಯು ಸರ್ಕಾರವನ್ನು ಪ್ರಶ್ನಿಸುವವರ ವಿರುದ್ಧವೇ ದೊಡ್ಡ ಧ್ವನಿಯಲ್ಲಿ ಅರಚುವುದನ್ನು ರೂಢಿಯಾಗಿಸಿಕೊಂಡು ಭಾರತದಲ್ಲಿ ಮಾಧ್ಯಮ ಧರ್ಮಕ್ಕೊಂದು ಹೊಸ ಭಾಷ್ಯ ಬರೆದಿದೆ. ಈ ಕಾರಣಕ್ಕೆ 'ದ ಪೋಸ್ಟ್' ಅನ್ನು ಉದ್ಯಮಪತಿ ಸಂಸದರು ಹೊಗಳಿದ್ದು ವಿಚಿತ್ರವಾಗಿದೆ ಅಂತ ಅನ್ನಿಸಿದ್ದು.

ಇದು, ಈ ಸಂಸದರಿಗೆ ಮತ್ತು ಅವರ ಟಿ.ವಿ. ಚಾನೆಲಿಗೆ ಮಾತ್ರ ಸೀಮಿತವಾದ ವಿಚಾರವಲ್ಲ. ಈ ಸಂಸದರು ದೊಡ್ಡ ಸಂಖ್ಯೆಯ ಭಾರತೀಯರ ಪತ್ರಿಕಾ ಮನೋಧರ್ಮದ ಪ್ರತಿನಿಧಿಯಂತೆ ಕಾಣುತ್ತಿದ್ದಾರೆ.

.. .. ..

ಮೂರೂವರೆ ವರ್ಷಗಳಲ್ಲಿ ಪ್ರಧಾನಮಂತ್ರಿಗಳು ಸಂದರ್ಶನ ನೀಡಿದ ಮೂರು ಟೆಲಿವಿಷನ್ ಸಂದರ್ಶನಗಳಲ್ಲಿ ('ಟೈಮ್ಸ್ ನೌ'ಗೆ ಅವರು ಹಿಂದೊಮ್ಮೆ ಸಂದರ್ಶನ ನೀಡಿದ್ದರು) ಪತ್ರಕರ್ತರು ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಕಾಳಜಿ ಇರುವ, ಸ್ವಾಭಿಮಾನದ ಲವಲೇಶವಾದರೂ ಇರುವ ಒಂದೇ ಒಂದು ಪ್ರಶ್ನೆಯನ್ನೂ ಕೇಳಲಿಲ್ಲ. 'ನಿಮಗೆ ದಣಿವಾಗುವುದಿಲ್ಲವೇ', 'ನಿಮ್ಮ ವಿರೋಧಿಗಳು ಅದ್ಯಾಕೆ ನಿಮ್ಮನ್ನು ಆ ಮಟ್ಟಿಗೆ ಟೀಕಿಸುತ್ತಿದ್ದಾರೆ'... ಇತ್ಯಾದಿ ಪ್ರಶ್ನೆಗಳ ಜತೆಗೆ ಪ್ರಧಾನಮಂತ್ರಿಗಳಿಗೆ ಏನು ಹೇಳಬೇಕಿತ್ತೋ ಅದನ್ನು ಹೇಳಲು ಅನುವಾಗುವಂತಹ ಪ್ರಶ್ನೆಗಳನ್ನೇ ಕೇಳುತ್ತಾ ಸಾಗಿದ ಸಂದರ್ಶನವು ಭಾರತೀಯ ಮಾಧ್ಯಮೋದ್ಯಮ ಕುಸಿದ ಆಳಕ್ಕೆ ಕನ್ನಡಿ ಹಿಡಿಯುತ್ತದೆ. ಪ್ರಧಾನಮಂತ್ರಿಗಳ ಸಂದರ್ಶನವನ್ನು ಓರ್ವ ಸಿನಿಮಾ ನಟನ ಸಂದರ್ಶನದಂತೆ ಈ ಎರಡು ಟಿ.ವಿ. ಚಾನೆಲಿನವರು ಮಾಡಿಮುಗಿಸಿದರು.

.. ..

ಎಲ್ಲಾ ಪಕ್ಷಗಳ ಆಳ್ವಿಕೆಯಲ್ಲೂ, ಎಲ್ಲಾ ಕಾಲದಲ್ಲೂ, ಎಲ್ಲಾ ದೇಶಗಳಲ್ಲೂ ಮಾಧ್ಯಮ ಸ್ವಾತಂತ್ರ್ಯವನ್ನು ಹರಣ ಮಾಡಲು ಸರ್ಕಾರಗಳು ಹವಣಿಸುತ್ತಿವೆ. ಅದರಲ್ಲಿ ಹೊಸತೇನೂ ಇಲ್ಲ. ಅಧಿಕಾರಸ್ಥರ ಈ ಪ್ರಯತ್ನಗಳನ್ನು ಮಾಧ್ಯಮದ ಮಂದಿ ಯಾವ ರೀತಿಯಲ್ಲಿ ಸ್ವೀಕರಿಸಿದ್ದಾರೆ ಮತ್ತು ಅದಕ್ಕೆ ಎಂತಹ ಪ್ರತಿರೋಧಗಳನ್ನು ಒಡ್ಡಿದ್ದಾರೆ ಎನ್ನುವುದು ಆಯಾ ಕಾಲದ ಮಾಧ್ಯಮಗಳ ಮತ್ತು ಜನತಂತ್ರದ ಸತ್ವ ಏನು ಎನ್ನುವುದನ್ನು ತಿಳಿಸುತ್ತವೆ.

ಸರ್ಕಾರಗಳು ಮಾಧ್ಯಮ ವಿರೋಧಿಯಾಗಿರುತ್ತವೆ ಎನ್ನುವುದು ಸಾರ್ವಕಾಲಿಕ ಸತ್ಯ. ಮಾಧ್ಯಮವಿರೋಧಿ ಸರ್ಕಾರಗಳ ಜತೆ ಮಾಧ್ಯಮಗಳು ಹೊಂದಾಣಿಕೆ ಮಾಡಿಕೊಂಡು ಬದುಕುತ್ತಿವೆ ಎನ್ನುವುದು ಆಧುನಿಕ ಭಾರತದ ಸತ್ಯ.

– ಎ. ನಾರಾಯಣ (ಪ್ರಜಾವಾಣಿ ಫೆ. 13)



ಭೂಮಿಗೆ ಬೆಲೆ ಇದೆ, ರೈತನಿಗಿಲ್ಲ: ರೈ

ರೈತರ ಸರಣಿ ಆತ್ಮಹತ್ಯೆ ನಡೆಯುತ್ತಿದೆ. ಅವು ಆತ್ಮಹತ್ಯೆಗಳಲ್ಲ. ಕೊಲೆಗಳು. ನಮ್ಮಲ್ಲಿ ಭೂಮಿಗೆ ಬೆಲೆ ಇದೆ, ರೈತನಿಗಿಲ್ಲ. ಅವರು ಬೆಳೆದ ಬೆಳೆಗೆ ಬೆಲೆ ಇಲ್ಲ. ನಮ್ಮನ್ನು ಓಟು ಕೇಳುವವರು ಸಂವಿಧಾನವನ್ನೇ ಬದಲಾಯಿಸುತ್ತೇನೆ ಅಂತಾರೆ. ಇವರೇನು ಹಿಟ್ಲರನ ಮರಿಮಕ್ಕಳೇ ಎಂದು ಖಾರವಾಗಿ ಪ್ರಶ್ನಿಸಿದವರು ಖ್ಯಾತ ಬಹುಭಾಷಾ ನಟ ಪ್ರಕಾಶ್ ರೈ. ಅವರು ಹಗರಿಬೊಮ್ಮನಹಳ್ಳಿಯಲ್ಲಿ ಸುಯೋಧನ ಪ್ರಕಾಶನ, ಕರ್ನಾಟಕ ಲೇಖಕಿಯರ ಸಂಘ, ಸೌಹಾರ್ದ ಕರ್ಣಾಟಕ ಸಹಯೋಗದೊಂದಿಗೆ ಆಯೋಜಿಸಿದ್ದ "ಬಹುಮುಖಿ ಭಾರತ ಮತ್ತು ಭವಿಷ್ಯತ್ತು" ಎಂದ ಸಂವಾದವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸಾಹಿತಿ ಸುಧಾ ಚಿದಾನಂದಗೌಡ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ದೇವದಾಸಿ ವಿಮೋಚನಾ ಸಂಘದ ಅಧ್ಯಕ್ಷರಾದ ಮಾಳಮ್ಮ ಮುಂತಾದವರು ಸಂವಾದದಲ್ಲಿ ಭಾಗವಹಿಸಿದ್ದರು. ●

ಫೆ. 23: ರೈತರ ಬೃಹತ್ ವಿಧಾನಸೌಧ ಚಲೋ..... ಪುಟ 3 ರಿಂದ

ಅನುಕೂಲವಾಗುವಂತೆ "ಕೃಷಿ ಭೂಮಿ ಗೇಣಿ ಮಾದರಿ ಅದಿ ನಿಯಮ–2016" ನ್ನು ಅಂಗೀಕರಿಸಿದೆ. ಇದಲ್ಲದೇ, ಅದಾಗಲೇ ದೇಶದಾದ್ಯಂತ 10 ಕೈಗಾರಿಕಾ ಕಾರಿಡಾರ್‌ಗಳ ಮತ್ತು ಮೂಲ ಸೌಕರ್ಯಗಳ ನಿರ್ಮಾಣದ ಹೆಸರಿನಲ್ಲಿ 2020ರೊಳಗೆ ಸುಮಾರು 20 ಕೋಟಿಗೂ ಅಧಿಕ ಎಕರೆಗಳಷ್ಟು ಪ್ರದೇಶವನ್ನು ಬಲವಂತದ ಭೂಸ್ವಾಧೀನಕ್ಕೊಳಪಡಿಸಿ, ಕೃಷಿ ಭೂಮಿಯನ್ನು ವ್ಯಾಪಕವಾಗಿ ಕಡಿತಕ್ಕೊಳಪಡಿಸಲು ಯೋಜಿಸಿದೆ. ಬೃಹತ್ ಬೆಂಗಳೂರು ಮತ್ತು ಇತರೇ ಮಹಾನಗರ ಪಾಲಿಕೆಗಳ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ, ಕಂಪನಿಗಳು ಕೃಷಿ ಉದ್ದಿಮೆಯಲ್ಲಿ ತೊಡಗಲು, ಅವಕಾಶ ನೀಡುವ ರಾಜ್ಯ ಸರಕಾರದ ಗುಪ್ತ ನಿರ್ಣಯದ ಉದ್ದೇಶ 1) ನಗರ ಪ್ರದೇಶಗಳ ಗ್ರಾಹಕರಿಗೆ ಅಗತ್ಯವಾದ ತರಕಾರಿ ಮತ್ತಿತರೇ ಆಹಾರ ವಸ್ತುಗಳನ್ನು ಬೆಳೆಯುವುದು 2) ಇಲ್ಲಿರುವ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಬಳಸಿಕೊಂಡು ವಿದೇಶಗಳಿಗೆ ಬೇಕಾದ ಹಣ್ಣು–ಹೂಗಳನ್ನು ಬೆಳೆಯುವುದು ಆಗಿದೆ. ಅದೇ ರೀತಿ, ಬೀಳು ಬಿದ್ದಿರುವ ಸುಮಾರು 50ಲಕ್ಷ ಎಕರೆ ಭೂ ಪ್ರದೇಶವನ್ನು ಕಂಪೆನಿಗಳ ಗುತ್ತಿಗೆ ಕೃಷಿಗೊಳಪಡಿಸಲು, ಕೇಂದ್ರ ಸರಕಾರದ "ಕೃಷಿ ಭೂಮಿ ಗೇಣಿ ಮಾದರಿ ಅಧಿನಿಯಮ–2016" ನ್ನು ರಾಜ್ಯದಲ್ಲಿ ಜಾರಿಗೊಳಿಸಿ, ಕ್ರಮವಹಿಸುತ್ತಿದೆ, ಎಂದು ಕೆ.ಪಿ.ಆರ್.ಎಸ್ ಆಪಾದಿಸಿದೆ.

ಈ ಎಲ್ಲವೂ ಪಕ್ಕಾ ರೈತರು, ಕೂಲಿಕಾರರು ಹಾಗೂ ಗ್ರಾಮೀಣ ಜನತೆಯ ಅಭಿವೃದ್ದಿ ವಿರೋಧಿ ನಡೆಗಳಾಗಿವೆ. ಇವುಗಳೆಲ್ಲಾ ನಮ್ಮ ವ್ಯವಸಾಯವನ್ನು ಸರ್ವ ನಾಶ ಮಾಡಿ ಹೊಸಕಿ ಹಾಕಲಿವೆ. ಗ್ರಾಮೀಣ ಬಡವರನ್ನು ಬೀದಿಗೆ ತಳ್ಳಲಿವೆ. ಕಂಪೆನಿಗಳ ಕೃಷಿಯಲ್ಲಿ ಉದ್ಯೋಗವೆಂಬುದು ಕೇವಲ ಬೂಟಾಟಿಕೆಯಾಗಿದೆ. ಎಲ್ಲ ಉದ್ಯೋಗಗಳನ್ನು ಆಧುನೀಕರಣ ನುಂಗಿರುತ್ತದೆ. ಇವುಗಳು ಆರಂಭದಲ್ಲಿ, ಒಂದು ಕಡೆ, ನಗರ ಪ್ರದೇಶಗಳ ಜನತೆಗೆ ತರಕಾರಿ ಮತ್ತಿತರೇ ಬೆಳೆಗಳನ್ನು ಬೆಳೆಯುತ್ತಿದ್ದ ರಾಜ್ಯದ ದಶಲಕ್ಷಾಂತರ ರೈತರಿಗೆ, ಗ್ರಾಹಕ ಮಾರುಕಟ್ಟೆ ದೊರೆಯದಂತೆ ನಿರ್ಬಂಧಿಸಿ, ತೀವ್ರ ನಷ್ಟಕ್ಕೀಡು ಮಾಡಲಿವೆ. ಆ ಮೂಲಕ ಕಂಪೆನಿಗಳ ಗುತ್ತಿಗೆ ಬೇಸಾಯಕ್ಕೆ ಇಲ್ಲವೇ, ಕಂಪೆನಿಗಳಿಗೆ ಇಲ್ಲವೇ ಸಾಲ ಕೊಟ್ಟವನಿಗೆ ಬೇಕಾ ಬಿಟ್ಟಿ ದರಕ್ಕೆ ಜಮೀನುಗಳನ್ನು ಮಾರಾಟ ಮಾಡುವಂತೆ ಒತ್ತಾಯಿಸಲಿವೆ. ಮತ್ತೊಂದು ಕಡೆ, ಇವು ನಗರ ಹಾಗೂ ಗ್ರಾಮೀಣ ಪ್ರದೇಶದ ಸರಕಾರಿ ಜಮೀನುಗಳ ಸಾಗುವಳಿಯಲ್ಲಿ ತೊಡಗಿರುವ 19ಲಕ್ಷ ಬಡವರಿಗೆ ಹಕ್ಕುಪತ್ರ ನಿರಾಕರಿಸಲಿವೆ, ಇವರೆಲ್ಲರನ್ನು ಭೂಗಳ್ಳರೆಂದು ಜರೆದು, ಬೆದರಿಸಿ ಒಕ್ಕಲೆಬ್ಬಿಸಿ, ಇವರ 40 ಲಕ್ಷ ಎಕರೆ ಭೂ ಪ್ರದೇಶಗಳನ್ನು ಕಂಪೆನಿ ಕೃಷಿಗೊಳಪಡಿಸುವ ಹುನ್ನಾರವು ಇದರಲ್ಲಿ ಇಣುಕುತ್ತಿದೆ. ಅದೇ ರೀತಿ, ಇದರಿಂದಾಗಿ, ಶತ–ಶತಮಾನಗಳಿಂದ ಜಮೀನು ಹೊಂದುವ ಕನಸು ಕಾಣುತ್ತಿರುವ ದಲಿತರಿಗೆ ಜಮೀನು ಪಡೆಯುವುದು ಕನಸಾಗಿಯೇ ಉಳಿಯಲಿದೆ, ಎಂದು ಪತ್ರಿಕಾ ಹೇಳಿಕೆಯಲ್ಲಿ ಎಚ್ಚರಿಸಲಾಗಿದೆ.

ಹಕ್ಕೊತ್ತಾಯಗಳು :

1. ಕಂಪೆನಿಯ ಕೃಷಿಗೆ ಮತ್ತು ಗುತ್ತಿಗೆ ಕೃಷಿಗೆ ಅವಕಾಶಗಳನ್ನು ನೀಡಬಾರದು.
2. ಆನ್ ಲೈನ್ ಮಾರುಕಟ್ಟೆಯಲ್ಲಿ, ಸರಕಾರಿ ಮಾರುಕಟ್ಟೆ ಏಜೆನ್ಸಿಗಳು 24*7 ಸಮಯ ಕೃಷಿ ಉತ್ಪನ್ನಗಳ ವೆಚ್ಚಕ್ಕೆ ಶೇ 50ಲಾಬಾಂಶ ಸೇರಿದ ಬೆಂಬಲಬೆಲೆಗೆ ಖರೀದಿಸುವಂತೆ ಅಗತ್ಯ ಕ್ರಮವಹಿಸಬೇಕು.
3. ನಗರ ಹಾಗೂ ಗ್ರಾಮೀಣ ಪ್ರದೇಶದ ಎಲ್ಲ ರೀತಿಯ ಬಗರ್ ಹುಕುಂ ಬಡ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಲು ಭೂಕಂದಾಯ ಹಾಗೂ ಭೂಕಬಳಿಕೆ ನಿಷೇಧ ಕಾನೂನುಗಳಿಗೆ ಅಗತ್ಯ ತಿದ್ದುಪಡಿಗಳನ್ನು ತರಬೇಕು.
4. ಬೇಸಾಯದ ಅಪೇಕ್ಷೆ ಹೊಂದಿರುವ ಎಲ್ಲಾ ಪರಿಶಿಷ್ಠ ಜಾತಿ ಹಾಗೂ ಪಂಗಡದ ಜನತೆಗೆ ತಲಾ ಐದು ಎಕರೆ ಜಮೀನು ಒದಗಿಸಲು, ಪ್ರತಿ ವರ್ಷ ಕನಿಷ್ಠ 50 ಸಾವಿರ ಎಕರೆ ವಿತರಿಸಲು ಕ್ರಮವಹಿಸಬೇಕು. ಇದಕ್ಕಾಗಿ ಮತ್ತು ಅಭಿವೃದ್ದಿಗಾಗಿ ಅವರ ಅನುದಾನದ ಶೇ 30ರಷ್ಟು ಹಣವನ್ನು ಮೀಸಲಿಡಬೇಕು. ಅದೇ ರೀತಿ, ಇದೇ ಮಾದರಿಯಲ್ಲಿ, ಇತರೇ ಜನ ಸಮುದಾಯಗಳು ಬೇಸಾಯದಲ್ಲಿ ತೊಡಗಲು ಅಪೇಕ್ಷಿಸುವ ಜನತೆಗೆ ಜಮೀನು ಒದಗಿಸಬೇಕು.
5. ದಲಿತರು ಹಾಗೂ ಇತರೇ ಬಡವರಿಗೆ ಬದುಕು ಕಟ್ಟಿಕೊಳ್ಳಲು ತಲಾ 80*80 ಚದರ ಅಡಿ ಅಳತೆಯುಳ್ಳ ಹಿತ್ತಲು ಹಾಗೂ ಶೌಚಾಲಯ ಸಹಿತ ಕನಿಷ್ಟ ಅಗತ್ಯಗಳಿರುವ, 05 ಲಕ್ಷ ರೂಗಳ ಉಚಿತ ಮನೆಯೊಂದಿಗೆ, ಹಿತ್ತಲಿನಲ್ಲಿ ಪಶುಪಾಲನೆ, ತರಕಾರಿ, ಹಣ್ಣು ಬೆಳೆಯಲು ಅಗತ್ಯ ನೆರವನ್ನು ಒದಗಿಸಬೇಕು. ಇದಕ್ಕಾಗಿ ಭೂಸ್ವಾಧೀನ ಮಾಡಬೇಕು.
6. ಬಡವರು, ಕೂಲಿಕಾರರು, ಕಸುಬುದಾರರೂ, ದಲಿತರು ಹಾಗೂ ಮಹಿಳೆಯರ ವಿರೋಧಿಗಳಾದ ಭೂಸ್ವಾಧೀನ ಆದೇಶ–2015 ಮತ್ತು ಭೂ ಸುಧಾರಣಾ ತಿದ್ದುಪಡಿ ಕಾಯ್ದೆ–2015 ಗಳನ್ನು ತಕ್ಷಣವೇ ಹಿಂಪಡೆಯಬೇಕು.
7. ಶ್ರೀ ಏ.ಟಿ. ರಾಮಸ್ವಾಮಿ ನೇತೃತ್ವದ ಸದನ ಸಮಿತಿ ಗುರುತಿಸಿದ ಬೆಂಗಳೂರು ನಗರದ ಎರಡು ಲಕ್ಷಕೋಟಿ ರೂ ಬೆಲೆಯ 36,000 ಎಕರೆ ಭೂಕಬಳಿಕೆ ಮಾಡಲಾದವರ ಮತ್ತು ಶಾಮೀಲಾದ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಬೇಕು. ತಕ್ಷಣವೇ ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು.
8. ಶ್ರೀ ಟಿ. ಬಿ. ಜಯಚಂದ್ರ ನೇತ್ರತ್ವದ ಸದನ ಸಮಿತಿ ವರದಿಯಂತೆ ಕೂಡಲೇ ನೈಸ್ ಕಂಪೆನಿ ಜೊತೆಗಿನ ಒಪ್ಪಂದಗಳನ್ನು ರದ್ದು ಪಡಿಸಬೇಕು ಮತ್ತು ಕಂಪೆನಿಯ ಅಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಅದರ ಮೇಲೆ ಮತ್ತು ಶಾಮೀಲಾದ ಅಧಿಕಾರಿಗಳ ಮೇಲೂ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಬೇಕು.
9. ರಾಜ್ಯದಾದ್ಯಂತ ಕೈಗಾರಿಕಾಭಿವೃದ್ದಿ ಹೆಸರಿನಲ್ಲಿ ಬಲವಂತವಾಗಿ ಸ್ವಾಧೀನ ಪಡಿಸಿಕೊಂಡ ಲಕ್ಷಾಂತರ ಎಕರೆ ಜಮೀನಿನಲ್ಲಿ ಭೂ ಸ್ವಾಧೀನ ಕಾಯ್ದೆ – 2013ರಂತೆ ಐದು ವರ್ಷದೊಳಗೆ ಯಾವುದೇ ಕೈಗಾರಿಕೆಗಳು ನಿರ್ಮಾಣ ಮಾಡಲಾಗದ ಪ್ರದೇಶಗಳನ್ನು ಮೂಲ ರೈತರಿಗೆ ವಾಪಾಸು ನೀಡಬೇಕು.
10. ಬಳ್ಳಾರಿ ಜಿಲ್ಲೆಯ ಕುಡಿತೆನಿ ಪ್ರದೇಶದ ಮಿಥ್ಥಲ್/ಭ್ರಾಹ್ಮಿಣಿ ಕಂಪೆನಿಗಳಿಗಾಗಿ ಬಲವಂತವಾಗಿ ಸ್ವಾಧೀನ ಪಡಿಸಿಕೊಳ್ಳಲಾದ ಜಮೀನುಗಳ ಭೂ ಬೆಲೆಯಲ್ಲಾದ ವಂಚನೆಯನ್ನು ನ್ಯಾಯಾಂಗ ತನಿಖೆಗೊಳಪಡಿಸಿಬೇಕು. 10 ವರ್ಷಗಳಾದರೂ ಕೈಗಾರಿಕೆ ನಿರ್ಮಿಸಿದಿರುವುದರಿಂದ ತಕ್ಷಣವೇ ಜಮೀನುಗಳನ್ನು ರೈತರಿಗೆ ಹಿಂದಿರುಗಿಸಬೇಕು ಇಲ್ಲವೇ ವಶ ಪಡಿಸಿಕೊಂಡಂದಿನಿಂದ ಪ್ರತಿ ತಿಂಗಳ 20,000 ರೂಗಳಂತೆ ಉದ್ಯೋಗ ನಷ್ಟ ಪರಿಹಾರ ನೀಡಬೇಕು.
11. ರೈತರು, ಕೂಲಿಕಾರರ ಎಲ್ಲಾ ಖಾಸಗೀ ಸಾಲವೂ ಸೇರಿದಂತೆ ಎಲ್ಲ ಸಾಲವನ್ನು ಮನ್ನಾ ಮಾಡಬೇಕು. ಕೇರಳದ ಮಾದರಿಯಲ್ಲಿ ಋಣಮುಕ್ತ ಕಾಯ್ದೆಯನ್ನು ಜಾರಿಗೊಳಿಸಬೇಕು.



ಮನೆ ನಿವೇಶನ ಪಟ್ಟಾ ಮತ್ತಿತರ ಬೇಡಿಕೆಗಳಿಗೆ ಆಗ್ರಹ

ಫೆ. 12 ರಂದು ಬಳ್ಳಾರಿಯಲ್ಲಿ ಮನೆ ನಿವೇಶನ ಪಟ್ಟಾ ಮತ್ತಿತರ ಬೇಡಿಕೆಗಳಿಗೆ ಆಗ್ರಹಿಸಿ ದಲಿತ ಹಕ್ಕುಗಳ ಸಮಿತಿ ಮತ್ತು ದೇವದಾಸಿ ವಿಮೋಚನಾ ಸಂಘದ ಜಿಲ್ಲಾ ಘಟಕಗಳು ಪ್ರತಿಭಟನಾ ಮೆರವಣಿಗೆ ಮತ್ತು ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿದವು. ಮನೆ ನಿವೇಶನ ಪಟ್ಟಾ, ಉದ್ಯೋಗ, ನಿರುದ್ಯೋಗ ಭತ್ಯೆ, ಎಸ್.ಟಿ. ಮೀಸಲಾತಿ ಶೇ. 7.5ಕ್ಕೆ ಹೆಚ್ಚಳ, ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ, ಜಾತಿ ತಾರತಮ್ಯ ಮತ್ತು ದೌರ್ಜನ್ಯಗಳ ವಿರುದ್ಧ ಕಟು ಕ್ರಮ, ಬಡ್ತಿ ಮೀಸಲಾತಿ ಮುಂದುವರಿಕೆ, ದಲಿತರ ಸಮಗ್ರ ಅಭಿವೃದ್ಧಿಗೆ ರಾಜ್ಯ ಬಜಟಿನಲ್ಲಿ ಶೇ. 30 ಹಣ ಮೀಸಲಿಡುವುದು – ಹಕ್ಕೊತ್ತಾಯಗಳಾಗಿದ್ದವು.

ಜತೆಗೆ, ದೇವದಾಸಿ ಮಹಿಳೆ ಮತ್ತು ಕುಟುಂಬಗಳ ಹಕ್ಕೊತ್ತಾಯಗಳ ಬಗೆಗೂ ಮನವಿ ಪತ್ರ ಸಲ್ಲಿಸಲಾಯಿತು. ದೇವದಾಸಿ ಮಹಿಳೆಯರ ಮತ್ತು ಕುಟುಂಬದ ರಾಜ್ಯವ್ಯಾಪಿ ಜನಗಣತಿ, ದೇವದಾಸಿ ಮಹಿಳೆಯರಿಗೆ ಮತ್ತು ಈ ಕುಟುಂಬಗಳ ಪರಿತ್ಯಕ್ತ ಮಹಿಳೆಯರಿಗೆ ಮಾಸಿಕ ಸಹಾಯಧನವನ್ನು ರೂ. 3000 ಕ್ಕೆ ಹೆಚ್ಚಿಸುವುದು, ದೇವದಾಸಿ ಪದ್ಧತಿ ನಿಷೇಧ ಕಾಯಿದೆಗೆ ತಿದ್ದು ಪಡಿ, ರೇಗಾದಲ್ಲಿ ಕನಿಷ್ಟ 200 ದಿನಗಳ ಕೆಲಸ ಒದಗಿಸುವುದು ಮುಂತಾದ ಹಕ್ಕೊತ್ತಾಯಗಳಿದ್ದ ಮನವಿಯನ್ನೂ ಜಿಲ್ಲಾಧಿಕಾರಿಗೆ ನೀಡಲಾಯಿತು. ■

ದ.ಕ.ಜಿಲ್ಲಾ ಹಂಚಿನ ಕಾರ್ಮಿಕರ ಸಂಘದ ಮಹಾಸಭೆ

ದ.ಕ.ಜಿಲ್ಲಾ ಟೈಲ್ ವರ್ಕರ್ಸ್ ಯೂನಿಯನ್ ಹಿಂದಿನ ಅವಿಭಜಿತ ದ.ಕ.ಜಿಲ್ಲೆಯಲ್ಲಿ ಬಲಿಷ್ಠವಾದ ಕಾರ್ಮಿಕ ಸಂಘಟನೆಯಾಗಿತ್ತು. 1998 ರಲ್ಲಿ ಜಿಲ್ಲೆ ಉಡುಪಿ ಮತ್ತು ದ.ಕ.ಎಂದು ಎರಡಾಗಿ ವಿಭಜನೆಯಾಗಿರುವ ವೇಳೆಗೆ ಮಂಗಳೂರು ಭಾಗದಲ್ಲಿದ್ದ ಹೆಚ್ಚಿನ ಹಂಚಿನ ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದವು. ಈಗ ದ.ಕ.ಜಿಲ್ಲೆಯಲ್ಲಿ ಬೆರಳೆಣಿಕೆಯ ಹಂಚಿನ ಕಾರ್ಖಾನೆಗಳಿವೆ. ಸಿಐಟಿಯು ನೇತೃತ್ವದ ದ.ಕ.ಜಿಲ್ಲಾ ಟೈಲ್ ವರ್ಕರ್ಸ್ ಯೂನಿಯನ್ನಿನ ಕಚೇರಿ ಹಾಗೂ ಸಭಾಂಗಣಗಳು ಇಂದಿಗೂ ಜಿಲ್ಲೆಯಲ್ಲಿ ಸಿಪಿಐ(ಎಂ), ಸಿಐಟಿಯು ಹಾಗೂ ಇತರ ಪ್ರಗತಿಪರ ಚಳುವಳಿಗಳ ಕೇಂದ್ರಸ್ಥಾನವಾಗಿದೆ. ಯೂನಿಯನ್ನಿನ ಅಧ್ಯಕ್ಷರಾಗಿದ್ದ ಹಿರಿಯ ಕಾರ್ಮಿಕ ಮುಂದಾಳು ಬಿ.ಮಾಧವರವರು ಕಳೆದ ನಾಲ್ಕು ವರ್ಷಗಳಿಂದ ಅನಾರೋಗ್ಯದಿಂದ ಇರುವ ಹಿನ್ನೆಲೆಯಲ್ಲಿ ಯೂನಿಯನ್ನಿನ ಚಟುವಟಿಕೆಗಳು ಕಡಿಮೆಯಾಗಿದ್ದವು.

ಫೆಬ್ರವರಿ 11 ರಂದು ಗುರುಪುರ ಕೈಕಂಭದ ಸಿಐಟಿಯು ಕಚೇರಿಯಲ್ಲಿ ಹಂಚಿನ ಕಾರ್ಮಿಕರ ದ.ಕ.ಜಿಲ್ಲಾ ಸಂಘದ ಮಹಾಸಭೆ ನಡೆದು ಹಂಚಿನ ಉದ್ಯಮದ ಸ್ಥಿತಿಗತಿ, ಹಂಚಿನ ಕಾರ್ಖಾನೆಗಳ ಕಾರ್ಮಿಕರ ಪ್ರಶ್ನೆಗಳನ್ನು ಹಾಗೂ ಸಂಘಟನೆಯನ್ನು ಬಲಪಡಿಸುವ ಬಗ್ಗೆ ಚರ್ಚಿಸಲಾಯಿತು. ಮಹಾಸಭೆಯ ಮುಂದಿನ ಸಾಲಿಗೆ ಸಂಘದ ಅಧ್ಯಕ್ಷರಾಗಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿಯವರನ್ನು ಆಯ್ಕೆ ಮಾಡಿದಲ್ಲದೆ ಕಾರ್ಯದರ್ಶಿಯಾಗಿ ಹಿರಿಯ ಕಾರ್ಮಿಕ ಮುಖಂಡ ಕೆ.ಆರ್.ಶ್ರೀಯಾನ್ ಅವರನ್ನು ಆಯ್ಕೆ ಮಾಡಿರುತ್ತದೆ. ಖಜಾಂಚಿಯಾಗಿ ಜಯರಾಮ ಮಣಿಯಾಣಿ ಅವರು ಆಯ್ಕೆಯಾಗಿರುತ್ತಾರೆ.

– ವಾಸುದೇವ ಉಚ್ಚಿಲ

ಅತಿಥಿ ಅಂಕಣ



ಡಾ. ವಿನಯಾ ಒಕ್ಕುಂದ

ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳಿಗೂ, ಕೋಮುವಾದದ ತೀವ್ರ ಬೆಳವಣಿಗೆಗೂ ಇರುವ ಅಂತಃಸಂಬಂಧವನ್ನು ನಿರ್ಲಕ್ಷಿಸಬಾರದು. ಚರಿತ್ರೆಯುದ್ದಕ್ಕೂ ಹೆಣ್ಣುಗಳು ಭೀಕರ ಯಾತನೆಗೆ ಒಳಗಾಗಿದ್ದು ಇಂಥ ಕಾರಣಗಳಿಗಾಗಿಯೇ. ಅಷ್ಟೇ ಅಲ್ಲದೇ ಕೋಮುವಾದ ಹೆಣ್ಣುಗಳ ಮನಸ್ಸನ್ನು ತನ್ನ ಫ್ರೀಝರ್ ಆಗಿಸಿಕೊಂಡು ಜೀವಂತವಾಗಿರಲು ಹಪಾಹಪಿಸುತ್ತದೆ. ಇದರ ಪರಿಣಾಮವಾಗಿ ಆಧುನಿಕ ಹೆಣ್ಣು, ಫ್ಯಾಶನ್ ಮಾರುಕಟ್ಟೆಯ ಅಗತ್ಯವನ್ನು ಪೂರೈಸುವ; ಮೂಲಭೂತವಾದವನ್ನು ಬೆಳೆಸುವ ಒಡಕು ಬಿಂಬವಾಗುತ್ತಿದ್ದಾಳೆ. ಸ್ವಂತಿಕೆಯನ್ನು ಕಳೆದುಕೊಂಡಿದ್ದಾಳೆ. ಅವಳ ಕಾಲುಗಳಲ್ಲೀಗ ಕೋಳವಿಲ್ಲ. ಅದೀಗ ನರವ್ಯೂಹಕ್ಕೇ ಇಂಜೆಕ್ಟ್ ಆಗಿದೆ. ಆಧುನಿಕತೆಯ ಅವಕಾಶಗಳು ಒಳಗೊಳಗೇ ಬೇರುಕೊಯ್ವ, ಲೋಕದೆದುರು ನೀರು ಹೊಯ್ವ– ಎಂಬ ಸ್ಥಿತಿಯನ್ನು ತಂದಿವೆ. ಈ ಸಂಕೀರ್ಣ ಸಂದರ್ಭದಲ್ಲಿ ಸುಪ್ರೀಂ ಕೋರ್ಟು ಕೊಟ್ಟ ತೀರ್ಮಾನ ಅತ್ಯಂತ ಮಹತ್ವದ್ದು. ಸಮಾಜದ ನೆಮ್ಮದಿಯನ್ನು ಕದಡುತ್ತಿರುವ ಮರ್ಯಾದಾ ಪುರುಷೋತ್ತಮರನ್ನದು ನಿರ್ಬಂಧಿಸುತ್ತದೆ. ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸದ ಸಮಾಜ ಪ್ರೇಮವನ್ನು ತಪ್ಪುನಡೆಯೆನ್ನುತ್ತದೆ.

ಬೇರುಕೊಯ್ವ, ನೀರು ಹೊಯ್ವ...

ಪ್ರಜಾತಂತ್ರ ವ್ಯವಸ್ಥೆಯ ಬಗೆಗಿನ ನಂಬಿಕೆಯೇ ಅದುರುತ್ತಿರುವ ಕಾಲವಿದು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳ ಘನತೆ ಕಳಚುತ್ತಿದೆ. ಚುನಾವಣೆಯಲ್ಲಿ ಅಧಿಕಾರವನ್ನು ಪಡೆಯುವುದಕ್ಕಾಗಿ ರಾಜಕೀಯ ಪಕ್ಷಗಳು ತಾತ್ವಿಕತೆ–ಬದ್ಧತೆಗಳನ್ನು ಮಾರಿಕೊಳ್ಳುತ್ತಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಪವಿತ್ರ ತಾಣಗಳಾದ ಸಂಸತ್ತು, ಕೋರ್ಟುಗಳಲ್ಲಿಯೂ ಸಂವಿಧಾನ ವಿರೋಧಿಯಾದ ಕ್ರಿಯೆಗಳು ನಡೆಯಲಾರಂಭಿಸಿವೆ. ಸಂಸದರನ್ನು, ನ್ಯಾಯಾಧೀಶರನ್ನು, ಮಠಾಧೀಶರನ್ನು, ಧರ್ಮಾಧಿಕಾರಿಗಳನ್ನು, ಜನಸಾಮಾನ್ಯರು ವಿಷಾದ ವ್ಯಂಗ್ಯದಿಂದ ಬರಿದೆ ಗಮನಿಸುವಂತಾಗಿದೆ. ಈ ಅಸಮತೋಲನವನ್ನು ಸಂಭಾಳಿಸಬೇಕಿದ್ದ ಮಾಧ್ಯಮ ಕ್ಷೇತ್ರ ಬಹುತೇಕವಾಗಿ ತನ್ನನ್ನು ಬಂಡವಾಳವಾದಕ್ಕೆ ಮಾರಿಕೊಂಡು ಚಿತ್ರದ ಕುದುರೆಯಂತಾಗಿದೆ. ತನ್ನ ನಿಜ ಸತ್ವವನ್ನು ಕಳೆದುಕೊಂಡಿದೆ. ಇಂತಹ ಭಯಾವಹದ ಕಾಲದಲ್ಲಿ ನಮ್ಮ ದೇಶದ ಸುಪ್ರಿಂ ಕೋರ್ಟು ಮನುಷ್ಯ ಗೌರವವನ್ನು ಎತ್ತಿಹಿಡಿಯುವ ತೀರ್ಪನ್ನು ಕೊಟ್ಟಿದೆ. ವಯಸ್ಕ ವ್ಯಕ್ತಿಗಳ ಮದುವೆಯಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಯಾರಿಗೂ ಇಲ್ಲ– ಎಂದ ಈ ತೀರ್ಪು ನಾಗರಿಕ ಸಮಾಜದಲ್ಲಿ ಸ್ವಾತಂತ್ರ್ಯಕ್ಕೆ ಧಕ್ಕೆ ಬರಬಾರದು ಎಂಬ ಎಚ್ಚರಿಕೆಯನ್ನು ನೀಡುತ್ತಿದೆ. ವಿವಾಹದ ಕಾನೂನುಬದ್ಧತೆಯನ್ನು ಪ್ರಶ್ನಿಸಿದ ಸಂದರ್ಭದಲ್ಲಿ ಅದನ್ನು ಪರಿಶೀಲಿಸುವ ಹಕ್ಕು ನ್ಯಾಯಾಂಗಕ್ಕೆ ಮಾತ್ರ ಇರುತ್ತದೆ. ಈ ವಿಷಯದಲ್ಲಿ ಮೂಗು ತೂರಿಸುವ ಅಧಿಕಾರ ಯಾವುದೇ ಸಾಮಾಜಿಕ ಗುಂಪುಗಳಿಗೆ ಇರುವುದಿಲ್ಲ, ಮಾತ್ರವಲ್ಲ ಹೆತ್ತವರಿಗೂ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಈ ತೀರ್ಪು, ಜಾತಿ–ಮತಗಳ ಕೊಳಕು ಮಲೆತು ನಾರುತ್ತಿರುವ ಸಮಾಜವನ್ನು ಬದಲಿಸಿಬಿಡುತ್ತದೆ. ಮರುಕ್ಷಣದಿಂದ 'ಮರ್ಯಾದೆ' ಎಂಬ ಹೆಸರಿನಲ್ಲಿ ವಿಜೃಂಭಿಸುತ್ತಿರುವ ಹೆಣ್ಣಿನ ವ್ಯಕ್ತಿಸ್ವಾತಂತ್ರ್ಯದ ದಮನವನ್ನು ಇಲ್ಲವಾಗಿಸುತ್ತದೆ. ಮರ್ಯಾದಾ ಹತ್ಯೆಗೆ ಈಡಾಗಿ ಹೋದ ಅಮಾಯಕ ಜೀವಗಳಿಗೆ ನ್ಯಾಯ ಒದಗಿಸುತ್ತದೆ– ಎಂಬ ತೀವ್ರ ಭ್ರಮೆಯನ್ನೇನೂ ಇಟ್ಟುಕೊಳ್ಳಬೇಕಾಗಿಲ್ಲ. ಯಾಕೆಂದರೆ ಈ ದೇಶದ ಸಾಮಾಜಿಕ ಕಾನೂನು ಸಾಂವಿಧಾನಿಕ ಕಾನೂನನ್ನು ಅತೀವ ನಿರ್ಲಕ್ಷ್ಯಕ್ಕೆ ದೂಡುತ್ತ ಬಂದಿದೆ. ಅದರಲ್ಲೂ ಹೆಣ್ಣಿನ ವಿಷಯದಲ್ಲಿಯಂತೂ ಸಮಾಜ ಸಾಂವಿಧಾನಿಕ ಕಾನೂನನ್ನು ನಿರ್ಲಕ್ಷಿಸಿದ್ದೇ ಹೆಚ್ಚು. ಮಾತ್ರವಲ್ಲ ಕೋರ್ಟು ಕಟ್ಟಳೆಗಳೂ, ಲಿಂಗಸೂಕ್ಷ್ಮ ನಡೆಯಿಂದ ವರ್ತಿಸಿದ ದಾಖಲೆಗಳೂ ಕಡಿಮೆಯೇ.

ದಿನದಿಂದ ದಿನಕ್ಕೆ ಉಲ್ಬಣಾವಸ್ಥೆ ತಲುಪುತ್ತಿರುವ ಕೋಮುವಾದ ಎಂಬ ರೋಗ, ಹೆಣ್ಣನ್ನು ತನ್ನ ಅಧಿಕಾರದ ದಾಳವಾಗಿಸಿಕೊಂಡಿದೆ. ಇದು ಪ್ರಜಾಪ್ರಭುತ್ವದ ಅಂತಃಸತ್ವವಾದ ಸಂವಿಧಾನವನ್ನು ವಿರೋಧಿಸುತ್ತದೆ. ಸಂವಿಧಾನವು ಪ್ರತಿಯೊಬ್ಬ ವ್ಯಕ್ತಿಗೂ, ಜಾತಿ–ಧರ್ಮ–ವರ್ಗ–ಲಿಂಗಗಳ ತಾರತಮ್ಯವಿಲ್ಲದೆ ಬಾಳುವ ನಾಗರಿಕ ಸ್ಪೇಸನ್ನು ಒದಗಿಸುತ್ತದೆ. ದೇಶದಲ್ಲಿ ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ ಸುತ್ತಾಡುವ, ವಾಸಿಸುವ; ಇಷ್ಟವಾದದ್ದನ್ನು ಉಣ್ಣುವ, ಉಡುವ, ತೊಡುವ; ಯಾರೊಂದಿಗೆ ಬೇಕಾದರೂ ಸ್ನೇಹ–ಪ್ರೇಮದ ಬಾಂಧವ್ಯವನ್ನು ಇಟ್ಟುಕೊಳ್ಳುವ ಸಂವಿಧಾನಬದ್ಧವಾದ ಅವಕಾಶವದು. ಈ ಅವಕಾಶದ ಪರಿಧಿ ಒಳ–ಹೊರಗು ಹಿಗ್ಗಿದಷ್ಟು ಮೂಲಭೂತವಾದಿ ಕಟ್ಟುಪಾಡುಗಳು ಕಳಚತೊಡಗುತ್ತವೆ. ಆಗ ಕೋಮುವಾದ–ಮತೀಯವಾದಗಳು ಚಲಾವಣೆಯ ಮೌಲ್ಯವನ್ನು ಕಳೆದುಕೊಳ್ಳುತ್ತವೆ. ಹಾಗಾದಾಗ, ಇದನ್ನೇ ಬಂಡವಾಳವಾಗಿಸಿಕೊಂಡ ರಾಜಕೀಯ ಪಕ್ಷಗಳಿಗೆ, ಮೂಲಭೂತವಾದಿ ಸಂಘಟನೆಗಳಿಗೆ ಅವುಗಳ ಉತ್ಪನ್ನವಾದ ವ್ಯಕ್ತಿಗಳಿಗೆ ಹಿನ್ನಡೆಯಾಗುತ್ತದೆ. ಆದ್ದರಿಂದ ಅವು ಜನಬದುಕನ್ನು ನಿರಂತರವಾಗಿ ಮತೀಯವಾದದ ಕೆಸರಲ್ಲಿ ಹುಗಿದು ತಮ್ಮ ಬಾವುಟವನ್ನು ಅರಳಿಸಲು ಪ್ರಯತ್ನಿಸುತ್ತವೆ. ಈ ಸ್ವಾರ್ಥದಾಟಕ್ಕೆ ಸುಲಭ ಬಲಿಯಾಗುವುದು ಹೆಣ್ಣಿನ ಬದುಕು.

ಕಳೆದ ತಿಂಗಳು ನಮ್ಮ ರಾಜ್ಯದಲ್ಲಿ ನಡೆದ ಎಳೆಯ ಬಾಲೆಯರ ದುರಂತ ಪ್ರಕರಣಗಳನ್ನು ಗಮನಿಸಿ. ಬಿಜಾಪುರದ ದಾನಮ್ಮ ಎಂಬ ಹುಡುಗಿ ಅತ್ಯಾಚಾರಕ್ಕೆ ಬಲಿಯಾದಳು. ಆಶ್ಚರ್ಯವೆಂದರೆ, ಅವಳು ದಲಿತ



ಬಾಲಕಿ ಎಂಬುದು ಆ ನಂತರದ ಪ್ರತಿಯೊಂದು ಬೆಳವಣಿಗೆಯಲ್ಲೂ ಎದ್ದು ಕಾಣುತ್ತಿತ್ತು. ಪ್ರಕರಣದ ವಿಚಾರಣೆಯನ್ನು ನಡೆಸುವವರಲ್ಲಿ ಒಬ್ಬರಾದ ಪೋಲಿಸ್ ಇನ್ಸ್‌ಪೆಕ್ಟರ್, ದೌರ್ಜನ್ಯಕ್ಕೊಳಗಾದ ಹುಡುಗಿಯ ಚಾರಿತ್ರ್ಯದ ಬಗ್ಗೆ ಹಗೂರವಾಗಿ ಮಾತನಾಡಿದ್ದು ನಾಗರಿಕ ಸಮಾಜದ ಲಜ್ಜೆಗೇಡಿತನಕ್ಕೆ ಸಾಕ್ಷಿಯಾಗಿತ್ತು. ಆ ಅಧಿಕಾರಿಗೆ ತನ್ನ ಜವಾಬ್ದಾರಿಯ ಅರಿವಿರಲಿಲ್ಲ. ತಾನು ಮಾತನಾಡುತ್ತಿರುವುದು ಹೈಸ್ಕೂಲು ಓದುತ್ತಿರುವ ಅಪ್ರಾಪ್ತ ಹುಡುಗಿಯ ಕುರಿತು ಎಂಬ ನೈತಿಕ ಪ್ರಜ್ಞೆಯಿರಲಿಲ್ಲ. ದಲಿತ ಹೆಣ್ಣನ್ನು ಮೇಲ್ಜಾತಿ–ಮೇಲ್ವರ್ಗಗಳ ಬಳಸಲು ಪದಾರ್ಥ– ಎಂದು ತಿಳಿವ ಸನಾತನತೆಯ ಹಸಕು ಗಾಳಿಯ ನಾತ ಆತನ ಉಸಿರಲ್ಲಿತ್ತು. ಹೆಣ್ಣು–ಹೊನ್ನು–ಮಣ್ಣುಗಳನ್ನು ಇದ್ದುಳ್ಳವರು ದಕ್ಕಿಸಿಕೊಂಡು ಭೋಗಿಸುವುದೇ ಧರ್ಮ ಎಂಬ ಅಪಾಯಕಾರಿ ವಿಷದ ಬೇರು ಇನ್ನೂ ಈ ನೆಲದಾಳದಲ್ಲಿ ಜೀವಂತವಾಗಿದೆ. ಅದು ಆಗಾಗ ಹೀಗೆ ಚಿಗುರಿಕೊಳ್ಳುತ್ತದೆ. ಚಿಕ್ಕಮಗಳೂರಿನ ಧನ್ಯಶ್ರೀ ಎಂಬ ಹುಡುಗಿ ಟ್ವೀಟ್ ಮಾಡಿದ ಒಂದು ಅರೆಬರೆ ಸಾಲು ಅವಳ ಪ್ರಾಣಕ್ಕೆ ಮುಳುವಾದದ್ದನ್ನು ಅರಗಿಸಿಕೊಳ್ಳುವುದಾದರೂ ಹೇಗೆ? ಮುಸ್ಲಿಂ ಧರ್ಮವನ್ನು ಇಷ್ಟಪಡುತ್ತೇನೆ ಎಂಬ ಮಾತು; ಮುಸ್ಲಿಂ ಧರ್ಮದವನನ್ನು ಇಷ್ಟಪಡುತ್ತೇನೆ ಎಂದು ಯಾಕೆ ಅರ್ಥೈಸಲ್ಪಡುತ್ತದೆ? ಯಾವ ಸಾಕ್ಷಿಗಳಿಲ್ಲದೆಯೂ ಅಂತಹ ಯಾವ ಘಟನೆಯೂ ಅವಳ ಬಾಳಿನಲ್ಲಿ ನಡೆಯದೆಯೂ ಅವಳು ಅಪರಾಧಿ ಯಾಕಾಗುತ್ತಾಳೆ? ಅಕಸ್ಮಾತ್ ಅವಳು ಇನ್ನೊಂದು ಧರ್ಮದವನನ್ನು ಇಷ್ಟಪಟ್ಟಿದ್ದರೆ ಅದು ಅಪರಾಧವೇ? ಅದು ಅವಳ ಪ್ರಾಣವನ್ನು ಬಲಿ ಪಡೆಯುವಷ್ಟು ಶಿಕ್ಷಾರ್ಹವೇ? ಜಾತಿ–ಧರ್ಮದ ಮತಾಂಧತೆಯ ಸೋಂಕು ಕುಟುಂಬದ ಪರಿಧಿಯನ್ನೂ ಮೀರಿ, ಸಮಾಜದ ಹಕ್ಕುದಾರಿಕೆಯಾಗಿ ವಿಸ್ತರಿಸಿದ ವಿಷಮ ಸ್ಥಿತಿಯಿದು.

ಮತೀಯವಾದ ಹೆಣ್ಣನ್ನು ಪಿತೃಪ್ರಧಾನ ಚೌಕಟ್ಟಿನೊಳಗಿಟ್ಟು ತನ್ನ ಅಧಿಕಾರದಾಳಿಕೆಯನ್ನು ಸ್ಥಾಪಿಸುತ್ತದೆ. ಹೆಣ್ಣಿಗೆ ಸಂಬಂಧಿಸಿದ ಏನೆಲ್ಲವೂ ಜಾತಿ–ಧರ್ಮಗಳ ನಿಯಮ–ನಿಯತ್ತುಗಳ ಅಡಿಯಲ್ಲಿ ನಿರ್ದೇಶಿತವಾಗುತ್ತವೆ. ಅದಕ್ಕೆ ಕಿಂಚಿತ್ ಊನವಾದರೂ ನಿರ್ದಯವಾದ ಹಿಂಸೆ ತಣ್ಣಗೆ ನಡೆದುಹೋಗುತ್ತದೆ. ಅವಳ ಆಸಕ್ತಿ–ಆಯ್ಕೆ ಎಂಬ ಮಾತೇ ಅಪ್ರಸ್ತುತವೆನಿಸುತ್ತದೆ. ಆಧುನಿಕತೆಯ ಪ್ರವೇಶವಾದ ಇಷ್ಟು ಕಾಲದ ನಂತರವೂ ವ್ಯವಸ್ಥೆ ಮತ್ತಿಷ್ಟು ಬಿಗಡಾಯಿಸುತ್ತಲೇ ಇದೆ. ಹೆಣ್ಣನ್ನು ತನ್ನಷ್ಟೇ ಹಕ್ಕುಬಾಧ್ಯತೆಗಳಿರುವ ಸಹಜೀವಿಯಾಗಿ ನೋಡುವುದು ಕಷ್ಟವೆನಿಸುತ್ತಿದೆ. ಹೆಣ್ಣುಮಕ್ಕಳು ಸಂವಿಧಾನಬದ್ಧವಾಗಿ ಶಿಕ್ಷಣ–ಉದ್ಯೋಗಗಳ ಹೊರಮುಖಿ ಚಲನೆಗೆ ಸನ್ನದ್ಧಗೊಂಡ ಹಾಗೆ ಅವರನ್ನು ಹೆಚ್ಚೆಚ್ಚು ಮತ–ಧರ್ಮಗಳ ಚೌಕಟ್ಟಿಗೆ ಮೊಳೆ ಹೊಡೆಯುವ ಪ್ರಯತ್ನ ನಡೆಯುತ್ತದೆ. ಅತಿ ಹೆಚ್ಚು ಚರ್ಚಿತವಾದ ಪದ್ಮಾವತ್ ಸಿನಿಮಾವನ್ನು ಗಮನಿಸಿ. ಅದು ಅಂತರ್‌ಧರ್ಮೀಯ ಕಾರಣಕ್ಕಾಗಿ ತೀವ್ರ ಆಕ್ಷೇಪಕ್ಕೆ ಒಳಗಾಯಿತು. ಆದರೆ ಸಿನಿಮಾದ ಒಡಲೊಳಗೆ ಒಂದು ಸಮುದಾಯದ ಧಾರ್ಮಿಕ ನಂಬಿಕೆಯಾಗಿ ಜೋಹರ್ ಪದ್ಧತಿಯ ವೈಭವೀಕರಣವಿದೆ. ಹೆಣ್ಣನ್ನು ದೇಹ ಚೆಲುವಿನ ಮಾಪನವಾಗಿ ಪ್ರತಿಪಾದಿಸಲಾಗಿದೆ. ಆದರೆ ಇಂತಹ ಆರೋಗ್ಯಕಾರಿ ಚರ್ಚೆಗೆ ಅವಕಾಶವನ್ನೂ ಕೊಡದಷ್ಟು ಕೋಮುವಾದ ವಿಜೃಂಭಿಸಿದೆ. ಸಿನಿಮಾವನ್ನು ವಿರೋಧಿಸುವವರು, ಒಪ್ಪಿಕೊಳ್ಳುವವರು ಇಬ್ಬರೂ ಹೆಣ್ಣನ್ನು ಮತ್ತದೇ ಸನಾತನತೆಯ ಕೆಸರಿನಲ್ಲಿ ಹೂಳುತ್ತಿದ್ದಾರೆ. ಹೌದು ಸಮಾಜ ಬದಲಾಗಿದೆ. ಹೆಣ್ಣಿನ ಹೊರ ಚಹರೆಯಲ್ಲಿ ಕಣ್ಣಿಗೆ ಕಾಣುವಷ್ಟು ಢಾಳಾದ ಬದಲಾವಣೆಗಳಾಗಿವೆ. ಆದರೆ ಒಳಗೆ ಮತೀಯವಾದ–ಕೋಮುವಾದಗಳ ಇಕ್ಕಳ ಬಿಗಿಯುತ್ತಲೇ ಇದೆ. ಧರ್ಮದ ಸಂಪ್ರದಾಯದ ಹೆಸರಿನಲ್ಲಿ ಹೊಸ ಹೊಸ ಆಚರಣೆಗಳು ಅರಂಭವಾಗಿವೆ. ಆ ಎಲ್ಲವನ್ನೂ ಹೆಣ್ಣಿನ ಹೆಗಲ ಮೇಲೆ ಹೊರಿಸಲಾಗುತ್ತಿದೆ. ಹೆಣ್ಣು ಕಡ್ಡಾಯವಾಗಿ ಜಾತಿ–ಧರ್ಮಗಳ ಕಟ್ಟಡಕ್ಕೆ ಲಗತ್ತಾಗುವಂತೆ ನೋಡಿಕೊಳ್ಳಲಾಗುತ್ತಿದೆ. ಧರ್ಮದ ಕಾವಲು ಭಟರು ಹೆಣ್ಣುಗಳನ್ನು ಧರ್ಮರಕ್ಷಣೆಯ ಪದಾತಿದಳವಾಗಲು ಹುರಿದುಂಬಿಸುತ್ತಾರೆ. ಸನಾತನ ಧರ್ಮಸಂಸ್ಥೆಯು ಎಳೆಯ ಬಾಲೆಯರನ್ನು ಗೋಪಿಯರಾಗಲು ಪ್ರಚೋದಿಸಿದ ವರದಿಗಳಿದ್ದವು. ಕೃಷ್ಣಭಕ್ತಿಯ ಪ್ರಚಾರಕ್ಕಾಗಿ ಮತ್ತು ಉದಯೋನ್ಮುಖ ಗೋಪಿಕೆಯರಿಗೆ ಮಾರ್ಗದರ್ಶಕರಾಗಲೂ ಗೋಪಿಯರು ಕಾರ್ಯತತ್ಪರರಾಗುತ್ತಾರೆಂಬ ಹೇಳಿಕೆಯನ್ನು– ಸನಾತನ ಪ್ರಭಾತ ಸಂಸ್ಥೆಯ ಮುಖ್ಯಸ್ಥ ಡಾ. ಅರವಳೆ ತಮ್ಮ ಪತ್ರಿಕೆಯಲ್ಲಿ ಹೇಳಿದ್ದರು. ಜೈನಧರ್ಮದ ಸಂಪ್ರದಾಯ ಕೂಡ ಹದಿಹರೆಯದ ಹುಡುಗಿಯರು ಸಾಧ್ವಿಯರಾಗಿ ಕಠಿಣ, ವ್ರತಧಾರಿಗಳಾಗುವುದನ್ನು ವಿಜೃಂಭಣೆಯಿಂದ ಪ್ರಚಾರಗೊಳಿಸುತ್ತದೆ. ಗೃಹಿಣಿಯರಾಗಿರುವ ಹೆಂಗಸರಿಗಂತೂ ಯೋಚಿಸಲು ಬಿಡುವು ಕೊಡದಷ್ಟು ದಿನನಿತ್ಯದ ಪೂಜೆಗಳಲ್ಲಿ ಹಬ್ಬ–ಹರಿದಿನಗಳಲ್ಲಿ ತೊಡಗಿಸಲಾಗುತ್ತಿದೆ. ಹಿಂದಿದ್ದ ಖಾಪ್ ಪಂಚಾಯತಿಗಳ ಜಾಗೆಯಲ್ಲೀಗ ನೈತಿಕ ಪೋಲಿಸ್‌ಗಿರಿಯ ದಬಾವಣೆ ನಡೆಯುತ್ತಿದೆ.

ಕೋಮುವಾದದ ರೋಗಕ್ಕೆ ಒಳಗಾದ ವಿಕೃತ ಮನಸ್ಸು, ತನ್ನ ಕುಟುಂಬದ ಜಾತಿಯ ಹೆಂಗಸರ ಸ್ವಾತಂತ್ರ್ಯಹರಣ ಮಾಡಿ, ಬದುಕಿನ ಹಕ್ಕನ್ನು ಕಸಿದುಕೊಳ್ಳುತ್ತದೆ. ಇನ್ನೊಂದೆಡೆ ಅನ್ಯ ಜಾತಿ–ಧರ್ಮಗಳ ಹೆಣ್ಣುಗಳನ್ನು ಹೀನಾಯವಾಗಿ ನೋಡುತ್ತದೆ. ಆಧುನಿಕತೆಯ ಕಾರಣಕ್ಕಾಗಿ ಹೆಣ್ಣು–ಗಂಡುಗಳು ಜೊತೆ ಬದುಕಲೇಬೇಕಾದ ಸಂದರ್ಭದಲ್ಲಿ ಕೋಮುವಾದಿ ಮನಸ್ಸು ಪೈಶಾಚಿಕವಾಗಿ ವರ್ತಿಸುತ್ತದೆ. ತಾನು ಪಾಠ ಮಾಡುವ ಮಕ್ಕಳೆಂದರೆ ಹೆತ್ತ ಮಕ್ಕಳಿಗೆ ಸಮ– ಎಂದು ತಿಳಿಯಬೇಕಾದ ಶಿಕ್ಷಕ, ತರಗತಿಯಲ್ಲಿ ರ್‍ಯಾಂಕ್ ಬರುತ್ತಿದ್ದ ಬುದ್ಧಿವಂತ ಮುದ್ದು ಮಗು ಅನ್ಯ ಧರ್ಮೀಯಳೆಂಬ ಕಾರಣಕ್ಕಾಗಿ ಅವಳನ್ನು ಅನಗತ್ಯವಾಗಿ ನಿಂದಿಸುತ್ತಿದ್ದ, ಹಿಂಸಿಸುತ್ತಿದ್ದನಂತೆ. ಸೂಕ್ಷ್ಮ ಮನಸ್ಸಿನ ಮಗು, "ಮಾ, ನಾನು ಶಾಲೆಗೆ ಹೋಗೋದಿಲ್ಲ"– ಎಂದು ಅಲವತ್ತುಕೊಂಡಿದೆ. ಹೆತ್ತವರು ಏನು ಮಾಡಬೇಕೆಂದು ನಿರ್ಧಾರ ತೆಗೆದುಕೊಳ್ಳಲಾಗದೆ ಮಗುವಿಗೆ ಸಮಾಧಾನ ಹೇಳಿದ್ದಾರೆ. ಆದರೆ ಮಗು ಆತ್ಮಹತ್ಯೆಯ ಹೆಸರಿನಲ್ಲಿ ಕಣ್ಮುಚ್ಚಿದೆ. ಇದು ಆತ್ಮಹತ್ಯೆಯಲ್ಲ ಎಂದು ಹೆತ್ತವರು ಕಣ್ಣೀರಾಗುತ್ತಾರೆ. ಇದು ಮಂಡ್ಯದ ಕೆ.ಆರ್. ಪೇಟೆಯ ನವೋದಯ ವಸತಿ ಶಾಲೆಯ 8ನೇ ತರಗತಿಯ ಮಗು ಜೈಬುನ್ನಿಸಾಳ ದುರಂತ ಕಥೆ. ನೆನಪಿಸಿಕೊಂಡರೆ, ರಾಜ್ಯದ ಪ್ರತಿಷ್ಠಿತ ಎಂದು ಕರೆಯಿಸಿಕೊಂಡ ವಸತಿ ಶಾಲೆ–ಕಾಲೇಜುಗಳಿಂದ ವಿದ್ಯಾರ್ಥಿನಿಯರ 'ಆತ್ಮಹತ್ಯೆ' ಹೆಸರಿನ ಘಟನೆಗಳು ವರದಿಯಾಗುತ್ತಲೇ ಇವೆ.



ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳಿಗೂ, ಕೋಮುವಾದದ ತೀವ್ರ ಬೆಳವಣಿಗೆಗೂ ಇರುವ ಅಂತಃಸಂಬಂಧವನ್ನು ನಿರ್ಲಕ್ಷಿಸಬಾರದು. ಚರಿತ್ರೆಯುದ್ದಕ್ಕೂ ಹೆಣ್ಣುಗಳು ಭೀಕರ ಯಾತನೆಗೆ ಒಳಗಾಗಿದ್ದು ಇಂಥ ಕಾರಣಗಳಿಗಾಗಿಯೇ. ಅಷ್ಟೇ ಅಲ್ಲದೇ ಕೋಮುವಾದ ಹೆಣ್ಣುಗಳ ಮನಸ್ಸನ್ನು ತನ್ನ ಫ್ರೀಝರ್ ಆಗಿಸಿಕೊಂಡು ಜೀವಂತವಾಗಿರಲು ಹಪಾಹಪಿಸುತ್ತದೆ. ಇದರ ಪರಿಣಾಮವಾಗಿ ಆಧುನಿಕ ಹೆಣ್ಣು, ಫ್ಯಾಶನ್ ಮಾರುಕಟ್ಟೆಯ ಅಗತ್ಯವನ್ನು ಪೂರೈಸುವ; ಮೂಲಭೂತವಾದವನ್ನು ಬೆಳೆಸುವ ಒಡಕು ಬಿಂಬವಾಗುತ್ತಿದ್ದಾಳೆ. ಸ್ವಂತಿಕೆಯನ್ನು ಕಳೆದುಕೊಂಡಿದ್ದಾಳೆ. ಅವಳ ಕಾಲುಗಳಲ್ಲೀಗ ಕೋಳವಿಲ್ಲ. ಅದೀಗ ನರವ್ಯೂಹಕ್ಕೇ ಇಂಜೆಕ್ಟ್ ಆಗಿದೆ. ಆಧುನಿಕತೆಯ ಅವಕಾಶಗಳು ಒಳಗೊಳಗೇ ಬೇರುಕೊಯ್ವ, ಲೋಕದೆದುರು ನೀರು ಹೊಯ್ವ– ಎಂಬ ಸ್ಥಿತಿಯನ್ನು ತಂದಿವೆ. ಈ ಸಂಕೀರ್ಣ ಸಂದರ್ಭದಲ್ಲಿ ಸುಪ್ರೀಂ ಕೋರ್ಟು ಕೊಟ್ಟ ತೀರ್ಮಾನ ಅತ್ಯಂತ ಮಹತ್ವದ್ದು. ಸಮಾಜದ ನೆಮ್ಮದಿಯನ್ನು ಕದಡುತ್ತಿರುವ ಮರ್ಯಾದಾ ಪುರುಷೋತ್ತಮರನ್ನದು ನಿರ್ಬಂಧಿಸುತ್ತದೆ. ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸದ ಸಮಾಜ ಪ್ರೇಮವನ್ನು ತಪ್ಪುನಡೆಯೆನ್ನುತ್ತದೆ. ಆದರೆ ಮನುಷ್ಯ ಪ್ರಜ್ಞೆಯ ಸಹಜತೆಯೇ ಆಗಿರುವ ಪ್ರೇಮದ ತಹತಹಿಕೆಯನ್ನು ಮಾಧ್ಯಮಗಳು ಜಾಗತಿಕ ಉದಾಹರಣೆಗಳನ್ನಾಯ್ದು ತೃಪ್ತಿಪಡಿಸಲು ನೋಡುತ್ತವೆ. ಹೆಣ್ಣಿನ ಅಭಿಪ್ರಾಯವನ್ನು ಕೇವಲಗೊಳಿಸುವ ಸಮಾಜ ಈ ಇಕ್ಕಟ್ಟಿನಲ್ಲಿ ಸುಪ್ರೀಂ ಕೋರ್ಟಿನ ತೀರ್ಪಿನ ಎಳೆ ಸಸಿ ಮೂಡಿದೆ. ಒಂದು ಬೆಳಕಿನ ಕಿರಣದಂತೆ. ●

ಭಾಗವತ್‌ರವರ ಸೇನೆ

"ಸಂವಿಧಾನ ಅನುಮತಿ ನೀಡಿದರೆ.."

ಆರೆಸ್ಸೆಸ್ ಮುಖ್ಯಸ್ಥರು ಭಾರತೀಯ ಸೇನೆಗೆ ಅವಮಾನ ಮಾಡಿದ್ದಾರೆ ಎಂಬುದು ಹೆಚ್ಚಿನವರ ಮುಖ್ಯ ಟೀಕೆ. ಈ ಟೀಕೆಯೇನೋ ಸರಿಯಾದ್ದೇ. ಆದರೆ ಈ ಟಿಪ್ಪಣಿಯ ಆಶಯ ಇನ್ನೂ ಹೆಚ್ಚು ಗಂಭೀರವಾಗಿದೆ. ಆರೆಸ್ಸೆಸ್‌ನ ಸ್ಪಷ್ಟೀಕರಣ ಮತ್ತು ಗೃಹರಾಜ್ಯಮಂತ್ರಿಗಳ ಟ್ವೀಟ್ ಇವೆರಡೂ ತಮಗರಿವಿಲ್ಲದೆಯೇ ಸೇನೆ ಮತ್ತು ಸಮಾಜದ ಮಿಲಿಟರೀಕರಣದ ಬಗ್ಗೆ ಆರೆಸ್ಸೆಸ್‌ನ ಕಣ್ಣೋಟದ ಒಂದು ಮಹತ್ವದ ಅಂಶವನ್ನು ಬಹಿರಂಗಗೊಳಿಸಿವೆ. 'ಸಂವಿಧಾನ ಅನುಮತಿ ನೀಡಿದರೆ' ಎಂಬ ಪದಪುಂಜಗಳಿರುವ ಈ ಸ್ಪಷ್ಟೀಕರಣಗಳು ಅನಿಷ್ಟಕಾರಿ ಸೂಚನೆಗಳು.



ಪ್ರಕಾಶ ಕಾರಟ್

ಆರೆಸ್ಸೆಸ್ ಮುಖ್ಯಸ್ಥರಾದ ಮೋಹನ್ ಭಾಗವತ್ ಮುಝಫ್ಫರ್‌ಪುರದಲ್ಲಿ ಆರೆಸ್ಸೆಸ್ ಕಾರ್ಯಕರ್ತರಿಗೆ ಮಾಡಿದ ಒಂದು ಭಾಷಣದಲ್ಲಿ, ಸೇನೆಗೆ ತನ್ನ ಸೈನಿಕರನ್ನು ತರಬೇತುಗೊಳಿಸಲು ಆರರಿಂದ ಏಳು ತಿಂಗಳು ಬೇಕಾಗಿದ್ದರೆ, ಆರೆಸ್ಸೆಸ್ ತನ್ನ ಕಾರ್ಯಕರ್ತರನ್ನು ಎರಡು ಅಥವ ಮೂರು ದಿನಗಳಲ್ಲಿ ಸಮರಕ್ಕೆ ಸಿದ್ಧಗೊಳಿಸಬಲ್ಲುದು ಎಂದು ಹೇಳಿದ್ದಾರೆ.

ಈ ಟಿಪ್ಪಣಿ ವ್ಯಾಪಕ ಖಂಡನೆಗೆ ಒಳಗಾಗಿದೆ. ಸೈನಿಕರನ್ನು ತರಬೇತುಗೊಳಿಸುವಲ್ಲಿ ಆರೆಸ್ಸೆಸ್ ಭಾರತೀಯ ಸೇನೆಗಿಂತ ಉತ್ತಮ ಕೆಲಸ ಮಾಡಬಲ್ಲದು ಎಂಬ ದಾವೆಯ ಮೂಲಕ ಆರೆಸ್ಸೆಸ್ ಮುಖ್ಯಸ್ಥರು ಭಾರತೀಯ ಸೇನೆಗೆ ಅವಮಾನ ಮಾಡಿದ್ದಾರೆ ಎಂಬುದು ಹೆಚ್ಚಿನವರ ಮುಖ್ಯ ಟೀಕೆ. ಈ ಟೀಕೆಯೇನೋ ಸರಿಯಾದ್ದೇ. ಆದರೆ ಈ ಟಿಪ್ಪಣಿಯ ಆಶಯ ಇನ್ನೂ ಹೆಚ್ಚು ಗಂಭೀರವಾಗಿದೆ. ಈ ಹೇಳಿಕೆ ಸೇನೆ ಮತ್ತು ಸಮಾಜದ ಮಿಲಿಟರೀಕರಣದ ಬಗ್ಗೆ ಆರೆಸ್ಸೆಸ್‌ನ ಕಣ್ಣೋಟದ ಒಂದು ಮಹತ್ವದ ಅಂಶವನ್ನು ಪ್ರಕಟಗೊಳಿಸಿದೆ.

ಟೀಕೆಗಳು ಬಂದಾಗ ಆರೆಸ್ಸೆಸ್ ಒಂದು ಸ್ಪಷ್ಟೀಕರಣ ನೀಡಿದೆ.: "ಪರಿಸ್ಥಿತಿ ಏರ್ಪಟ್ಟರೆ, ಮತ್ತು ಸಂವಿಧಾನ ಅನುಮತಿ ನೀಡಿದರೆ ಭಾರತೀಯ ಸೇನೆಗೆ ಸಮಾಜವನ್ನು ಸಿದ್ಧಗೊಳಿಸಲು ಆರು ತಿಂಗಳು ಬೇಕಾಗುತ್ತದೆ, ಆದರೆ ಸಂಘದ ಸ್ವಯಂಸೇವಕರು ನಿಯಮಿತವಾಗಿ ಶಿಸ್ತಿನಿಂದ ಇರುತ್ತಾರೆ ಎಂದು ಭಾಗವತ್‌ಜೀ ಹೇಳಿರುವುದು."



ವ್ಯಂಗ್ಯಚಿತ್ರ:ಸುರೇಂದ್ರನ್, ದಿ ಹಿಂದು

ಈ ಸ್ಪಷ್ಟೀಕರಣ ಮತ್ತು ಗೃಹರಾಜ್ಯಮಂತ್ರಿ ಕಿರಣ್ ರಜ್ಜುರವರ ಸಮರ್ಥನೆ ಭಾಗವತ್‌ರವರ ಟಿಪ್ಪಣಿಗಳ ಮರೆಮಾಚಿದ ಅಂಶವನ್ನು ಪ್ರಕಟಗೊಳಿಸಿದೆ. "ಭಾಗವತ್‌ಜೀ ಒಬ್ಬ ವ್ಯಕ್ತಿಯನ್ನು ತರಬೇತಾದ ಸೈನಿಕನಾಗಿ ಮಾಡಲು ಅರರಿಂದ ಏಳು ತಿಂಗಳು ಬೇಕು ಮತ್ತು ಸಂವಿಧಾನ ಅನುಮತಿ ನೀಡಿದರೆ, ಆರೆಸ್ಸೆಸ್ ಕಾರ್ಯಕರ್ತರಿಗೆ ಇದರಲ್ಲಿ ನೆರವಾಗುವ ಸಾಮರ್ಥ್ಯ ಇದೆ ಎಂದಷ್ಟೇ ಹೇಳಿರುವುದು" ಎಂದು ರಿಜ್ಜು ಟ್ವೀಟ್ ಮಾಡಿದ್ದಾರೆ.

ಭಾಗವತ್‌ರವರನ್ನು ಸಮರ್ಥಿಸುವ ಈ ಎರಡೂ ಸ್ಪಷ್ಟೀಕರಣಗಳು ಅವರಿಗೆ ಅರಿವಿಲ್ಲದೆಯೇ ಆರೆಸ್ಸೆಸ್ ಮುಖ್ಯಸ್ಥರ ಟಿಪ್ಪಣಿಗಳ ನಿಜಮಹತ್ವವನ್ನು ಪ್ರಕಟಕ್ಕೆ ತಂದಿವೆ. "ಸಂವಿಧಾನದ ಅನುಮತಿಯಿದ್ದರೆ" ಆರೆಸ್ಸೆಸ್ ನಮ್ಮ ಸೇನಾಪಡೆಗಳನ್ನು ನಡೆಸುವಲ್ಲಿ ತನ್ನ ಮಾತು ಸೇರಿಸ ಬಯಸುತ್ತದೆ ಮತ್ತು ಸಮಾಜವನ್ನು ಮಿಲಿಟರೀಕರಿಸುವಲ್ಲಿ ನೆರವು ನೀಡ ಬಯಸುತ್ತದೆ. ಇದು ಆರೆಸ್ಸೆಸ್‌ನ 'ಹಿಂದೂರಾಷ್ಟ್ರ' ಕಣ್ಣೋಟದ ಅವಿಭಾಜ್ಯ ಅಂಗವೇ ಆಗಿದೆ.

"ಹಿಂದೂಗಳ ಮಿಲಟರೀಕರಣ ಮಾಡಿ, ರಾಷ್ಟ್ರದ ಹಿಂದೂಕರಣ ಮಾಡಿ" ಇದು ಹಿಂದುತ್ವ ಪರಿಕಲ್ಪನೆಯ ಸ್ಥಾಪಕ ವಿ.ಡಿ.ಸಾವರ್ಕರ್‌ರವರ ಘೋಷವಾಕ್ಯವೇ ಆಗಿತ್ತು.

ಸಾವರ್ಕರ್‌ರವರ ಹೆಜ್ಜೆ ಗುರುತಗಳನ್ನು ಅನುಸರಿಸಿ ಆರೆಸ್ಸೆಸ್‌ನ ಸ್ಥಾಪಕ ಹೆಡ್ಗೆವಾರ್‌ರವರಿಗೆ ಕೂಡ ಹಿಂದೂಗಳ ಮಿಲಿಟರೀಕರಣದ ವಿಚಾರದ ವ್ಯಾಮೋಹ ಉಂಟಾಗಿತ್ತು. ಅವರ ಗುರು, ಹಾಗೂ ಹಿಂದೂ ಮಹಾಸಭಾದ ಮುಖಂಡ ಬಿ.ಎಸ್. ಮೂಂಜೆ ಇಟೆಲಿಗೆ ಭೇಟಿ ನೀಡಿ ಫ್ಯಾಸಿಸ್ಟ್ ಸಿದ್ಧಾಂತ ಮತ್ತು ಫ್ಯಾಸಿಸ್ಟ್ ಮಿಲಿಟರಿ ತರಬೇತಿ ಸಂಸ್ಥೆಗಳ ಪರಿಚಯ ಮಾಡಿಕೊಂಡು ಬಂದಿದ್ದರು. ಭಾರತಕ್ಕೆ ಮರಳಿದ ಮೂಂಜೆಯವರು 1943ರಲ್ಲಿ ನಾಶಿಕ್‌ನಲ್ಲಿ ಭೋನ್ಸಾಲ ಮಿಲಿಟರಿ ಸ್ಕೂಲ್ ರಚಿಸಿದರು.

ಈ ಸ್ಕೂಲ್ ಮತ್ತು ಕಾಲೇಜ್ ಈಗಲೂ ಇದೆ. ಸೇನಾಪಡೆಗಳನ್ನು ಸೇರಬಯಸುವವರಿಗೆ ಇದು ಕೋರ್ಸ್‌ಗಳನ್ನು, ತರಬೇತಿಗಳನ್ನು ನಡೆಸುತ್ತಿದೆ.



'ಸಾಂಸ್ಕೃತಿಕ ಸಂಘಟನೆ'- ವ್ಯಂಗ್ಯಚಿತ್ರ: ಮುಂಜುಲ್, ಫಸ್ಟ್‌ಕಟ್

ಇವನ್ನು ನಡೆಸುವ ಸೆಂಟ್ರಲ್ ಹಿಂದೂ ಮಿಲಿಟರಿ ಎಜ್ಯುಕೇಶನ್ ಸೊಸೈಟಿ ಈಗ ಆರೆಸ್ಸೆಸ್ ಮಂದಿಯಿಂದ ಕೂಡಿದೆ. ಮಲೇಗಾಂವ್ ಬಾಂಬ್ ಸ್ಫೋಟದ ಕೇಸಿನಲ್ಲಿ ಆರೋಪಿಯಾಗಿರುವ ಲೆಫ್ಟಿನೆಂಟ್ ಕರ್ನಲ್ ಎಸ್ ಪಿ ಪುರೋಹಿತ್ ಶಾರ್ಟ್ ಸರ್ವಿಸ್ ಕಮಿಶನ್ ಅಧಿಕಾರಿಯಾಗಿ ಭಾರತೀಯ ಸೇನೆಗೆ ಸೇರಲಿಚ್ಛಿಸುವವರಿಗೆಂದು ಭೋನ್ಸಾಲ ಮಿಲಿಟರಿ ಸ್ಕೂಲ್‌ನಲ್ಲಿ ನಡೆಸುವ ಒಂದು ವಿಶೇಷ ತರಬೇತಿ ತರಗತಿಗೆ ಹಾಜರಾಗಿದ್ದವರು.

ಆರೆಸ್ಸೆಸ್‌ಗೆ ಭಾರತೀಯ ಪ್ರಭುತ್ವವನ್ನು ತನಗೆ ಬೇಕಾದಂತೆ ಪುನರ‍್ರೂಪಿಸಲು ಹಿಂದುತ್ವವನ್ನು ಪಾಲಿಸುವ ಒಂದು ಸಶಸ್ತ್ರ ಪಡೆ ಬೇಕಾಗಿದೆ. ಭಾಗವತ್‌ರವರಿಗೆ, ಭಾರತೀಯ ಸೇನೆಯಲ್ಲಿರುವ ಸೈನಿಕ ಮತ್ತು ಆರೆಸ್ಸೆಸ್ ಸ್ವಯಂಸೇವಕ ಇಬ್ಬರೂ ಸಮಾನಸ್ಕಂಧರು. ಆದರೆ ಪ್ರಸಕ್ತ ಭಾರತೀಯ ಸಂವಿಧಾನದಲ್ಲಿ ಸೇನೆ ಮತ್ತು ಆರೆಸ್ಸೆಸ್‌ನ ಸಮಗ್ರೀಕರಣ ಸಾಧ್ಯವಿಲ್ಲ. ಆದ್ದರಿಂದಲೇ ಆರೆಸ್ಸೆಸ್‌ನ ಸ್ಪಷ್ಟೀಕರಣ ಮತ್ತು ಕಿರಣ್ ರಜ್ಜುರವರ ಸಮರ್ಥನೆ ಇವೆರಡೂ 'ಸಂವಿಧಾನ ಅನುಮತಿ ನೀಡಿದರೆ' ಆರೆಸ್ಸೆಸ್ ಮುಂದುವರೆದು ಮಿಲಿಟರಿ ವ್ಯವಹಾರಗಳಲ್ಲಿ ಹಸ್ತಕ್ಷೇಪವನ್ನು ನಡೆಸಬಹುದು ಎಂದು ಸೂಚಿಸುತ್ತವೆ. ಒಂದು ಪುನರ‍್ರೂಪಿತ ಸಂವಿಧಾನ ಇದನ್ನು ಸಾಧ್ಯಗೊಳಿಸಬೇಕು ಎಂಬ ಈ ಸೂಚನೆಯ ಒಳಾರ್ಥ ಅನಿಷ್ಟಕಾರಿ.

ಸಂವಿಧಾನಿಕ ಪ್ರತಿಜ್ಞೆ ಉಲ್ಲಂಘಿಸಿರುವ ಬಿಜೆಪಿ ಎಂಪಿ ವಿನಯ್ ಕಟಿಯಾರ್ ಸದಸ್ಯತ್ವವನ್ನು ರದ್ದು ಮಾಡಿ

–ರಾಜ್ಯಸಭಾ ಅಧ್ಯಕ್ಷರಿಗೆ ಪ್ರತಿಷ್ಠಿತ ನಾಗರಿಕರ ಆಗ್ರಹ

"ಮುಸ್ಲಿಮರು ಈ ದೇಶದಲ್ಲಿ ಇರಬಾರದು.. ಅವರು ದೇಶವನ್ನು ಜನಸಂಖ್ಯೆಯ ಆಧಾರದಲ್ಲಿ ವಿಭಜಿಸಿದ್ದಾರೆ. ಹಾಗಿರುವಾಗ ಅವರೇಕೆ ಇಲ್ಲಿದ್ದಾರೆ? ಮುಸ್ಲಿಮರಿಗೆ ಅವರ ಪಾಲು ಕೊಡಲಾಗಿದೆ. ಅವರು ಬಾಂಗ್ಲಾದೇಶ್ ಅಥವ ಪಾಕಿಸ್ತಾನಕ್ಕೆ ಹೋಗಬೇಕು... ಅವರು ಭಾರತದಲ್ಲಿ ಇರಬೇಕಾಗಿಲ್ಲ"– ಹೀಗೆಂದು ಬಿಜೆಪಿ ರಾಜ್ಯಸಭಾ ಸದಸ್ಯ ವಿನಯ್ ಕಟಿಯಾರ್ ಬಹಿರಂಗವಾಗಿಯೇ ಹೇಳಿರುವುದಾಗಿ ವರದಿಯಾಗಿದೆ.

ಹೀಗೆ ಹೇಳಿ ಅವರು ರಾಜ್ಯಸಭಾ ಸದಸ್ಯನಾಗಿ ತನ್ನ ಸ್ಥಾನ ಗ್ರಹಿಸುವಾಗ ಸಂವಿಧಾನದ 99ನೇ ಕಲಮಿನ ಅಡಿಯಲ್ಲಿ ಕೈಗೊಂಡಿರುವ ಪ್ರತಿಜ್ಞೆಯನ್ನು ಭಂಡತನದಿಂದ ಮುರಿದಿದ್ದಾರೆ. ಆದ್ದರಿಂದ ತಕ್ಷಣವೇ ಅವರ ರಾಜ್ಯಸಭಾ ಸದಸ್ಯತ್ವವನ್ನು ರದ್ದು ಮಾಡಬೇಕು ಎಂದು ಐವತ್ತಕ್ಕೂ ಹೆಚ್ಚು ವಿಶ್ವವಿದ್ಯಾಲಯ ಪ್ರಾಧ್ಯಾಪಕರು, ಇತಿಹಾಸಕಾರರು, ಆರ್ಥಿಕ ತಜ್ಞರು, ಕಲಾವಿದರು, ವಿಜ್ಞಾನಿಗಳು, ರಾಜಕೀಯ ಮತ್ತು ಸಾಮಾಜಿಕ ಕಾರ್ಯಕರ್ತರು ಮುಂತಾದ ಪ್ರತಿಷ್ಠಿತ ನಾಗರಿಕರು ರಾಜ್ಯಸಭೆಯ ಅಧ್ಯಕ್ಷರಾಗಿರುವ ವೆಂಕಯ್ಯ ನಾಯ್ಡು ಅವರಿಗೆ ಬರೆದ ಒಂದು ಬಹಿರಂಗ ಪತ್ರದಲ್ಲಿ ಆಗ್ರಹಿಸಿದ್ದಾರೆ

ಒಂದಿಲ್ಲೊಂದು ಬಿಜೆಪಿ ಮುಖಂಡರು ಭಾರತೀಯ ಪ್ರಜಾಪ್ರಭುತ್ವದ ಮೂಲಾಧಾರವಾದ ಬಹುತ್ವದ ಭರವಸೆ ನೀಡುವ ಸಂವಿಧಾನಿಕ ಅಂಶಗಳನ್ನು ಉಲ್ಲಂಘಿಸುವ ಟಿಪ್ಪಣಿಗಳನ್ನು ಮಾಡುತ್ತಲೇ ಇದ್ದಾರೆ. ಹಲವು ಬಿಜೆಪಿ ಶಾಸಕರು, ಸಂಸತ್ ಸದಸ್ಯರು ದೇಶದ ಜಾತ್ಯತೀತ ಹಂದರವನ್ನು ಕೆಡಿಸುವ ಹೇಳಿಕೆಗಳನ್ನು ಮತ್ತೆ–ಮತ್ತೆ ನೀಡುತ್ತಿದ್ದಾರೆ ಎಂಬುದು ಬಹಳ ಆತಂಕದ ಸಂಗತಿ. ಇನ್ನೂ ಆತಂಕದ ಸಂಗತಿಯೆಂದರೆ, ಸರಕಾರವಾಗಲಿ, ನ್ಯಾಯಾಂಗವಾಗಲಿ ಚುನಾಯಿತ ಪ್ರತಿನಿಧಿಗಳು ವಿಭಜನಕಾರೀ ಟಿಪ್ಪಣಿಗಳನ್ನು ಮಾಡುತ್ತಿದ್ದರೂ, ಸಂವಿಧಾನಿಕ ಹಕ್ಕುಗಳನ್ನು ಎತ್ತಿ ಹಿಡಿಯುತ್ತೇವೆಂಬ ಅವರ ಪ್ರತಿಜ್ಞೆಯನ್ನು ಉಲ್ಲಂಘಿಸುತ್ತಿದ್ದರೂ ಅದಕ್ಕೆ ಗಮನವನ್ನೇ ಕೊಡುತ್ತಿಲ್ಲ. ಇದರಿಂದಾಗಿ ವಿನಯ್ ಕಟಿಯಾರ್‌ರಂತವರು ಕೋಮುವಿಷವನ್ನು ಕಾರಿಕೊಳ್ಳಲು ಪ್ರೋತ್ಸಾಹ ಸಿಕ್ಕಿದೆ ಎಂದು ಈ ಬಹಿರಂಗ ಪತ್ರದಲ್ಲಿ ತೀವ್ರ ಆತಂಕ ಮತ್ತು ಖೇದ ವ್ಯಕ್ತಪಡಿಸಲಾಗಿದೆ.

ಸಂಸತ್ತಿನ ಸದಸ್ಯರುಗಳೇ ಇಂತಹ ಕೋಮುವಾದಿ ಮತ್ತು ರಾಷ್ಟ್ರ–ವಿರೋಧಿ ಹೇಳಿಕೆಗಳನ್ನು ಬಿಜೆಪಿ ಮತ್ತು ಅದರ ಕೇಂದ್ರ ಸರಕಾರದ ಕೃಪಾಕಟಾಕ್ಷದ ಅಡಿಯಲ್ಲಿ ಕೊಡುತ್ತಿರುವುದು ಅತ್ಯಂತ ಖಂಡನೀಯ. ಮುಸ್ಲಿಮರು ಭಾರತೀಯ ರಾಷ್ಟ್ರದ ಅವಿಭಾಜ್ಯ ಅಂಗ. ಅವರು ದೇಶದ ವಿಭಜನೆಗೆ ಕಾರಣಕರ್ತರು ಎನ್ನುವುದು, ಅದಕ್ಕಾಗಿ ದೇಶ ಬಿಟ್ಟುಹೋಗಿ ಎನ್ನುವ ವಿನಯ್ ಕಟಿಯಾರ್ ಜನಗಳ ನಡುವೆ ಕೋಮುದ್ವೇಷವನ್ನು ಹರಡುತ್ತಿದ್ದಾರೆ, ಸಂವಿಧಾನ ನಿರೂಪಿಸಿರುವ ಭಾರತೀಯ ರಾಷ್ಟ್ರದ ಜಾತ್ಯತೀತ ಸ್ವರೂಪವನ್ನು ಬುಡಮೇಲು ಮಾಡುತ್ತಿದ್ದಾರೆಯಾದ್ದರಿಂದ ಅವರ ರಾಜ್ಯಸಭಾ ಸದಸ್ಯತ್ವವನ್ನು ತಕ್ಷಣವೇ ರದ್ದು ಮಾಡಬೇಕು ಎಂದು ಈ ಪ್ರತಿಷ್ಠಿತ ನಾಗರಿಕರು ಆಗ್ರಹಿಸಿದ್ದಾರೆ.



ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಧನವನ್ನು ಜುನೇದ್ ತಾಯಿಗೆ ಅರ್ಪಿಸಿದ ಮಲಯಾಳಂ ಲೇಖಕ

ಮಲಯಾಳಂ ಕಾದಂಬರಿಕಾರ ಕೆ.ಪಿ. ರಾಮನ್‌ಉನ್ನಿ ಭಾರತದಲ್ಲಿನ ಕೋಮುವಾದ ಕುರಿತ ತನ್ನ ಕಾದಂಬರಿ 'ದೈವತಿಂತೆ ಪುಸ್ತಕಂ' ಎಂಬ ತನ್ನ ಕೃತಿಗೆ ದೊರೆತ 2017ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಹಣದಲ್ಲಿ 1 ಲಕ್ಷ ರೂ.ಗಳನ್ನು ಜೂನ್ 2017ರಲ್ಲಿ ಮಥುರಾಕ್ಕೆ ಹೋಗುವ ರೈಲಿನಲ್ಲಿ ಕೋಮುವಾದಿಗಳು ಬಡಿದು ಸಾಯಿಸಿದ 15ವರ್ಷದ ಬಾಲಕ ಜುನೇದ್ ಖಾನ್‌ನ ತಾಯಿಗೆ ಸಮರ್ಪಿಸಿದ್ದಾರೆ.

"ನನ್ನ ಈ ಪ್ರಶಸ್ತಿ ಧನವನ್ನು ಜುನೇದನ ತಾಯಿಯ ಚರಣಗಳಲ್ಲಿ ಅರ್ಪಿಸುತ್ತೇನೆ, ಈ ಮೂಲಕ ಆ ದುಷ್ಟ ಪಾಪಕ್ಕೆ ನಿಜವಾದ ಹಿಂದೂ ಪರಂಪರೆಯಂತೆ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆ" ಎಂದು ಅವರು ಹೇಳಿದ್ದಾರೆ.

"ಜುನೇದ ಏನೂ ತಪ್ಪು ಮಾಡಿರದ ಪುಟ್ಟ ಬಾಲಕ. ಆತ ಮುಸ್ಲಿಮ್ ಎಂಬ ಒಂದೇ ಕಾರಣಕ್ಕೆ ಧರ್ಮಾಂಧರು ಇರಿದು ಕೊಂದರು. ಇದು ದ್ವೇಷ ಕೊಲೆ. ಬೇರೆ ಧರ್ಮಗಳವರ ಬಗ್ಗೆ ಇಂತಹ ದ್ವೇಷ ಹೆಚ್ಚುತ್ತಿದೆ. ಹಿಂದೂ ಧರ್ಮದ ಹೆಸರಲ್ಲಿ ಫ್ಯಾಸಿಸಂಸ ಬೆಳೆಯುತ್ತಿದೆ. ಬಹಳಷ್ಟು ಜನಗಳನ್ನು ಕೊಚ್ಚಿ ಸಾಯಿಸಿದ್ದಾರೆ. ಅವುಗಳಲ್ಲಿ ಜುನೇದನ ಕೊಲೆ ಅತ್ಯಂತ ಘೋರ ವಂದು ನನಗನಿಸಿದೆ. ಅಲ್ಲದೆ ಆತನ ತಾಯಿ ಈಗಲೂ ಬಹಳ ಕಷ್ಟದಲ್ಲಿದ್ದಾರೆ ಎಂದು ಕೇಳಿದೆ. ಆದ್ದರಿಂದ ನಾನು ಈ ನಿರ್ಧಾರ ಮಾಡಿದೆ" ಎನ್ನುವ ರಾಮನ್‌ಉನ್ನಿ. ಹಿಂದೂ ಧರ್ಮದಲ್ಲಿ ಜಾತಿಯಂತಹ ಕೆಟ್ಟ ಅಂಶಗಳಿವೆ, ನಿಜ, ಆದರೆ ಬಹುತ್ವ, ಸಹಿಷ್ಣುತೆ ಕೂಡ ಈ ಪರಂಪರೆಯ ಭಾಗವಾಗಿದೆ. ಆದ್ದರಿಂದಲೇ ತಾನು 'ಹಿಂದೂ ಪರಂಪರೆಯಂತೆ ಎಂದಿರುವುದು ಎನ್ನುತ್ತಾರೆ.

2015ರಲ್ಲಿ ಕೋಮುವಾದಿಗಳು ಉತ್ತರಪ್ರದೇಶದ ದಾದ್ರಿಯಲ್ಲಿ ಮಹಮ್ಮದ್ ಇಖ್ಲಾಕ್‌ನನ್ನು ಬಡಿದು ಸಾಯಿಸಿದಾಗ ದೇಶದ ಆಳುವ ಮಂದಿಯ ಮೌನವನ್ನು ಪ್ರತಿಭಟಿಸಿ ಒಂಭತ್ತು ಲೇಖಕರು ತಮ್ಮ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಹಿಂದಿರುಗಿಸಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.







ದೇಶದ ಸಹಕಾರಿ ರಂಗದ ರತ್ನ ಕೇರಳ

ಯಮುನಾ ಗಾಂವ್ಕರ್

(ಎರಡು ಭಾಗಗಳಲ್ಲಿ ಪ್ರಕಟವಾಗಲಿರುವ ಲೇಖನದ ಮೊದಲ ಭಾಗ)

"ನಮ್ಮದು ಒಂದು ಚಿಕ್ಕ ರಾಜ್ಯ, ಆದರೆ ಜನಸಂಖ್ಯೆ ಮತ್ತು ಸಾಂದ್ರತೆ ಚೆನ್ನಾಗಿದೆ. ಈ ಮಾನವ ಸಂಪನ್ಮೂಲವನ್ನು ಸದ್ಬಳಕೆ ಮಾಡಲು ದೂರದೃಷ್ಟಿಯ ಕೆಲಸಗಳನ್ನು ಅಂದಿನ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಜನಸಾಮಾನ್ಯರ ಹಕ್ಕುಗಳಿಗಾಗಿ ಚಳುವಳಿ ನಿರತರಾದವರು ಕಂಡುಕೊಂಡರು. ಇಲ್ಲಿಯ ಭೂ ಸುಧಾರಣೆಯಿಂದ ಎಲ್ಲಾ ಕೆಳವರ್ಗದವರಿಗೂ ಆರ್ಥಿಕ ಭದ್ರತೆ ದೊರಕಿದಂತಾಯಿತು. ಹಾಗಾಗಿ ಹಿಂದಿನ ಶೋಷಕ ವ್ಯವಸ್ಥೆಯ ಕೈಲಿದ್ದ ಬ್ಯಾಂಕ್ ವ್ಯವಹಾರಗಳನ್ನು ಪ್ರಜಾಸತ್ತಾತ್ಮಕ ನೆಲೆಯಲ್ಲಿ ಕಟ್ಟಲು ಪ್ರಾರಂಭಿಸಿದ್ದರಿಂದ ನಮ್ಮ ಜನತೆಯ ಅಧೀನದ ಸಹಕಾರಿ ಸಂಘಗಳು ಉಚ್ಛ್ರಾಯ ಸ್ಥಿತಿಗೆ ಬಂದವು. ಈಗ ನಮ್ಮ ಭಾಗದಲ್ಲಿ ತರಕಾರಿ ಬೆಳೆಗಾರರ ಮಧ್ಯೆ, ಗೋಡಂಬಿ, ನಾರು ಮತ್ತು ರಬ್ಬರ್ ಕಾರ್ಮಿಕರು, ತೋಟ ಕಾರ್ಮಿಕರುಗಳ ಮಧ್ಯೆ, ಅರಣ್ಯ ಉತ್ಪನ್ನ ಸಂಗ್ರಹಣೆ ಮತ್ತು ಮಾರಾಟ, ...ಹೀಗೆ ಎಲ್ಲೆಲ್ಲೂ ಹೆಜ್ಜೆಹೆಜ್ಜೆಗೂ ಸಹಕಾರಿ ಸಂಘ ಸ್ಥಾಪಿಸಿದ್ದರಿಂದ ನಮ್ಮ ಆರ್ಥಿಕತೆ ಸುಧಾರಿಸಿದೆ. ಇದನ್ನು ಜನಾಂದೋಲನವಾಗಿ ಮಾಡಲಾಗಿದೆ." ಎಂದು ವಿವರಿಸಿದವರು ಕೇರಳ ರಾಜ್ಯ ಸಹಕಾರಿ ಸಂಘಗಳ ಅಧ್ಯಕ್ಷರಾದ ಅಡ್ವೋಕೇಟ್ ಪಿ. ರಾಘವನ್ ರವರು.

ನಾವು ಮೊದಲು ಗಣೇಶ್ ಬೀಡಿಯಲ್ಲಿ ಕೆಲಸ ಮಾಡುತ್ತಿದ್ದೆವು. ನಂತರ ಈ ಕೈಗಾರಿಕೆ ಮಾಲಿಕ 12,500 ಜನರನ್ನು ಬೀದಿಪಾಲು ಮಾಡಿ ನಮ್ಮ ಜಿಲ್ಲೆಯಿಂದಲೇ ಅಂದರೆ ಅಂದಿನ ಕಣ್ಣೂರಿನಿಂದ ಕಾಣೆಯಾದರು, ಈ ಕೈಗಾರಿಕೆ ಮುಚ್ಚಿಹೋಯಿತು. ಆಗ ನಮಗೆಲ್ಲ ದಿಕ್ಕು ತೋಚದಾಗಿತ್ತು. ಆದರೆ ಅದಾಗಲೇ ಬೀಡಿ ಸಹಕಾರಿ ಸಂಘ ನಮ್ಮೆಲ್ಲರ ಕೆಲಸ ಉಳಿಸುವ ಸಲುವಾಗಿ ಅಸ್ತಿತ್ವಕ್ಕೆ ಬಂತು. 12,500 ಜನರ ಜೊತೆಗೆ ಒಟ್ಟು 45 ಸಾವಿರ ಜನ ಅಂದು ಕೆಲಸ ಕಂಡುಕೊಂಡರು. ಅಂದಿನಿಂದ ನಾವೆಲ್ಲರೂ ಇದರಲ್ಲೇ ದುಡಿಯುತ್ತ ಬಂದೆವು. ಅನ್ನ ಸಿಕ್ಕಿತು. ಈಗ ತಂಬಾಕು ನಿಷೇಧದಿಂದ ಬೀಡಿ ಸಂಕಷ್ಟದಲ್ಲಿದೆ. ಆದರೆ ನಮ್ಮ ಸಹಕಾರಿ ಸಂಘವು ಇಂದು ವಿವಿಧ ಉದ್ದೇಶಗಳನ್ನು ಇಟ್ಟುಕೊಂಡು ಪರ್ಯಾಯ ಕೆಲಸವನ್ನು ನಮಗಾಗಿ ಮಾಡಿಕೊಟ್ಟಿದೆ. ಗೃಹೋಪಯೋಗಿ ವಸ್ತುಗಳನ್ನು ಈಗ ಮನೆಮನೆಗೆ ತಲುಪಿಸುವದನ್ನೂ ನಾವು ಮಾಡುತ್ತೇವೆ. ನಮ್ಮಂಥ ಅನೇಕರು ಮೊದಲು ಕೆಲಸಕ್ಕೆ ಸೇರಿದ್ದೇ ಈ ಸಹಕಾರಿಯಲ್ಲಿ, ಈಗ ನಿವೃತ್ತಿಯೂ ಇದರಲ್ಲೇ. ಕುಟುಂಬವೆಲ್ಲ ಈ ಸಹಕಾರಿ ಸಂಘದ ಕೆಲಸದಲ್ಲೇ ನಿರತರಾಗಿದೆ, ಇದು ಕಾಸರಗೋಡು ಬೀಡಿ ವರ್ಕರ್ಸ್ ಇಂಡಸ್ಟ್ರಿಯಲ್ ಕೊ.ಅಪ್ ನ ಸದಸ್ಯರ ಒಟ್ಟಾರೆ ಅಭಿಪ್ರಾಯ. ಅಲ್ಲೇ ಪಕ್ಕದಲ್ಲಿ ದಿನೇಶ ಬೀಡಿ ಕೊ. ಅಪ್ ವಾಹನದ ಚಾಲಕ ಸಾಮಾನುಗಳನ್ನು ಇಳಿಸುತ್ತಲೇ ಇದಕ್ಕೆ ದನಿಗೂಡಿಸಿದರು.

ಉಳಿದ ಸಹಕಾರಿ ಬ್ಯಾಂಕಿಗಿಂತ ನಿಮ್ಮ ಬ್ಯಾಂಕ್ ಹೇಗೆ ಭಿನ್ನ ಎಂದು ಕಾಸರಗೋಡು ಸರ್ವಿಸ್ ಕೊ. ಅಪ್ ಬ್ಯಾಂಕ್ ಕಾರ್ಯದರ್ಶಿ ಪಿ. ವಿಜಯ ನಾಯರ್ ಮತ್ತು ಸೆಕ್ರೆಟರಿ ಇನ್ಚಾರ್ಜ್ ಎಂ. ಸುಮತಿ (ಇವರು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಕೂಡ) ಮತ್ತು ಸಹಕಾರಿ ಸಂಘಗಳ ಜಿಲ್ಲಾ ಅಧ್ಯಕ್ಷರಾದ ಜಾನಕಿ ಮಾಧವನ್ ರನ್ನು ಕೇಳಿದರೆ, ನಾವು ಸುಲಭ ರೀತಿಯಲ್ಲಿ ಸಾಲ, ಚಿನ್ನದ ಸಾಲ ಮತ್ತು ಸರ್ಕಾರ ನಿಗದಿ ಮಾಡಿದ ಇತರೇ ಸೌಲಭ್ಯಗಳನ್ನು ಭ್ರಷ್ಟಾಚಾರ ರಹಿತವಾಗಿ ನೀಡುತ್ತಿದ್ದೇವೆ. ಈ ಬ್ಯಾಂಕ್ ಪಕ್ಷಭೇದ ಮರೆತು ಸಾಲ ಸೌಲಭ್ಯ ಒದಗಿಸುತ್ತದೆ, ಎನ್ನುತ್ತಾರೆ.

ನಾಗರಿಕರ ಹಲವಾರು ಸಮಸ್ಯೆಗಳು ನಮ್ಮೆದುರು ಬರುತ್ತದೆ, ಜನರಿಗೆ ಇಂದಿನ ಮಾರುಕಟ್ಟೆಯಲ್ಲಿ ಹೆಚ್ಚು ಹಣ ಕೊಟ್ಟು ಕೊಳ್ಳುವ ಶಕ್ತಿ ಇಲ್ಲ. ಹಾಗಾಗಿ ನಾವು ಪ್ರಾಮಾಣಿಕವಾಗಿ ಸ್ಪಂದಿಸಲು ಸಾಧ್ಯವಾಗುವ ಮಹತ್ವದ ರಂಗ ಈ ಸಹಕಾರಿ ರಂಗ. ನಾವು ಇಲ್ಲಿ ಬಸ್ ಸೇವೆ, ಮುದ್ರಣಾಲಯ, ಅಶಕ್ತರಿಗೆ ಆರೋಗ್ಯ ಭರವಸೆಗಾಗಿ ಮತ್ತು ಗ್ರಾಮೀಣ ಕೆಲಸಗಾರರಿಗೆ ಅನುಕೂಲವಾಗುವ ವಿವಿಧ ವಿಭಾಗಗಳಲ್ಲಿ ಸಹಕಾರಿ ಸಂಘಗಳನ್ನು ಸ್ಥಾಪಿಸಿದ್ದೇವೆ. ಸಾವಿರಾರು ಬಡ ಜನರ ಆಶಾಕಿರಣವಾಗಿ ನಮ್ಮ ಸಹಕಾರಿ ಸಂಘಗಳು ಕೆಲಸ ಮಾಡುತ್ತಿವೆ ಎಂದು ಹಿರಿಯ ಸಹಕಾರಿ ಹಾಗೂ ಕಾರ್ಮಿಕ ಸಂಘಗಳ ಧುರೀಣ ನಾರಾಯಣನ್ ಮತ್ತು ಟಿ.ಕೆ. ರಾಜನ್ ಹೇಳಿದರು.



ಎಲ್ಲೆಲ್ಲೂ ಹೆಜ್ಜೆಹೆಜ್ಜೆಗೂ ಸಹಕಾರಿ ಸಂಘ

"ನಮ್ಮದು ಒಂದು ಚಿಕ್ಕ ರಾಜ್ಯ, ಆದರೆ ಜನಸಂಖ್ಯೆ ಮತ್ತು ಸಾಂದ್ರತೆ ಚೆನ್ನಾಗಿದೆ. ಈ ಮಾನವ ಸಂಪನ್ಮೂಲವನ್ನು ಸದ್ಬಳಕೆ ಮಾಡಲು ದೂರದೃಷ್ಟಿಯ ಕೆಲಸಗಳನ್ನು ಅಂದಿನ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಜನಸಾಮಾನ್ಯರ ಹಕ್ಕುಗಳಿಗಾಗಿ ಚಳುವಳಿ ನಿರತರಾದವರು ಕಂಡುಕೊಂಡರು. ಇಲ್ಲಿಯ ಭೂ ಸುಧಾರಣೆಯಿಂದ ಎಲ್ಲಾ ಕೆಳವರ್ಗದವರಿಗೂ ಆರ್ಥಿಕ ಭದ್ರತೆ ದೊರಕಿದಂತಾಯಿತು. ಹಾಗಾಗಿ ಹಿಂದಿನ ಶೋಷಕ ವ್ಯವಸ್ಥೆಯ ಕೈಲಿದ್ದ ಬ್ಯಾಂಕ್ ವ್ಯವಹಾರಗಳನ್ನು ಪ್ರಜಾಸತ್ತಾತ್ಮಕ ನೆಲೆಯಲ್ಲಿ ಕಟ್ಟಲು ಪ್ರಾರಂಭಿಸಿದ್ದರಿಂದ ನಮ್ಮ ಜನತೆಯ ಅಧೀನದ ಸಹಕಾರಿ ಸಂಘಗಳು ಉಚ್ಛ್ರಾಯ ಸ್ಥಿತಿಗೆ ಬಂದವು. ಈಗ ನಮ್ಮ ಭಾಗದಲ್ಲಿ ತರಕಾರಿ ಬೆಳೆಗಾರರ ಮಧ್ಯೆ, ಗೋಡಂಬಿ, ನಾರು ಮತ್ತು ರಬ್ಬರ್ ಕಾರ್ಮಿಕರು, ತೋಟ ಕಾರ್ಮಿಕರುಗಳ ಮಧ್ಯೆ, ಅರಣ್ಯ ಉತ್ಪನ್ನ ಸಂಗ್ರಹಣೆ ಮತ್ತು ಮಾರಾಟ, ದನದ ಮಾಂಸದ (ಬೀಫ್) ಸಹಕಾರಿ ಸಂಘಗಳು, ಕಂಟ್ರಾಕ್ಟ ಕಾರ್ಮಿಕರ ಸಹಕಾರಿ, ಮೀನುಗಾರರು ಮತ್ತು ಮಾರಾಟಗಾರರ ಮಧ್ಯೆ, ಚಿಕ್ಕ ಕಸಬುಗಾರರ ಮಧ್ಯೆ, ಸಾರಿಗೆ, ಮುದ್ರಣ ಮತ್ತು ಪ್ರಕಾಶನ. ಶಿಕ್ಷಣ, ಗ್ರಾಹಕರ ಅಂಗಡಿಗಳು, ಕೈಮಗ್ಗ, ಹಾಲು ಉತ್ಪನ್ನ ಮಾಡುವವರು ಮತ್ತು ಮಾರುವವರು, ಖಾದಿ ಗ್ರಾಮೋದ್ಯೋಗ, ಶೇಂದಿ–ಹೆಂಡ ಇಳಿಸುವವರು, ಅಸಂಘಟಿತ ಕಾರ್ಮಿಕರು, ರೈತರು, ನೌಕರರು, ದುಡಿಯುವ ಮಹಿಳೆಯರು ಹೀಗೆ ಎಲ್ಲೆಲ್ಲೂ ಹೆಜ್ಜೆಹೆಜ್ಜೆಗೂ ಸಹಕಾರಿ ಸಂಘ ಸ್ಥಾಪಿಸಿದ್ದರಿಂದ ನಮ್ಮ ಆರ್ಥಿಕತೆ ಸುಧಾರಿಸಿದೆ. ಇದನ್ನು ಜನಾಂದೋಲನವಾಗಿ ಮಾಡಲಾಗಿದೆ. ಎಂದು ವಿವರಿಸಿದವರು ಕೇರಳ ರಾಜ್ಯ ಸಹಕಾರಿ ಸಂಘಗಳ ಅಧ್ಯಕ್ಷರಾದ ಅಡ್ವೋಕೇಟ್ ಪಿ. ರಾಘವನ್ ರವರು.

ಈ ಮಾತುಗಳು ಕೇಳಿ ಬಂದಿದ್ದು ಬೇರೆಲ್ಲೂ ಅಲ್ಲ ನಮ್ಮ ಪಕ್ಕದ ರಾಜ್ಯದಲ್ಲಿ. ಅದು ಕೇರಳ. ಕೇರಳ ಅಭಿವೃದ್ಧಿಯ ಹಲವು ವಿಚಾರಗಳಲ್ಲಿ ನಂಬರ್ ವನ್. ಇದರ ಹಿಂದಿನ ಶ್ರಮ ಮಾತ್ರ ಅಮೋಘವಾದುದು. ಹಾಗಾಗಿ ನಮ್ಮ ತೀರ ಹತ್ತಿರದ ಕೇರಳವನ್ನು ಕೌತುಕ, ಬೆರಗು, ಮೆಚ್ಚುಗೆಯಿಂದಲೇ ನೋಡಿ ಬೆಳೆಯುತ್ತಿರುವವರು ನಾವು. ಸಂಘಟನೆ, ಹೋರಾಟದ ಬೆನ್ನು ಹತ್ತಿ ಹೊರಟವರಿಗೆ ಕೇರಳದಲ್ಲಿ ಬೆಳೆದು ನಿಂತ ಸಮತಾ ಸಿದ್ಧಾಂತದ ಶಕ್ತಿ ಕೇವಲ ಆಕಸ್ಮಿಕವಲ್ಲ. ಇದೊಂದು ತ್ಯಾಗ, ಬಲಿದಾನದ ಕಥೆ ಎನ್ನುವುದು ಅಲ್ಲಿ ಹೋದರಂತೂ ಎಂಥವರಿಗೂ ಮನದಟ್ಟಾಗದೇ ಇರದು. ಸಾಮ್ರಾಜ್ಯಶಾಹಿ ವಿರುದ್ಧದ ಸ್ವಾತಂತ್ರ್ಯ ಹೋರಾಟ ಹಾಗೂ ಭೂಮಾಲಿಕತನದ ವಿರುದ್ಧ ಭೂಮಿ ಚಳುವಳಿಯಲ್ಲಿ ಕೇರಳದ ಜನತೆ ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಕೈಯೂರು, ಕರಿವೆಳ್ಳೂರು, ಪುನ್ನಪ್ರ ವಯಲಾರ ..... ಕುತ್ತುಪುರಂಬ.... ಹೀಗೆ ಊರೂರಿಗೆ ಮಾರು ಮಾರಿಗೆ ಪ್ರಭುತ್ವದಿಂದ ದಮನಿಸಲ್ಪಟ್ಟವರ ಕಥೆಗಳಿವೆ. ಪ್ರಭುತ್ವದ ನೇಣು ಕುಣಿಕೆಗೆ ಬಲಿಯಾದವರ, ಪೊಲೀಸ್ ಗುಂಡಿಗೆ ಹುತಾತ್ಮರಾದವರ ಸ್ತಂಭಗಳಿವೆ. ಜಮೀನ್ದಾರರ ವಿರುದ್ಧ ಹೋರಾಡಿದ ಸಂಗಾತಿಗಳ ರಕ್ತಸಿಕ್ತ ಚರಿತ್ರೆ ಈ ನೆಲದ ಅವಿಭಾಜ್ಯ ಅಂಗವೇ ಆಗಿದೆ. ಹಾಗಾಗಿ ಕೇರಳಕ್ಕೆ ಹೋಗಿ ಬರುವುದೆಂದರೆ ಮತ್ತೊಮ್ಮೆ ರೈತ–ಕಾರ್ಮಿಕರ ಹೋರಾಟದ ಸ್ಫೂರ್ತಿಯನ್ನು ಬಾಚಿಕೊಳ್ಳುವುದೆಂದೇ ಅರ್ಥ. ಚಿಕ್ಕ ರಾಜ್ಯವಾದರೂ ಮಾನವ ಅಭಿವೃದ್ಧಿಯಲ್ಲಿ ತುಂಬಾ ಸಾಧನೆ ಮಾಡಿದ ರಾಜ್ಯ. ಅದರಲ್ಲೂ ದೇಶದ ಸಹಕಾರಿ ರಂಗದ ಬಲವಾದ ಕೇಂದ್ರವಾಗಿ ಬೆಳೆದ ಕೇರಳದ ಬಗ್ಗೆ ನನ್ನ ಅಧ್ಯಯನಕ್ಕೆ ದಕ್ಕಿದ ವಿಚಾರವನ್ನು ಇಲ್ಲಿ ಸಂಕ್ಷಿಪ್ತವಾಗಿ ಹೇಳುವೆ.

1995ರಲ್ಲಿ ಮ್ಯಾಂಚೆಷ್ಟರ್ ನಲ್ಲಿ ಜರುಗಿದ ಅಂತಾರಾಷ್ಟ್ರೀಯ ಸಭೆಯ ಅಧ್ಯಯನ ಕಂಡುಕೊಂಡ ಅಂಶಗಳಂತೆ, 'ಎಲ್ಲರಿಗಾಗಿ ನಾನು; ನನಗಾಗಿ ಎಲ್ಲರೂ' ಎಂಬ ಸಹಕಾರಿ ನಿಯಮವನ್ನು ಜನತೆಯ ಬದುಕಿನಲ್ಲಿ ಬಿತ್ತಿದೆ. ಜನತೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಒಗ್ಗೂಡುವ ತತ್ವವನ್ನು, ಜಂಟಿ ಪ್ರಯತ್ನದ ಮೂಲಕ ಪ್ರಜಾಸತ್ತಾತ್ಮಕವಾಗಿ ನಿಯಂತ್ರಿಸುತ್ತಾ ಸ್ವಾಯತ್ತ ಸ್ವತಂತ್ರ ಉದ್ಯಮವಾಗಿ ಈ ರಂಗವನ್ನು ಬೆಳೆಸಿದೆ. ಇಲ್ಲಿ ಅತ್ಯುನ್ನತ ಸ್ವಸಹಾಯ ಜವಾಬ್ದಾರಿಯನ್ನು, ಪ್ರಜಾಪ್ರಭುತ್ವ, ಸಮಾನತೆ ಹಾಗೂ ಸೌಹಾರ್ದದ ಸಮಾಜದ ನಿರ್ಮಾಣದ ಕಾಳಜಿಯನ್ನು ಕಾಣುತ್ತೇವೆ. ಈ ಸಹಕಾರ ತತ್ವವೇ ಕೇರಳದ ಜನ ಚಳುವಳಿಯನ್ನು ಬಲಗೊಳಿಸಿದೆ. ಅಭಿವೃದ್ಧಿಯ ಎಲ್ಲಾ ಕ್ಷೇತ್ರಗಳಲ್ಲಿ ಕೇರಳವನ್ನು ಮುಂಚೂಣಿಯಲ್ಲಿ ನಿಲ್ಲಿಸಿದೆ.

ಪುಟ 10 ಕ್ಕೆ

ಸಿಪಿಐ(ಎಂ)ನ 22ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯ ಬಿಡುಗಡೆ

“ಎಡ ಮತ್ತು ಪ್ರಜಾಪ್ರಭುತ್ವವಾದಿ ಕಾರ್ಯಕ್ರಮದ ಸುತ್ತ ಚಳುವಳಿಗಳು ಮತ್ತು ಹೋರಾಟಗಳ ಮೂಲಕ ಒಂದು ನಿಜವಾದ ಪರ್ಯಾಯ ಮೂಡಿ ಬರುತ್ತದೆ”



ಸಿಪಿಐ(ಎಂ)ನ 22ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯವನ್ನು ಫೆಬ್ರುವರಿ 12ರಂದು ಬಿಡುಗಡೆ ಮಾಡಲಾಗಿದೆ. ಜನವರಿ 19ರಿಂದ 21ರ ವರೆಗೆ ಕೊಲ್ಕತಾದಲ್ಲಿ ಸಭೆ ಸೇರಿದ ಪಕ್ಷದ ಕೇಂದ್ರ ಸಮಿತಿ ಅಂಗೀಕರಿಸಿದ ಕರಡನ್ನು ಮಹಾಧಿವೇಶನದ ಮೊದಲು ಪಕ್ಷದ ಎಲ್ಲ ಹಂತಗಳಲ್ಲಿ ಚರ್ಚಿಸಲಾಗುವುದು. ಕರಡು ನಿರ್ಣಯ ಪ್ರಸಕ್ತ ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರೀಯ ಸನ್ನಿವೇಶವನ್ನು ಸಮಗ್ರವಾಗಿ ಪರಿಶೀಲಿಸಿ ಪಕ್ಷ ಸಂದರ್ಭದಲ್ಲಿ ಅನುಸರಿಸಬೇಕಾದ ರಾಜಕೀಯ ಮತ್ತು ಕಾರ್ಯತಂತ್ರದ ನಿಲುವನ್ನು ಮತ್ತು ನೆರವೇರಿಸಬೇಕಾದ ಕರ್ತವ್ಯಗಳನ್ನು ನಿರೂಪಿಸಿದೆ. ಇಲ್ಲಿ ಈ ಕರಡು ನಿರ್ಣಯದ ಕೆಲವು ಮುಖ್ಯಾಂಶಗಳನ್ನು ಕೊಡಲಾಗಿದೆ:

ಅಂತರ್ರಾಷ್ಟ್ರೀಯ ಸನ್ನಿವೇಶ

21ನೇ ಮಹಾಧಿವೇಶನದ ನಂತರದ ಅಂತರ್ರಾಷ್ಟ್ರೀಯ ಸನ್ನಿವೇಶದ ಪ್ರಮುಖ ಲಕ್ಷಣಗಳು ಈ ಕೆಳಗಿನಂತಿವೆ:

(i) ಸಾಧಾರಣ ಮಟ್ಟದ ಜಾಗತಿಕ ಆರ್ಥಿಕ ಚೇತರಿಕೆಯಾಗುತ್ತದೆ ಎಂಬ ಪೂರ್ವ ಅಂದಾಜು ಇದ್ದಾಗ್ಯೂ, 2008 ರ ಹಣಕಾಸು ಕರಗುವಿಕೆಯ ಮೂಲಕ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯಿಡೀ ವ್ಯಾಪಿಸಿದ್ದ ಬಿಕ್ಕಟ್ಟು ಇನ್ನೂ ಮುಂದುವರಿದಿದೆ.

(ii) ಈ ಬಿಕ್ಕಟ್ಟು ಎಲ್ಲಾ ಬಂಡವಾಳಶಾಹಿ ದೇಶಗಳ ಅಪಾರ ಜನಕೋಟಿಯ ಆರ್ಥಿಕ ಶೋಷಣೆಯನ್ನು ಮತ್ತೂ ತೀವ್ರಗೊಳಿಸುತ್ತಿದೆ ಹಾಗೂ ಅವರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ದಾಳಿ ಮಾಡುತ್ತಿದೆ. ಈ ದಾಳಿಗಳ ವಿರುದ್ಧ ಜಗತ್ತಿನ ಹಲವಾರು ದೇಶಗಳಲ್ಲಿ ಪ್ರತಿಭಟನಾ ಪ್ರದರ್ಶನಗಳು ಮತ್ತು ಹೋರಾಟಗಳು ಹೆಚ್ಚಾಗುತ್ತಿವೆ.

(iii) ಜಾಗತಿಕ ಬಂಡವಾಳಶಾಹಿಯು ಮುಂದುವರಿಯುತ್ತಿರುವ ಈ ಆರ್ಥಿಕ ಬಿಕ್ಕಟ್ಟು ಜಾಗತಿಕವಾಗಿ ಮತ್ತು ಪ್ರತಿ ದೇಶಗಳಲ್ಲೂ ಆರ್ಥಿಕ ಅಸಮಾನತೆಗಳನ್ನು ಇನ್ನೂ ಹೆಚ್ಚಿಸುತ್ತಿದೆ.

(iv) ತನ್ನ ಜಾಗತಿಕ ಒಡೆತನವನ್ನು ಬಲಪಡಿಸಿಕೊಳ್ಳುವ ಹಾಗೂ ಆ ಆರ್ಥಿಕ ಬಿಕ್ಕಟ್ಟಿನ ಋಣಾತ್ಮಕ ಪ್ರಭಾವವನ್ನು ತಡೆಯುವ ಪ್ರಯತ್ನದಲ್ಲಿ, ಅಮೆರಿಕಾ ಸಾಮ್ರಾಜ್ಯಶಾಹಿಯು ಮುಖ್ಯವಾಗಿ ರಾಜಕೀಯ ಮತ್ತು ಮಿಲಿಟರಿ ಮಧ್ಯಪ್ರವೇಶದ ಮೂಲಕ ತನ್ನ ಸರ್ವತೋಮುಖ ಆಕ್ರಮಣಶೀಲತೆಯನ್ನು ಪ್ರದರ್ಶಿಸುತ್ತಿದೆ.

(v) ಲ್ಯಾಟಿನ್(ದಕ್ಷಿಣ) ಅಮೆರಿಕಾದ ಹಲವಾರು ದೇಶಗಳಲ್ಲಿ ಅಮೆರಿಕಾದ ರಾಜಕೀಯ ಮತ್ತು ಮಿಲಿಟರಿ ಹಸ್ತಕ್ಷೇಪಗಳು ಗಂಭೀರ ತಿಕ್ಕಾಟಕ್ಕೆ ಕಾರಣವಾಗುತ್ತಿವೆ. ಅಮೆರಿಕಾವು ತನ್ನ ಇಡೀ ಶಸ್ತ್ರಾಗಾರವನ್ನು ಆ ಖಂಡದ ಎಡಪಂಥೀಯ ಸರ್ಕಾರಗಳನ್ನು ಅಸ್ಥಿರಗೊಳಿಸಲು ಮತ್ತು ಆ ಮೂಲಕ ಅಲ್ಲಿಯ ಜನರಲ್ಲಿರುವ ವ್ಯಾಪಕ ಸಾಮ್ರಾಜ್ಯಶಾಹಿ ವಿರೋಧಿ ಅಲೆಯನ್ನು ಹಿಮ್ಮೆಟ್ಟಿಸಲು ಬಳಸಿಕೊಳ್ಳುತ್ತಿದೆ.

(vi) ಈ ಅವಧಿಯು ಜಗತ್ತಿನ ಅನೇಕ ದೇಶಗಳಲ್ಲಿ ಮತ್ತಷ್ಟು ಬಲಪಂಥೀಯ ರಾಜಕೀಯ ತಿರುವು ಪಡೆದು ಯೂರೋಪಿನಲ್ಲಿ ಉಗ್ರ ಬಲಪಂಥೀಯ ನವ-ಫ್ಯಾಸಿಸ್ಟ್ ಶಕ್ತಿಗಳು ತಲೆಎತ್ತುವಂತಾಗಿದೆ. ಅಮೆರಿಕಾದ ಆಳುವ ವರ್ಗದ ಅತ್ಯಂತ ಪ್ರತಿಗಾಮಿ ವಿಭಾಗವನ್ನು ಪ್ರತಿನಿಧಿಸಿ ಅಮೆರಿಕಾದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರಕ್ಕೆ ಬಂದಿರುವುದು ಈ ಪ್ರವೃತ್ತಿಯನ್ನು ಇನ್ನಷ್ಟು ಬಲಪಡಿಸಿದೆ.

(vii) ಈ ಅವಧಿಯಲ್ಲಿ, ನಾವು ನಮ್ಮ 21ನೇ ಮಹಾಧಿವೇಶನದಲ್ಲಿ ಗಮನಿಸಿದಂತೆ ಸಾಮ್ರಾಜ್ಯಶಾಹಿ ಬಣದೊಳಗಿನ ಒಗ್ಗಟ್ಟು ಮತ್ತು ಅಂತರ ಸಾಮ್ರಾಜ್ಯಶಾಹಿ ನಡುವಿನ ವೈರುಧ್ಯಗಳ ತೀಕ್ಷ್ಣತೆ ಕಡಿಮೆಯಾಗಿರುವ ಅಂಶಗಳು, ನವ-ಉದಾರವಾದಿ ಬಿಕ್ಕಟ್ಟು ದೀರ್ಘವಾಗುತ್ತಿರುವ ಪರಿಣಾಮದಿಂದಾಗಿ, ಕಳಚುತ್ತಿದ್ದು ಹೊಸ ತಿಕ್ಕಾಟಗಳು ಮತ್ತು ವೈರುಧ್ಯಗಳು ಸಾಮ್ರಾಜ್ಯವಾದಿ ಶಕ್ತಿಕೇಂದ್ರಗಳ ನಡುವೆ ತಲೆಎತ್ತುತ್ತಿವೆ.

(viii) ಅಂತರ್ರಾಷ್ಟ್ರೀಯ ರಾಜಕೀಯ-ಆರ್ಥಿಕ ವ್ಯವಸ್ಥೆಯಲ್ಲಿ ಬಹುಧ್ರುವೀಯತೆಯನ್ನು ಸ್ಥಾಪಿಸುವ ಯತ್ನಗಳು, ನಮ್ಮಂಥ ದೇಶಗಳು ಅಮೆರಿಕಾ ಪರ ಘೋಷಿತ ನಿಲುವನ್ನು ವ್ಯಕ್ತಪಡಿಸಿರುವುದರಿಂದ, ಹೊಸ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ.

(ix) ಅಮೆರಿಕಾವು ಏಕಪಕ್ಷೀಯವಾಗಿ ಕೆಲವು ಒಪ್ಪಂದಗಳಿಂದ ಹಿಂದೆ ಸರಿದಿರುವುದರಿಂದ ಮತ್ತೆ ಕೆಲವು ಸ್ವತಂತ್ರ ದೇಶಗಳೊಂದಿಗೆ, ಬಹುಪಕ್ಷೀಯ ಒಪ್ಪಂದದ ಬದಲು, ದ್ವಿಪಕ್ಷೀಯ ಒಪ್ಪಂದ ಮಾಡಿಕೊಳ್ಳುವ ಮೂಲಕ ಪರಿಸರ ಬದಲಾವಣೆ ಮತ್ತು ವಿಶ್ವ ವ್ಯಾಪಾರ ಸಂಘಟನೆಯಂತಹ ಅಂತರ್ರಾಷ್ಟ್ರೀಯ ಒಪ್ಪಂದಗಳ ಭವಿಷ್ಯ ಅನಿಶ್ಚಿತತೆಯ ಹಂತ ತಲುಪಿದೆ.

(x) ನಮ್ಮ ನೆರೆಹೊರೆಯ ಎಲ್ಲಾ ದೇಶಗಳಲ್ಲಿ ಬಹು ಮುಖ್ಯ ಬೆಳವಣಿಗೆಗಳು ಆಗುತ್ತಿದ್ದು ನಮ್ಮ ದೇಶದ ಸ್ಥಿರತೆ ಹಾಗೂ ಒಳ್ಳೆಯ ಅನ್ಯೋನ್ಯ ಸಂಬಂಧಗಳ ಮೇಲೆ ನೇರ ಪರಿಣಾಮ ಬೀರುತ್ತಿದೆ.

(xi) ಸಮಾಜವಾದಿ ದೇಶಗಳು: ಈ ಅವಧಿಯಲ್ಲಿ, ಚೀನಾದ ಶಕ್ತಿ ಮತ್ತು ಜಾಗತಿಕ ಪ್ರಭಾವ ಬೆಳೆದಿದೆ. ವಿಯಟ್ನಾಮ್ ಮತ್ತು ಕ್ಯೂಬಾ ನ್ಯಾಯಸಮ್ಮತ ಹಾಗೂ ಸುಸ್ಥಿರ ಆರ್ಥಿಕ ಬೆಳವಣಿಗೆಯನ್ನು ತಮ್ಮ ದೇಶದಲ್ಲಿ ಸಾಧಿಸಿವೆ. ಉತ್ತರ ಕೊರಿಯಾಗೆ ಸಂಬಂಧಪಟ್ಟಂತೆ ಪ್ರಮುಖವಾಗಿ ಅಲ್ಲಿಯ ಅಣ್ವಸ್ತ್ರ ಕಾರ್ಯಕ್ರಮ ಹಾಗೂ ಕ್ಷಿಪಣಿ ನಿಯೋಜನೆಯ ಸುತ್ತ ಎಲ್ಲವೂ ನಿಂತಿದೆ.

(xii) ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವದ ಆಚರಣೆ ಮತ್ತದರ ಜತೆಯಲ್ಲೇ ಕಮ್ಯುನಿಸ್ಟ್ ಮತ್ತು ವರ್ಕರ್ಸ್ ಪಕ್ಷಗಳ ವಾರ್ಷಿಕ ಅಂತರ್ರಾಷ್ಟ್ರೀಯ ಸಭೆಗಳು ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಸೌಹಾರ್ದತೆಯನ್ನು ಮುಂದುವರಿಸುತ್ತಿವೆ.

ರಾಷ್ಟ್ರೀಯ ಸನ್ನಿವೇಶ

ರಾಷ್ಟ್ರೀಯ ಸನ್ನಿವೇಶವನ್ನು ವಿಶ್ಲೇಷಿಸುತ್ತ ಕರಡು ನಿರ್ಣಯ ಮೋದಿ ಸರಕಾರದ ಸುಮಾರು ನಾಲ್ಕು ವರ್ಷಗಳು ಒಂದು ಬಲಪಂಥೀಯ ಸರ್ವಾಧಿಕಾರಶಾಹಿ-ಕೋಮುವಾದಿ ಆಡಳಿತವನ್ನು ಆರಂಭಿಸಿದೆ ಎಂದು ಅಭಿಪ್ರಾಯ ಪಟ್ಟಿದೆ. ಈ ಆಡಳಿತದ ಮುಖ್ಯ ಲಕ್ಷಣಗಳೆಂದರೆ, ನವ-ಉದಾರವಾದಿ ಧೋರಣೆಗಳನ್ನು ಇನ್ನೂ ಹೆಚ್ಚು ತೀವ್ರತೆಯಿಂದ ಅನುಸರಿಸುವುದು, ಅದರ ಫಲಿತಾಂಶವಾಗಿ ದುಡಿಯುವ ಜನಗಳ ಮೇಲೆ ಸರ್ವತೋಮುಖ ಪ್ರಹಾರಗಳು, ಪ್ರಭುತ್ವದ ಜಾತ್ಯತೀತ ಪ್ರಜಾಸತ್ತಾತ್ಮಕ ಚೌಕಟ್ಟಿಗೆ ಬೆದರಿಕೆಯೊಡ್ಡುವ ಆರೆಸ್ಸೆಸ್‌ನ ಹಿಂದುತ್ವ ಅಜೆಂಡಾದ ಜಾರಿಗೆ ಎಡೆಬಿಡದ ಪ್ರಯತ್ನ, ಜತೆಗೆ ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ದಾಳಿಗಳು, ಅಮೆರಿಕಾದೊಂದಿಗೆ ವ್ಯೂಹಾತ್ಮಕ ಮೈತ್ರಿಯನ್ನು ಗಟ್ಟಿಗೊಳಿಸುವುದು ಮತ್ತು ಒಂದು ಅಡಿಯಾಳು ಮಿತ್ರನ ಪಾತ್ರ ವಹಿಸುವುದು, ಮತ್ತು ಸಂಸದೀಯ ಪ್ರಜಾಪ್ರಭುತ್ವವನ್ನು ಹತ್ತಿಕ್ಕಿ, ಸಂವಿಧಾನಿಕ ಸಂಸ್ಥೆಗಳನ್ನು ಹಾಗೂ ಪ್ರಜಾಪ್ರಭುತ್ವ ಹಕ್ಕುಗಳನ್ನು ಬುಡಮೇಲು ಮಾಡಿ ಸರ್ವಾಧಿಕಾರಶಾಹಿ ವಿನ್ಯಾಸವನ್ನು ಕಟ್ಟುವುದು ಎಂದು ಅದು ವರ್ಣಿಸಿದೆ.

ಇಂತಹ ಸಂದರ್ಭದಲ್ಲಿ ಪಕ್ಷ ಅನುಸರಿಸಬೇಕಾದ ರಾಜಕೀಯ ಹಾದಿಯನ್ನು ಕರಡು ರಾಜಕೀಯ ನಿರ್ಣಯ ಈ ರೀತಿ ನಿರೂಪಿಸಿದೆ:

1. ಮೋದಿ ಸರಕಾರದ ಸುಮಾರು ನಾಲ್ಕು ವರ್ಷಗಳ ಆಳ್ವಿಕೆಯ ಅನುಭವದ ಹಿನ್ನೆಲೆಯಲ್ಲಿ ಹಿಂದುತ್ವ ಕೋಮುವಾದಿ ಪಡೆಗಳನ್ನು ಏಕಾಂಗಿಯಾಗಿಸಲು ಮತ್ತು ಜನ-ವಿರೋಧಿ ಆರ್ಥಿಕ ಧೋರಣೆಗಳನ್ನು ಹಿಮ್ಮೆಟ್ಟಿಸಲು ಬಿಜೆಪಿಯನ್ನು ಸೋಲಿಸುವುದು ಅತ್ಯಗತ್ಯ.
2. ಆದ್ದರಿಂದ ಎಲ್ಲ ಜಾತ್ಯತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಅಣಿನೆರೆಸಿ ಬಿಜೆಪಿ ಮತ್ತು ಅದರ ಮಿತ್ರರನ್ನು ಸೋಲಿಸುವುದು ಮುಖ್ಯ ಕರ್ತವ್ಯವಾಗುತ್ತದೆ. ಆದರೆ ಇದನ್ನು ಕಾಂಗ್ರೆಸ್ ಪಕ್ಷದೊಂದಿಗೆ ಒಂದು ಹೊಂದಿಕೆ ಅಥವ ಚುನಾವಣಾ ಮೈತ್ರಿಯಿಲ್ಲದೆ ಮಾಡಬೇಕಾಗಿದೆ.
3. ಪಕ್ಷ ಕೇಂದ್ರದಲ್ಲಿನ ಬಿಜೆಪಿ ಸರಕಾರ ಮತ್ತು ಪ್ರಾದೇಶಿಕ ಪಕ್ಷಗಳು ನಡೆಸುವ ರಾಜ್ಯಸರಕಾರಗಳು ಸೇರಿದಂತೆ ವಿವಿಧ ರಾಜ್ಯ ಸರಕಾರಗಳು ಅನುಸರಿಸುತ್ತಿರುವ ನವ-ಉದಾರವಾದಿ ಧೋರಣೆಗಳ ವಿರುದ್ಧ ಹೋರಾಡುತ್ತದೆ. ಜನಗಳ ಜೀವನಾಧಾರಗಳ ಪ್ರಶ್ನೆಗಳ ಮೇಲೆ ಮತ್ತು ಆರ್ಥಿಕ ಧೋರಣೆಗಳ ಪ್ರಹಾರಗಳ ವಿರುದ್ಧ ಕಾರ್ಯಾಚರಣೆಗಳನ್ನು ಬೆಳೆಸಲು ಶ್ರಮಿಸುತ್ತದೆ.
4. ಎಲ್ಲ ಹಂತಗಳಲ್ಲಿ ಸಾಮೂಹಿಕ ಚಳುವಳಿಗಳಿಗೆ ಮತ್ತು ಐಕ್ಯ ಹೋರಾಟಗಳಿಗೆ ಜಂಟಿ ವೇದಿಕೆಗಳನ್ನು ಕಟ್ಟಬೇಕು. ಜನ-ವಿರೋಧಿ ಧೋರಣೆಗಳ ವಿರುದ್ಧ ಪ್ರತಿರೋಧವನ್ನು ತೀವ್ರಗೊಳಿಸಬೇಕು. ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಐಕ್ಯ ಕಾರ್ಯಾಚರಣೆಗಳು ಬಂಡವಾಳಶಾಹಿ ಪಕ್ಷಗಳನ್ನು ಹಿಂಬಾಲಿಸುವ ಜನಸಮೂಹಗಳನ್ನು ಸೆಳೆದುಕೊಳ್ಳಲು ಪ್ರಯತ್ನಿಸಬೇಕು.
5. ಸರಕಾರದ ಒಳಗೂ ಮತ್ತು ಹೊರಗೂ ಇರುವ ಹಿಂದುತ್ವ ಶಕ್ತಿಗಳು ಗಂಭೀರ ಬೆದರಿಕೆಯನ್ನು ಒಡ್ಡಿರುವ ಸಂದರ್ಭದಲ್ಲಿ ಎಲ್ಲ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಸಾಧ್ಯವಾದಷ್ಟು ವಿಶಾಲವಾದ ವೇದಿಕೆಗಳನ್ನು ಕಟ್ಟುವುದು ಅಗತ್ಯವಾಗಿದೆ. ಬುಡಮಟ್ಟದಲ್ಲಿ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟಕ್ಕೆ ಜನಗಳ ಐಕ್ಯತೆಯನ್ನು ಕಟ್ಟಲು ಒತ್ತು ನೀಡಬೇಕು. ಇವನ್ನು ರಾಜಕೀಯ ಅಥವ ಚುನಾವಣಾ ಮೈತ್ರಿಗಳಾಗಿ ಕಾಣಬಾರದು. ಇದೇ ರೀತಿಯಲ್ಲಿ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಸರ್ವಾಧಿಕಾರಶಾಹಿ ದಾಳಿಗಳ ವಿರುದ್ಧ ವಿಶಾಲ ಐಕ್ಯತೆಯನ್ನು ಬೆಸೆಯಬೇಕು.
6. ಪಕ್ಷದ ಸ್ವತಂತ್ರ ಶಕ್ತಿಯನ್ನು ಬೆಳೆಸಲು ಮತ್ತು ಕಟ್ಟಲು ಪಕ್ಷವು ಆದ್ಯತೆಯನ್ನು ಕೊಡುತ್ತದೆ. ಅದು ಎಡ ಐಕ್ಯತೆಯನ್ನು ವಿಶಾಲಗೊಳಿಸಲು ಮತ್ತು ಬಲಪಡಿಸಲು ಕೆಲಸ ಮಾಡುತ್ತದೆ.
7. ಐಕ್ಯ ಹೋರಾಟಗಳು ಮತ್ತು ಜಂಟಿ ಚಳುವಳಿಗಳ ಮೂಲಕ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಒಂದು ಮೂರ್ತ ಕಾರ್ಯಕ್ರಮದ ಮೇಲೆ ಒಟ್ಟಿಗೆ ತರಬೇಕು. ಇದರ ಮೂಲಕ ಎಡ ಮತ್ತು ಪ್ರಜಾಪ್ರಭುತ್ವ ರಂಗ ಮೂಡಿ ಬರಬೇಕು. ರಾಜ್ಯಗಳಲ್ಲಿ ಒಂದು ಮೂರ್ತ ಕಾರ್ಯಕ್ರಮದ ಸುತ್ತ ಒಂದು ವೇದಿಕೆಯನ್ನು ರಚಿಸಲು ವಿವಿಧ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಅಣಿನೆರೆಸಬೇಕು. ರಾಷ್ಟ್ರೀಯ ಮಟ್ಟದಲ್ಲಿ, ನಮ್ಮ ಪ್ರಚಾರಾಂದೋಲನಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯವನ್ನು ಮುಂದಿಡಬೇಕು ಹಾಗು ಎಡ ಮತ್ತು ಪ್ರಜಾಪ್ರಭುತ್ವವ ರಂಗದಲ್ಲಿ ಒಂದು ಸ್ಥಾನ ಪಡೆಯಬಹುದಾದ ಶಕ್ತಿಗಳನ್ನೆಲ್ಲ ಅಣಿನೆರೆಸಬೇಕು.
8. ಪಕ್ಷದ ಮೇಲೆ ಹೇಳಿದ ರಾಜಕೀಯ ನಿಲುವಿನ ಆಧಾರದಲ್ಲಿ ಬಿಜೆಪಿ-ವಿರೋಧಿ ಮತಗಳು ಗರಿಷ್ಠ ಪ್ರಮಾಣದಲ್ಲಿ ಬರಲು ಸೂಕ್ತವಾದ ಚುನಾವಣಾ ತಂತ್ರಗಳನ್ನು ಅಂಗೀಕರಿಸಬೇಕು.

ಪ್ರಸಕ್ತ ಸನ್ನಿವೇಶದಲ್ಲಿ ಪಕ್ಷ ನೆರವೇರಿಸಬೇಕಾದ ಕಾರ್ಯಭಾರಗಳನ್ನು ಈ ಕರಡು ರಾಜಕೀಯ ನಿರ್ಣಯ ಹೀಗೆ ನಿರೂಪಿಸಿದೆ:

1. ಮೋದಿ ಸರಕಾರದ ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕು. ನವ-ಉದಾರವಾದಿ ಧೋರಣೆಗಳ ದಾಳಿಗಳಿಗೆ ಮತ್ತು ಶೋಷಣೆಗೆ ಒಳಗಾಗಿರುವ ಎಲ್ಲ ದುಡಿಯುವ ಜನವಿಭಾಗಗಳನ್ನು ಅಣಿನೆರೆಸಬೇಕು ಮತ್ತು ಉದ್ಯೋಗಗಳು, ಭೂಮಿ, ಕೂಲಿಗಳು ಮತ್ತು ಜೀವನಾಧಾರಗಳಿಗಾಗಿ ಹೋರಾಡಲು ಸಂಘಟಿಸಬೇಕು. ಬೆಳೆದು ಬರುವ ಎಲ್ಲ ಸ್ವಯಂಸ್ಫೂರ್ತ ಹೋರಾಟಗಳಲ್ಲಿ ಪಕ್ಷ ಮಧ್ಯಪ್ರವೇಶಿಸಿ ಅವನ್ನು ಮುಂದಕ್ಕೆ ಒಯ್ಯಬೇಕು.
2. ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಹಿಂದುತ್ವ ಕೋಮುವಾದದ ವಿರುದ್ಧ ಹೋರಾಟದಲ್ಲಿ ಮುಂಚೂಣಿಯಲ್ಲಿರಬೇಕು. ಈ ಹೋರಾಟವನ್ನು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಸೈದ್ಧಾಂತಿಕ ವಲಯಗಳಲ್ಲಿ ನಡೆಸಬೇಕಾಗಿದೆ. ಕೋಮುವಾದಿ ಶಕ್ತಿಗಳ ಚಟುವಟಿಕೆಗಳನ್ನು ಎದುರಿಸಲು ಜಾತ್ಯತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳ ಒಂದು ವಿಶಾಲ ವೇದಿಕೆಯನ್ನು ಬೆಸೆಯಬೇಕು.
3. ಪಕ್ಷ ಸಾಮಾಜಿಕವಾಗಿ ದಮನಕ್ಕೆ ಒಳಗಾಗಿರುವ ವಿಭಾಗಗಳ ಹಿತಾಸಕ್ತಿಗಳನ್ನು ಪ್ರತಿಪಾದಿಸುವ ಪ್ರಯತ್ನಗಳನ್ನು ಹೆಚ್ಚಿಸಬೇಕು. ಪಕ್ಷ ಮಹಿಳೆಯರ ಹಕ್ಕುಗಳನ್ನು ಪ್ರತಿಪಾದಿಸಬೇಕು ಮತ್ತು ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ಹಿಂಸಾಚಾರವನ್ನು ಎದುರಿಸಬೇಕು. ಎಡ ಮತ್ತು ದಲಿತ ಐಕ್ಯ ವೇದಿಕೆಗಳನ್ನು ಮುಂದಕ್ಕೆ ಒಯ್ಯಬೇಕು. ಪಕ್ಷ ಎಲ್ಲ ವಲಯಗಳಲ್ಲಿ ಆದಿವಾಸಿಗಳ ಹಕ್ಕುಗಳನ್ನು ರಕ್ಷಿಸಬೇಕು. ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ ವಿಶಾಲ ಐಕ್ಯತೆಯನ್ನು ಬೆಸೆಯಬೇಕು.
4. ಪಕ್ಷ ರಾಷ್ಟ್ರೀಯ ಸಾರ್ವಭೌಮತೆಯ ರಕ್ಷಣೆಯಲ್ಲಿ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳೊಂದಿಗೆ ವ್ಯೂಹಾತ್ಮಕ ಮೈತ್ರಿಯಿಂದ ದೇಶದಲ್ಲಿ ಹೆಚ್ಚುತ್ತಿರುವ ಸಾಮ್ರಾಜ್ಯಶಾಹಿ ಪ್ರಭಾವದ ವಿರುದ್ಧ ಜನಗಳನ್ನು ಅಣಿನೆರೆಸುವ ಪ್ರಚಾರಾಂದೋಲನಗಳನ್ನು ವಿಸ್ತರಿಸಬೇಕು.
5. ಪಕ್ಷ ಹೆಚ್ಚುತ್ತಿರುವ ಸರ್ವಾಧಿಕಾರಶಾಹಿಯನ್ನು ಎದುರಿಸಲು ಸಾಧ್ಯವಾದಷ್ಟು ಶಕ್ತಿಗಳನ್ನು ಅಣಿನೆರೆಸಬೇಕು. ಪ್ರಜಾಪ್ರಭುತ್ವ, ಕಲಾತ್ಮಕ ಸ್ವಾತಂತ್ರ್ಯ ಮತ್ತು ಶೈಕ್ಷಣಿಕ ಸ್ವಾಯತ್ತತೆಯ ಮೇಲೆ ಪ್ರಹಾರಗಳ ವಿರುದ್ಧ ಒಂದು ವಿಶಾಲ ಸ್ವರೂಪದ ಅಣಿನೆರಿಕೆ ಆಗಬೇಕು.
6. ಪಕ್ಷ ತನ್ನ ಸ್ವತಂತ್ರ ಪಾತ್ರವನ್ನು ಬಲಪಡಿಸಲು ಮತ್ತು ವರ್ಗ ಮತ್ತು ಸಾಮೂಹಿಕ ಹೋರಾಟಗಳನ್ನು ಕಟ್ಟುವ ಮೂಲಕ ತನ್ನ ಪ್ರಭಾವ ಮತ್ತು ಸಾಮೂಹಿಕ ನೆಲೆಯನ್ನು ವಿಸ್ತರಿಸಲು ಆದ್ಯತೆ ನೀಡಬೇಕು. ಪಕ್ಷ ಪಶ್ಚಿಮ ಬಂಗಾಲದಲ್ಲಿ ಪ್ರಜಾಪ್ರಭುತ್ವದ ಮೇಲೆ ದಾಳಿಗಳು ಮತ್ತು ಪಕ್ಷ ಹಾಗೂ ಎಡರಂಗದ ಮೇಲೆ ಹಿಂಸಾಚಾರದ ವಿರುದ್ಧ ಹೋರಾಟಕ್ಕೆ ವಿಶೇಷ ಗಮನ ನೀಡಬೇಕು. ತ್ರಿಪುರ ಮತ್ತು ಕೇರಳದ ಎಡ ನೇತೃತ್ವದ ಸರಕಾರಗಳ ರಕ್ಷಣೆ ಒಂದು ಮಹತ್ವದ ಕಾರ್ಯಭಾರ.
7. ಎಡ ಐಕ್ಯತೆಯನ್ನು ಈಗಿರುವ ಕೊರತೆಗಳನ್ನು ನೀಗಿಸಿಕೊಂಡು ಬಲಪಡಿಸಬೇಕು, ಅದಕ್ಕಾಗಿ ಒಂದು ಎಡ ವೇದಿಕೆಯ ಆಧಾರದಲ್ಲಿ ಜಂಟಿ ಕಾರ್ಯಾಚರಣೆಗಳು ಮತ್ತು ಪ್ರಚಾರಾಂದೋಲನಗಳ ಮೇಲೆ ಗಮನ ಕೇಂದ್ರೀಕರಿಸಬೇಕು. ಇದು ಇತರ ಪ್ರಜಾಪ್ರಭುತ್ವವಾದಿ ಸಂಘಟನೆಗಳನ್ನು ಮತ್ತು ಶಕ್ತಿಗಳನ್ನು ಒಂದು ಎಡ ಮತ್ತು ಪ್ರಜಾಪ್ರಭುತ್ವವಾದಿ ಕಾರ್ಯಕ್ರಮದತ್ತ ಸೆಳೆಯಲು ಆಧಾರವಾಗಬೇಕು. ಇಂತಹ ಒಂದು ಕಾರ್ಯಕ್ರಮದ ಸುತ್ತ ಚಳುವಳಿಗಳು ಮತ್ತು ಹೋರಾಟಗಳ ಮೂಲಕ ಒಂದು ನಿಜವಾದ ಪರ್ಯಾಯ-ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯ ಮೂಡಿ ಬರುತ್ತದೆ. ■

ದೇಶದ ಸಹಕಾರಿ ರಂಗದ ರತ್ನ ಕೇರಳ.........

ಪುಟ 8 ರಿಂದ

ಕರ್ನಾಟಕ ಮತ್ತು ಕೇರಳದ ಸಹಕಾರಿ ಚಳುವಳಿಯ ತುಲನಾತ್ಮಕ ನೋಟ

ಬಂಗಾಳದಲ್ಲಿ ಮೊದಲ ಸಹಕಾರಿ ಸಂಘ ಸ್ಥಾಪನೆಯಾದುದು. ಅದರ ಬೆನ್ನ ಹಿಂದೆಯೇ 1904ರಲ್ಲಿ ಮುಂಬೈ ಪ್ರಾಂತದ ಈಗಿನ ಗದಗ ಜಿಲ್ಲೆಯಲ್ಲಿ ದೇಶದ ಮೊದಲ ಸಹಕಾರಿ ಪತ್ತಿನ ಸಂಘ ಪ್ರಾರಂಭವಾಗಿ, ಈ ವರೆಗೆ ಸಾವಿರಾರು ಸಹಕಾರಿ ಸಂಘಗಳು, ಬ್ಯಾಂಕುಗಳಾಗಿ ಕೆಲಸ ಮಾಡಿವೆ. ದೇಶದ ಒಟ್ಟಾರೆ ತುಲನಾತ್ಮಕ ನೋಟದಲ್ಲಿ ಕೇರಳದಷ್ಟು ದಕ್ಷತೆ, ಪ್ರಾಮಾಣಿಕತೆಯಿಂದ ನಮ್ಮ ರಾಜ್ಯದಲ್ಲಿ ಸಹಕಾರಿ ರಂಗ ನಿಭಾಯಿಸದೇ ಇರುವುದರಿಂದ ಆಗಾಗ ಸಹಕಾರಿ ಹಗರಣಗಳನ್ನು, ವಾದ ವಿವಾದಗಳನ್ನು ಕೇಳುತ್ತಿದ್ದೇವೆ. ಏಕೆಂದರೆ ಇವೆಲ್ಲ ಉಳ್ಳವರ ರಾಜಕೀಯ ಅಖಾಡಗಳಾಗಿವೆ. 2014ರಲ್ಲಿ ಕರ್ನಾಟಕ ಕಂಡ ಅತಿದೊಡ್ಡ ಸಹಕಾರಿ ಹಗರಣ 1000 ಕೋಟಿ ರೂ. ವಹಿವಾಟು ಹೊಂದಿರುವ ಶಿವಮೊಗ್ಗ ಡಿಸಿಸಿ ಬ್ಯಾಂಕ್ ನಲ್ಲಿ ನಡೆಯಿತು. ರಾಜ್ಯದಲ್ಲಿ ಈಗ ಇರುವ 38,430 ಸಹಕಾರಿ ಸಂಘಗಳಲ್ಲಿ 12,299 ಸಂಘಗಳು ನಷ್ಟದಲ್ಲಿವೆ. 4,539 ಸಂಘಗಳು ಲಾಭವೂ ಇಲ್ಲದೇ ನಷ್ಟವೂ ಇಲ್ಲದೇ ಬಳಲುತ್ತಿವೆ.

ಆದರೆ ಚಿಕ್ಕ ರಾಜ್ಯ ಕೇರಳದ ಸಹಕಾರಿ ಚಳುವಳಿ ಬಗ್ಗೆ ಕೇಳಿದ್ದೇವಾದರೂ ಸಹಕಾರಿ ರಂಗದ ಅಗಾಧತೆಯ ಅರಿವಾಗಿದ್ದು ಅಲ್ಲಿ ಕಣ್ಣಾರೆ ನೋಡಿದ ಮೇಲೆಯೇ. ನಮ್ಮಲ್ಲೂ ಸಹಕಾರಿ ಸಂಘ–ಸಂಸ್ಥೆಗಳು, ಬ್ಯಾಂಕುಗಳು ಇವೆ. ಆದರೆ ವಿವಾದ, ಸ್ವಜನಪಕ್ಷಪಾತ, ಭ್ರಷ್ಟಾಚಾರದಿಂದ ಕೊಳೆಯುತ್ತಿವೆ. ಆದರೆ ಕೇರಳದಲ್ಲಿ ಅನುಭವವೇ ಬೇರೆ.

ಕೇರಳದಲ್ಲಿ ಪ್ರಗತಿಪರ ಚಳುವಳಿಯ ಬೆಳವಣಿಗೆಗೂ, ಸಹಕಾರಿ ರಂಗದ ವಿಸ್ತರಣೆಗೂ ಒಂದು ಸಂಬಂಧ ಇದ್ದೇ ಇದೆ. ಬಹುತೇಕ ಎಲ್ಲ ಕಡೆ ಪ್ರಾರಂಭದ ಕಮ್ಯುನಿಷ್ಟ ಚಳುವಳಿಗಾರರು, ಸಮಾಜವಾದಿಗಳು ಸಹಕಾರಿ ರಂಗಕ್ಕೆ ಗಮನಾರ್ಹ ಒತ್ತನ್ನು ಕೊಟ್ಟಿದ್ದಾರೆ. ಅದರ ಪರಿಣಾಮವೆಂಬಂತೆ, ಕರ್ನಾಟಕದ ಕೆಲವೆಡೆಗಳಂತೆ ನಮ್ಮ ಜಿಲ್ಲೆಯ ಕಾರವಾರದಲ್ಲಿಯೂ ಕೂಡ ರೈತ ಸಹಕಾರಿ ಸಂಘ, ಹುತಾತ್ಮ ಗಣು ಮ್ಹಾಬಳು ನಾಯ್ಕ ನೆನಪಿನ ಮುದ್ರಣಾಲಯ ಇತ್ತು ಎನ್ನುವುದು ಇತಿಹಾಸದಲ್ಲಿ ದಾಖಲಾಗಿದೆ. ಇಡೀ ಕರ್ನಾಟಕದಲ್ಲಿ ಅವು ಜನಸಾಮಾನ್ಯರ ಆರ್ಥಿಕ ಆಂದೋಲನ ರೀತಿಯಲ್ಲಿ ಬೆಳೆಯಲೇ ಇಲ್ಲ, ಬೆಳೆಯುವ ಹಂಬಲವಿದ್ದರೂ ಸ್ಥಾಪಿತ ಹಿತಾಸಕ್ತಿಗಳು ಅವುಗಳನ್ನು ಬೆಳೆಯಲು ಬಿಡಲೇ ಇಲ್ಲ.

ಕೇರಳದಲ್ಲಿ ಸಹಕಾರಿ ರಂಗದ ಇತಿಹಾಸ

ಸ್ವಾತಂತ್ರ್ಯ ಪೂರ್ವದಲ್ಲಿ ಕೇರಳದಲ್ಲಿ ಸಹಕಾರಿ ಬ್ಯಾಂಕ್ ಗಳು ಇದ್ದುವು. ಅವು ಕೇವಲ ಹಣಕಾಸಿನ ವ್ಯವಹಾರಕ್ಕೆ ಸೀಮಿತವಾಗಿದ್ದವು. 1909ರಲ್ಲಿ ಐಕ್ಯ ನಾಣಯ ಸಂಘಂ ಸ್ಥಾಪನೆಯಾಗಿತ್ತು. ಆದರೆ ಇದು ಶ್ರೀಮಂತ ಲೇವಾದೇವಿ ವ್ಯವಹಾರಸ್ಥರು ಮತ್ತು ಭೂಮಾಲಿಕರು ನಡೆಸುತ್ತಿದ್ದ ಸೊಸೈಟಿಗಳಾಗಿದ್ದವು. ಇದರಲ್ಲಿ ಹಲವಾರು ಲೋಪದೋಷಗಳಿದ್ದವು. ಸಣ್ಣ ರೈತರು, ಬಡವರು ಸದಸ್ಯರಾಗಿದ್ದರೂ ಅವರೆಲ್ಲ ಸ್ಥಳೀಯವಾಗಿ ಸಾಲವನ್ನು ಪಡೆದು ಸಾಲದ ಬಾಧೆಗೆ ಒಳಗಾಗಿ ಹೆಚ್ಚು ಹೆಚ್ಚು ಬಡ್ಡಿ ತೆರಬೇಕಾಗಿತ್ತು. ಅಲ್ಲದೇ ದೀರ್ಘಕಾಲ ಶ್ರೀಮಂತರ ದಾಸರಾಗಿರಬೇಕಾಗಿತ್ತು. ಹಾಗಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿದ್ದ ದುಡಿಯುವ ಜನರ ನಾಯಕರು ಸಹಕಾರಿ ಸಂಘಗಳನ್ನು ಜನಸಾಮಾನ್ಯ–ಸ್ನೇಹಿಯಾಗಿ ಮಾಡುವತ್ತ ಶ್ರಮಿಸಿದರು. ಆಗ ಕೇವಲ ಹಣಕಾಸು ರೂಪದ ಸೊಸೈಟಿಯ ಅರ್ಥ ಬದಲಾಯಿತು.

ಸ್ವಾತಂತ್ರ್ಯ ಪೂರ್ವದ ಅವಧಿಯಲ್ಲಿ ಬ್ರಿಟೀಶ್ ಈಸ್ಟ್ ಇಂಡಿಯಾ ಕಂಪನಿಯು ಭಾರತದ ಎಲ್ಲ ಸಂಪನ್ಮೂಲಗಳನ್ನು ಹೀರುವದರ ಮೂಲಕ ಹೀನಾಯವಾಗಿ ಶೋಷಿಸಿತ್ತು. ಸ್ವಾತಂತ್ರ್ಯಾನಂತರ ಪ್ರತೀ ಹಂತದಲ್ಲೂ ತೆಗೆದುಕೊಂಡ ಹಲವಾರು ಕ್ರಮಗಳ ಭಾಗವಾಗಿ ದೇಶ ಆರೋಗ್ಯಪೂರ್ಣವಾಗಲು ಸಹಾಯವಾಯಿತು. ದೇಶದ ಸಾಮಾಜಿಕ–ಆರ್ಥಿಕ ಪುನರ್ನಿರ್ಮಾಣಕ್ಕೆ ಸಹಕಾರೀ ಚಳುವಳಿ ಒಂದುರೀತಿಯಲ್ಲಿ ಪರಿಣಾಮಕಾರಿ ಮಾಧ್ಯಮವಾಗಬಲ್ಲುದೆಂದು ದೇಶದ ರಚನಾಕಾರರೆ ಒಟ್ಟಾರೆಯಾಗಿ ಒಪ್ಪಿಕೊಂಡಿದ್ದರು. ಹಾಗಾಗಿ ಯೋಜನಾ ಆಯೋಗವು ಸ್ವಾವಲಂಬಿಯಾದಂತಹ ಒಂದು ಸಹಕಾರೀ ಕ್ಷೇತ್ರವನ್ನು ಅಭಿವೃದ್ಧಿಪಡಿಸಿತು, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಉಳಿತಾಯವನ್ನು ಅಣಿನೆರೆಸುವದರ ಮೂಲಕ ಸಂಪನ್ಮೂಲವನ್ನು ವೃದ್ಧಿಗೊಳಿಸಿತು. ಸಾಲ, ಅಗತ್ಯ ಸಲಕರಣೆಗಳ ಪೂರೈಕೆ, ಸಂಸ್ಕರಣೆ, ಅಗತ್ಯ ಸರಕುಗಳ ವಿಕ್ರಯ ಮತ್ತು ವಿತರಣೆ ನಡುವಿನ ಸಂಭಂಧಗಳನ್ನು ಬಲಪಡಿಸುವದರ ಮೂಲಕ ಸಮಗ್ರ ಗ್ರಾಮೀಣ ಅಭಿವೃದ್ಧಿಯನ್ನು ಉತ್ತೇಜಿಸುವದು ಹಾಗೂ ಆ ಮೂಲಕ ಸಮುದಾಯದ ದುರ್ಬಲ ವರ್ಗದವರ ಅಭಿವೃದ್ಧಿಪಡಿಸುವಂಥ ಕಾರ್ಯವನ್ನು ಕೈಗೊಂಡಿತು.

ಕೇರಳದಲ್ಲಿ ಸಹಕಾರೀ ಚಳುವಳಿಗೆ ಬಹುದೊಡ್ಡ ಚರಿತ್ರೆ ಇದೆ. ಸ್ವಾತಂತ್ರ್ಯ ಪಡೆಯುವದಕ್ಕಿಂತ ಬಹಳ ಹಿಂದೆಯೇ ಕೇರಳದಲ್ಲಿ ಸಹಕಾರ ಚಳುವಳಿ ಆರಂಭವಾಗಿತ್ತು. 1946ರ ಅವಧಿಯಲ್ಲಿ, 32 ಲಕ್ಷ ರೂಪಾಯಿ ಷೇರು ಬಂಡವಾಳ ಹೊಂದಿರುವ 1669 ಸಹಕಾರ ಸಂಘಗಳು ಅಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಅವುಗಳಲ್ಲಿ 75% ಸಾಲ ನೀಡಲು ಉಪಯೋಗಿಸಲಾಗುತ್ತಿತ್ತು. 92.21 ಲಕ್ಷ ರೂ. ಕಾರ್ಯನಿರತ ಬಂಡವಾಳದೊಂದಿಗೆ ಆರಂಭವಾಯಿತು. ಮಾತ್ರವಲ್ಲ ಕೇರಳ ರಾಜ್ಯ ಸ್ಥಾಪನೆಗೂ ಮುನ್ನ ಎಲ್ಲಾ ಕೋಅಪರೇಟಿವ್ ಗಳೂ ತ್ರಿವಾಂಕೂರ್ ಕೊ.ಅಪ್ ಕಾಯ್ದೆ, ಕೊಚ್ಚಿ ಕೊ.ಅಪ್ ಕಾಯ್ದೆ ಹಾಗೂ ಮದ್ರಾಸ್ ಕೊ.ಅಪ್ ಸೊಸೈಟಿ ಕಾಯ್ದೆಯ ಅಡಿಯಲ್ಲಿದ್ದವು. ತ್ರಿವಾಂಕೂರ್ ಮತ್ತು ಕೊಚ್ಚಿಗಳ ಏಕೀಕರಣದ ನಂತರ ತ್ರಿವಾಂಕೂರ್ ಕೊ. ಅಪ್ ಕಾಯ್ದೆ 1952 ರಲ್ಲಿ ಜಾರಿಗೆ ಬಂತು. 1914 ರಲ್ಲಿ ಸ್ಥಾಪನೆಯಾದ ತ್ರಿವಾಂಕೂರ್ ಕೊ.ಅಪ್ ಬ್ಯಾಂಕ್ ಕೇರಳದ ಮೊದಲ ಸಹಕಾರಿ ಬ್ಯಾಂಕ್. 1956 ರಲ್ಲಿ ಕೇರಳ ರಾಜ್ಯ ಸ್ಥಾಪನೆಯ ನಂತರ ಈ ಬ್ಯಾಂಕ್ ನಾಮಧೇಯ ಬದಲಿಸಿ ಕೇರಳ ರಾಜ್ಯ ಕೊ.ಅಪ್ ಬ್ಯಾಂಕ್ ಆಯಿತು. ಕೇರಳದಾದ್ಯಂತ ಏಕರೂಪದ ಕಾಯ್ದೆ ಸಲುವಾಗಿ ಶ್ರಮಹಾಕಲಾಯಿತು.

ಏಕೆಂದರೆ, 1909ರಿಂದ 1956 ವರೆಗೂ ಅಂದರೆ ಕೇರಳದ ಏಕೀಕರಣದ ತನಕವೂ ಬಡ ರೈತರ, ಸಾಮಾನ್ಯ ಜನತೆಯ ಪ್ರದೇಶವಾರು ಸೊಸೈಟಿ ಸಾಲದ ಪ್ರಶ್ನೆ ಭಾರೀ ಪ್ರಮಾಣದಲ್ಲಿತ್ತು. ನಂತರ 1957ರಲ್ಲಿ ಶ್ರೀ ಇ.ಎಂ.ಎಸ್ ನಂಬೂದಿರಿಪ್ಪಾಡ್ ಸರ್ಕಾರ ಅಧಿಕಾರಕ್ಕೆ ಬಂದ ಮೊದಲ ವರ್ಷವೇ ಸಹಕಾರಿ ಸೊಸೈಟಿ ವಿಸ್ತರಣೆಗೆ ನಾಂದಿ ಹಾಡಿತು. ಎರಡನೇ ಬಾರಿ ಅಧಿಕಾರಕ್ಕೆ ಬಂದಾಗ 1969ರಲ್ಲಿ ಇಎಂಎಸ್ ಸರ್ಕಾರ ಈ ಕೇರಳ ರಾಜ್ಯ ಸಹಕಾರಿ ಸಂಘಗಳ ಕಾಯ್ದೆಯನ್ನು ಜಾರಿಗೆ ತಂದಿತು. ಆ ಮೂಲಕ ಕೇರಳದ ವಿವಿಧ ರಂಗಗಳಾದ ಶಿಕ್ಷಣ, ಆಸ್ಪತ್ರೆ, ಸೇವಾವಲಯ ಇತ್ಯಾದಿಗಳಲ್ಲಿ ಸೊಸೈಟಿಗಳು ವ್ಯಾಪಕವಾಗಿ ತಲೆ ಎತ್ತಿದವು. ಅತ್ಯಂತ ದಕ್ಷತೆಯಿಂದ ಪ್ರಾಮಾಣಿಕವಾಗಿ ನಡೆಸುತ್ತ ಬರಲಾಯಿತು.

ಇಂದಿನ ಕೇರಳದಲ್ಲಿ ಸಹಕಾರಿ ನೋಟ

ನೊಂದಾಯಿತ ಸಹಕಾರೀ ಸಂಘಗಳ ಅಡಿಯಲ್ಲಿ ಪ್ರಸ್ತುತ 14,000 ಸಹಕಾರೀ ಸಂಘಗಳು ಕೆಲಸ ನಿರ್ವಹಿಸುತ್ತಿವೆ, ಅವುಗಳಲ್ಲಿ 10,503 ಸಹಕಾರೀ ಸಂಘಗಳ ಕಾರ್ಯನಿರ್ವಹಣೆ ತೃಪ್ತಿದಾಯಕವಾಗಿದೆ ಎಂದು ಮೌಲ್ಯಮಾಪನ ಮಾಡಲಾಗಿದೆ. ರಾಜ್ಯ ಸಹಕಾರೀ ಬ್ಯಾಂಕುಗಳು, ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು, 14 ಜಿಲ್ಲಾ ಸಹಕಾರೀ ಬ್ಯಾಂಕು, 60 ನಗರ ಬ್ಯಾಂಕು, 48 ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು ಮತ್ತು 1602 ಪ್ರಾಥಮಿಕ ಸಾಲ ಪೂರೈಸುವಂತಹ ಉನ್ನತ ಸಂಸ್ಥೆಗಳನ್ನು ಒಳಗೊಂಡಿದೆ. ಜನರ ಭಾಗವಹಿಸುವಿಗೆ ಮತ್ತು ಸಾಮೂಹಿಕ ಹೋರಾಟದ ಫಲವಾಗಿ ಈ ಸಾಮೂಹಿಕ ಸಹಕಾರಿ ಚಳುವಳಿ ಅಭಿವೃದ್ಧಿಗೊಂಡಿತು. ಇತರ ರಾಜ್ಯಗಳಲ್ಲಿನ ಚಳುವಳಿಗೆ ಹೋಲಿಸಿದರೆ, ಕೇರಳದಲ್ಲಿನ ಸಹಕಾರ ಚಳುವಳಿ ಹೆಚ್ಚು ಸಮಗ್ರ ಮತ್ತು ಸೃಜನಶೀಲವಾಗಿದೆ. ಕೇರಳದ ಅಭಿವೃದ್ದಿಯಲ್ಲಿ ಭೂ ಸುಧಾರಣೆಗಳು ಮಹತ್ವದ ಪಾತ್ರವಹಿಸಿದೆ. ಹೆಚ್ಚು ಬಡ್ಡಿಯನ್ನು ಪಡೆಯುವ ಹಿತಾಸಕ್ತಿಯಿಂದ ಕಾನೂನು ಬಾಹೀರವಾಗಿ ಸಾಲ ನೀಡುವವರ ಹಿಡಿತದಿಂದ ಜನರನ್ನು ಮುಕ್ತಗೊಳಿಸುವಲ್ಲಿ ಈ ಸಹಕಾರೀ ಸಂಘಗಳು ಹೆಚ್ಚಿನ ಮಹತ್ವದ ಪಾತ್ರವಹಿಸಿದೆ.

ಸೇವಾ ವಲಯವಾಗಿ ಕಾರ್ಯ ನಿರ್ವಹಿಸುವುದೊಂದೇ ಅಲ್ಲದೇ, ಸಹಕಾರ ಚಳುವಳಿ ಒಂದು ಉದ್ಯೋಗ ವಲಯವಾಗಿಯೂ ಸಹ ಕಾರ್ಯನಿರ್ವಹಿಸಿದೆ. ನೊಂದಾಯಿತ ಸಹಕಾರೀ ಸಂಘಗಳ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಸಹಕಾರೀ ಸಂಘಗಳಲ್ಲಿ ಸುಮಾರು 40 ಸಾವಿರ ಜನ ಉದ್ಯೋಗ ಪಡೆದಿದ್ದಾರೆ. ಒಂದು ವೇಳೆ ಒಟ್ಟೂ ಸಹಕಾರೀ ವಲಯದಲ್ಲಿ ಕಾರ್ಯನಿರ್ವಹಿಸುವ ನೌಕರರ ಸಂಖ್ಯೆಯನ್ನು ತೆಗೆದುಕೊಂಡರೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚಿನ ಜನರಿದ್ದಾರೆ. ನೇರವಾಗಿ ಮತ್ತು ಪರೋಕ್ಷವಾಗಿ ಅಗಾಧ ಸಂಖ್ಯೆಯ ಉದ್ಯೋಗಿಗಳನ್ನು ನೇಮಿಸಿಕೊಂಡ ವಲಯವೆಂಬ ಕಾರಣಕ್ಕಾಗಿ ಹೆಚ್ಚು ಮಹತ್ವ ಪಡೆದಿದೆ.

ಕೇರಳದ ಸಹಕಾರೀ ವಲಯ ಬೃಹತ್ ವೈಶಾಲ್ಯತೆಯನ್ನು ಹೊಂದಿದೆ. ಸಾಂಪ್ರದಾಯಿಕ, ಸಾಲ ನೀಡುವಿಕೆ, ಮಾರುಕಟ್ಟೆ ವ್ಯವಹಾರ, ಗ್ರಾಹಕ, ವಸತಿ, ಮಹಿಳಾ ಕಲ್ಯಾಣ, ಶಿಕ್ಷಣ, ಆರೋಗ್ಯ ಮತ್ತು ಕಟ್ಟಡ ನಿರ್ಮಾಣ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಎಲ್ಲ ಸಂಸ್ಥೆಗಳ ಕಾರ್ಯನಿರ್ವಹಣೆಯಿಂದಾಗಿ ಜನರಿಗೆ ಕಡಿಮೆ ವೆಚ್ಚದಲ್ಲಿ ಎಲ್ಲ ಸೇವೆಗಳ ಪ್ರಯೋಜನ ಪಡೆಯಲು ಸಾಧ್ಯವಾಗುತ್ತದೆ. ಆದ್ದರಿಂದಲೇ ಇಂದು ಚಳುವಳಿಯ ರಾಜ್ಯ, ದೇವರ ನಾಡು ಕೇರಳದ ಮತ್ತೊಂದು ಹೆಸರು ಸಹಕಾರಿ ಆಂದೋಲನವಾಗಿದೆ.

ಈ ವಲಯದ ಕಾರ್ಯನಿರ್ವಹಣೆಗೆ ಉತ್ತೇಜನ ನೀಡುವ ಕಾರಣಕ್ಕಾಗಿ ಎಡರಂಗ ಸರ್ಕಾರ ಯೋಜನೆಯನ್ನು ರೂಪಿಸುತ್ತದೆ. ಈ ವಲಯದ ರಕ್ಷಣೆಗೆ ಸಹಾಯಕವಾಗುವಂತಹ ಪ್ರಗತಿಪರ ಕಾರ್ಯಯೋಜನೆಯನ್ನು ಕೈಗೊಳ್ಳುತ್ತದೆ. 1999ರಲ್ಲಿ ಅಲ್ಲಿಯ ಸಿ.ಪಿ.ಐ(ಎಂ) ನೇತೃತ್ವದ ಸರಕಾರ ಕೇರಳ ಸಹಕಾರೀ ತಿದ್ದುಪಡಿ ಯೋಜನೆಯನ್ನು ಜಾರಿಗೆ ತಂದಿತು. ಇದೊಂದು ಮಹತ್ವಪೂರ್ಣ ಹೆಜ್ಜೆಯೇ ಆಯಿತು. ಈ ಅಧಿನಿಯಮವು ಸಹಕಾರೀ ಕ್ಷೇತ್ರವನ್ನು ಆಧುನೀಕರಿಸಿತು ಮತ್ತು ಹೊಸಯುಗದ ಸವಾಲುಗಳನ್ನು ಜಯಿಸಲು ಸಾಧ್ಯವಾಗುವ ಮಟ್ಟಕ್ಕೆ ಅದನ್ನು ಬೆಳೆಸಿತು. ರಾಜ್ಯ ಸರಕಾರವು ಸಹಕಾರ ಕ್ಷೇತ್ರವನ್ನು ಮುಂದುವರಿಸಿ ಕೊಂಡುಹೋಗಿ, ತನ್ನ ಸೇವೆಯನ್ನು ಜನಸಾಮಾನ್ಯರಿಗೆ ವಿಸ್ತರಿಸುವ ಸಲುವಾಗಿ ಪರಿಣಾಮಕಾರಿಯಾಗಿ ಮಧ್ಯಪ್ರವೇಶಿಸುತ್ತಿದೆ. ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ 2 ಲಕ್ಷರೂಪಾಯಿಗಳ ವರೆಗೆ ಸಾಲ ಮನ್ನಾ ಮಾಡಲಾಗುತ್ತಿದೆ. 270 ಕೋಟಿ ರೂಪಾಯಿ ಮೊತ್ತದ ಬೃಹತ್ ಬಡ್ಡಿ ದರವನ್ನು ಒಂದೇ ಬಾರಿ ಇತ್ಯರ್ಥ ಒಪ್ಪಂದದ ಮೂಲಕ ನೀಡಲಾಗಿದೆ. ಅಸಲಿಗಿಂತ ಬಡ್ಡಿದರ ಮೀರದಂತೆ ತಡೆಯುವ ನೀತಿಯನ್ನು ಜಾರಿಗೆ ತರಲಾಗಿದೆ. ಈ ಅವಧಿಯಲ್ಲಿ 2000 ಕೋಟಿ ರೂಪಾಯಿಯನ್ನು ಮನ್ನಾ ಮಾಡಲಾಗಿದೆ. ಕೃಷಿ ಬಿಕ್ಕಟ್ಟಿನ ಸಂದರ್ಭದಲ್ಲಿ 9% ಇದ್ದ ಬಡ್ಡಿದರವನ್ನು 5.5%–6% ಕ್ಕೆ ಇಳಿಸಲಾಗಿದೆ. ಇದರ ಪರಿಣಾಮವಾಗಿ ರೈತರಿಗೆ 170 ಕೋಟಿ ರೂಪಾಯಿ ಲಾಭವಾಗಿದೆ. ಭತ್ತದ ಕೃಷಿಗೆ ಉತ್ತೇಜನ ನೀಡಲು ಬಡ್ಡಿರಹಿತ ಸಾಲ ಯೋಜನೆಯನ್ನು ರೂಪಿಸಲಾಗಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗದಂತೆ ತಡೆಯಲು ಸಹಕಾರಿ ಸಂಘಗಳು ಪರಿಣಾಮಕಾರಿಯಾಗಿ ಮಧ್ಯಪ್ರವೇಶಿಸಿದೆ. ಅಗತ್ಯ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ವಿತರಣೆಮಾಡಲು 130 ಕೋಟಿ ರೂಪಾಯಿಗಳನ್ನು ವ್ಯಯಿಸಲಾಗಿದೆ.

ಯೋಜನಾ ಆಯೋಗ ಮತ್ತು ಎ. ವೈದ್ಯನಾಥನ್ ವರದಿಯ ಪರಿಣಾಮ

ಕೇಂದ್ರ ಸರಕಾರವು ಜಾಗತೀಕರಣ ನೀತಿಯನ್ನು ಸಹಕಾರಿ ಕ್ಷೇತ್ರಕ್ಕೂ ವಿಸ್ತರಿಸಲು ಪ್ರಯತ್ನಿಸುತ್ತಿದೆ. ನೆಹರೂ ನೀತಿಗಳನ್ನು ಇತರ ವಲಯಗಳಲ್ಲಿ ತಿರಸ್ಕರಿಸಿದಂತೆ ಈ ವಲಯದಲ್ಲೂ ತಿರಸ್ಕರಿಸಲಾಗಿದೆ. ಸಾರ್ವಜನಿಕ ವಲಯದಂತೆ, ದೇಶದಲ್ಲಿ ಸ್ವಾವಲಂಬನೆ ನೆಲೆಸಲು ಸಹಕಾರಿ ಕ್ಷೇತ್ರ ಪ್ರಮುಖ ಪಾತ್ರ ವಹಿಸುತ್ತದೆಂಬ ನಿಲುವನ್ನು ನೆಹರೂ ಅವರು ಹೊಂದಿದ್ದರು. ಹಾಗಾಗಿ, ಸಹಕಾರಿ ಕ್ಷೇತ್ರವನ್ನು ಬಲಪಡಿಸುವುದು ಸರಕಾರಗಳ ಕರ್ತವ್ಯವೆಂದು ಪರಿಗಣಿಸಲಾಗಿತ್ತು. ಆದರೆ ಈ ಎಲ್ಲ ನೀತಿಗಳನ್ನು ಈಗ ತಿದ್ದುಪಡಿಗೆ ಒಳಪಡಿಸಲಾಗುತ್ತಿದೆ.

ಈ ನೀತಿಯ ಭಾಗವಾಗಿಯೇ ಕೇಂದ್ರ ಸರಕಾರವು ಎ.ವೈದ್ಯನಾಥನ್ ನಾಯಕತ್ವದ ಅಡಿಯಲ್ಲಿ ಟಾಸ್ಕ ಫೋರ್ಸ ಒಂದನ್ನು ರಚಿಸಿದೆ. ಈ ಸಮಿತಿಯ ವರದಿಯನ್ನು ವಿಸ್ತಾರವಾಗಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಮತ್ತು ರಾಜ್ಯಗಳ ಸಹಕಾರೀ ಮಂತ್ರಿಗಳ ಮುಂದೆ ಚರ್ಚಿಸಲಾಯಿತು. ಪ್ರಬಲ ಪ್ರತಿಭಟನೆಯ ಫಲವಾಗಿ ಈ ವರದಿಯನ್ನು ಕೇಂದ್ರ ಸರಕಾರವು ಮಾರ್ಪಾಡು ಮಾಡಲು ಮುಂದಾಯಿತು. ಆದಾಗ್ಯೂ, ಸಹಕಾರಿ ಕ್ಷೇತ್ರವನ್ನು ಅಡ್ಡಿಪಡಿಸುವ ನಿಬಂದನೆಗಳು ಇನ್ನೂ ಇವೆ. ಕೇಂದ್ರ ಯೋಜನಾ ಆಯೋಗದ ವರದಿಯೂ ಕೂಡ ಸಹಕಾರಿ ಕ್ಷೇತ್ರಕ್ಕೆ ಹಾನಿಕಾರಕವಾದುದಾಗಿದೆ.

(ಭಾಗ–2 ಮುಂದಿನ ಸಂಚಿಕೆಯಲ್ಲಿ)

ಫೇಸ್ ಬುಕ್ಕಿನಿಂದ

ಗಲ್ಫ್ ರಾಷ್ಟ್ರದಲ್ಲಿ ದುಡಿಯುವ ಕೇರಳದ ಅನಿವಾಸಿಗಳಿಗಾಗಿ ಅಲ್ಲಿನ ಸರಕಾರ ಒಂದು ಅಧಿಕೃತವಾದ ವೇದಿಕೆಯನ್ನು ರಚಿಸಿದೆ. ಕರ್ನಾಟಕ ಸರ್ಕಾರ, ಕನಿಷ್ಠ ಕರಾವಳಿ, ಮಲೆನಾಡಿನ ಜನಪ್ರತಿನಿಧಿಗಳಿಗೆ, ಇಲ್ಲಿನ ರಾಜಕೀಯ ಪಕ್ಷಗಳಿಗೆ ಗಲ್ಫ್ ಸಂತ್ರಸ್ತರ ಪರ ಧ್ವನಿ ಎತ್ತಬೇಕು ಎಂದು ಅನಿಸದಿರುವುದು ಖೇದಕರ.

– *ಮುನೀರ್ ಕಾಟಿಪಳ್ಳ*

ನಮ್ಮ ಟ್ವೀಟ್

ರಾಜದೀಪ ಸರದೇಸಾಯಿ
(ಇಂಡಿಯಾ ಟುಡೆ ಟಿವಿ ಆಂಕರ್)

@sardesairajdeep

ಪ್ರತಿದಿನ ಪ್ರತಿ ಸುದ್ದಿ ಚಾನೆಲ್ ಒಬ್ಬ (ಸಾಧ್ಯವಾದರೆ ಟೋಪಿ ಇರುವ) ಮೌಲಾನಾನನ್ನು ರಾಕ್ಷಸೀಕರಿಸಲಿಕ್ಕಾಗಿ ಹುಡುಕುತ್ತದೆ.. ..ಇಸ್ಲಾಮ್–ಭೀತಿ ಟಿವಿ ಪತ್ರಕಾರಿತೆಯನ್ನು ಕಿತ್ತು ತಿನ್ನುತ್ತಿದೆ: ನಮ್ಮಲ್ಲಿ ಕೆಲವರಿಗಿಂತ ಒಬ್ಬ ಪಕೋಡ ಮಾರುವವನಿಗೆ ಹೆಚ್ಚಿನ ಘನತೆ ಮತ್ತು ಪ್ರಾಮಾಣಿಕತೆ ಇದೆ ಅಂತ ನನ್ನ ನಂಬಿಕೆ

ಕೆ.ಯು.ಐ.ಡಿ.ಎಫ್.ಸಿ. ಹಗರಣ ಶಾಸಕ ಲೋಬೊ, ಮೊಯ್ದಿನ್ ಬಾವ ಭಾಗಿ : ಮುನೀರ್

ಮಂಗಳೂರಿನಲ್ಲಿ ಕೆ.ಯು.ಐ.ಡಿ.ಎಫ್.ಸಿ. ಕೈಗೆತ್ತಿಕೊಂಡಿರುವ 'ಸೀವೇಜ್ ಪಂಪಿಂಗ್ ಮೈನ್ ದುರಸ್ತಿ ಮತ್ತು ಬದಲಾವಣೆ ಯೋಜನೆ' ಹಾಗೂ ಗುತ್ತಿಗೆ ನೀಡುವಿಕೆಯಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮುಖ್ಯಮಂತ್ರಿಗೆ ದೂರು ನೀಡಿದ್ದಾರೆ. ಫೆ. 13 ರಂದು ಮುನೀರ್ ಕಾಟಿಪಳ್ಳ ಅವರು ಫೇಸ್ ಬುಕ್ ಲೈವ್ ನಲ್ಲಿ ಹಗರಣಗಳ ಬಗ್ಗೆ ವಿವರ ನೀಡಿದ್ದಾರೆ.

ಮಂಗಳೂರು ನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟ ಒಳಚರಂಡಿ ವ್ಯವಸ್ಥೆಗಳು ಹಳೆಯದಾಗಿವೆ. ಏರಿಕೆಯಾಗಿರುವ ಜನಸಂಖ್ಯೆ, ಒಳಚರಂಡಿಯ ಧಾರಣಾ ಸಾಮರ್ಥ್ಯವನ್ನು ಪರಿಗಣಿಸಿ, ಹಳೆಯ ಒಳಚರಂಡಿ ವ್ಯವಸ್ಥೆಯನ್ನು ಉತ್ತಮಗೊಳಿಸುವ, ಮೇಲ್ಮಟ್ಟಕ್ಕೆ ಏರಿಸುವ ಯೋಜನೆಯನ್ನು ಕೆ.ಯು.ಐ.ಡಿ.ಎಫ್.ಸಿ. ಕೈಗೆತ್ತಿಕೊಂಡಿವೆ. ಆ ಯೋಜನೆಯ ಪ್ರಕಾರ ಮಂಗಳೂರಿನಲ್ಲಿ ಎಪ್ಪತ್ತರ ದಶಕದಲ್ಲಿ ಅಳವಡಿಸಿರುವ ಈಗ ಹಳೆಯದಾಗಿರುವ ಮತ್ತು ಹದಗೆಟ್ಟಿರುವ ಸೀವೇಜ್ ಪಂಪಿಂಗ್ಮೇನ್' ಅನ್ನು ದುರಸ್ತಿಗೊಳಿಸುವುದು, ಬದಲಾಯಿಸುವುದು ಪ್ರಮುಖವಾಗಿ ಆಗಬೇಕಾದ ಕಾರ್ಯವಾಗಿದೆ.

ಈ ಸೀವೇಜ್ ಪಂಪಿಂಗ್ ಮೈನ್ ದುರಸ್ತಿ ಮತ್ತು ಬದಲಾವಣೆಗೆ ಇತ್ತೀಚೆಗೆ ಟೆಂಡರ್ ಪ್ರಕ್ರಿಯೆ ನಡೆದಿದೆ. ಇದರಲ್ಲಿ ಭಾಗವಹಿಸಿರುವ ಹೈದರಾಬಾದ್ ಮೂಲದ ಡಿಆರ್ಎಸ್ ಹಾಗೂ ಬಳ್ಳಾರಿ ಮೂಲದಅಕಿಲ್ ಎಂಬ ಕಂಪನಿಗಳು ಹೊಂದಾಣಿಕೆಯಡಿ ಗುತ್ತಿಗೆ ಪಡೆದುಕೊಂಡಿವೆ. ಗುತ್ತಿಗೆ ನೀಡುವಿಕೆಯ ಸಂದರ್ಭ ನಡೆದಿರುವ ಪ್ರಕ್ರಿಯೆಗಳು ಈ ಯೋಜನೆಯಲ್ಲಿ ಅವ್ಯವಹಾರ ನಡೆದಿರುವ ಸಾಧ್ಯತೆಗಳು ಮೇಲ್ನೋಟಕ್ಕೆ ಗೋಚರಿಸುತ್ತದೆ ಎಂದು ಮುನೀರ್ ಕಾಟಿಪಳ್ಳ ಆರೋಪಿಸಿದ್ದಾರೆ.

ಈ ಯೋಜನೆಗೆ ಆರಂಭದಲ್ಲಿ 60 ಕೋಟಿ ರೂ. ವೆಚ್ಚವನ್ನು ಕೆ.ಯು.ಐ.ಡಿ.ಎಫ್.ಸಿ. ನಿಗದಿ ಮಾಡಿತ್ತು. ಆ ನಂತರ ಪಂಪಿಂಗ್ ಮೇನ್ ಬದಲಾಯಿಸುವಾಗ ಮ್ಯಾನ್ ಹೋಲುಗಳ ದುರಸ್ತಿಗಾಗಿ 8 ಕೋಟಿರೂ., ರಸ್ತೆ ದುರಸ್ತಿಗಾಗಿ 5 ಕೋಟಿ ರೂ. ಮತ್ತು ಇತರ ವೆಚ್ಚ ಹಾಗೂ ಜಿಎಸ್.ಟಿ. ಹೀಗೆ ವಿವಿಧ ಹೆಸರಿನಲ್ಲಿ ಟೆಂಡರ್ ಸಂದರ್ಭ ಮೊತ್ತವನ್ನು 94 ಕೋಟಿ ರೂ. ಗೆ ಹೆಚ್ಚಿಸಲಾಯಿತು. ಇದು ಆರಂಭದಲ್ಲಿ ನಿಗದಿ ಮಾಡಿದ ಮೊತ್ತಕ್ಕಿಂತಲೂ ಶೇ.60 ರಷ್ಟು ಹೆಚ್ಚು. ಈ ಪ್ರಮಾಣದ ಏರಿಕೆ ಹಾಗೂ ಗುತ್ತಿಗೆಯಲ್ಲಿ ಭಾಗವಹಿಸಿದ ಎರಡು ಕಂಪನಿಗಳು ಕೊನೆಗೆ ಜೊತೆಯಾಗಿ ಗುತ್ತಿಗೆ ಪಡೆದುಕೊಂಡಿರುವುದನ್ನು, ಎಂಪವರ್ ಕಮಿಟಿ ಯಾವುದೇ ತಕರಾರುಗಳಿಲ್ಲದೆ ಈ ಪ್ರಕ್ರಿಯೆಗಳಿಗೆ ಅಂಗೀಕಾರ ನೀಡಿರುವುನ್ನು ನೋಡಿದರೆ ಇದರಲ್ಲಿ ಅವ್ಯವಹಾರ ನಡೆದಿರುವುದು ಸ್ಪಷ್ಟ ಎಂದು ಮುನೀರ್ ಕಾಟಿಪಳ್ಳ ಆರೋಪ ಮಾಡಿದ್ದಾರೆ.

ಮಂಗಳೂರಿನ ನಾಗರಿಕರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವ ಹೆಸರಿನಲ್ಲಿ, ಜನತೆಯ ತೆರಿಗೆಯ ದುಡ್ಡನ್ನು ದುರ್ಬಳಕೆ ಮಾಡುವ, ದೋಚುವ ಪ್ರಯತ್ನವಾಗಿದೆ. ಕೆ.ಯು.ಐ.ಡಿ.ಎಫ್.ಸಿ. ಮಂಗಳೂರು ಮತ್ತು ಬೆಂಗಳೂರು ಕಚೇರಿಯ ಅಧಿಕಾರಿಗಳು ಶಾಮೀಲಾಗದೆ ಈ ರೀತಿ ಅವೈಜ್ಞಾನಿಕವಾಗಿ ಏರಿಕೆಯಾದ ಯೋಜನಾ ವೆಚ್ಚಕ್ಕೆ ಅನುಮೋದನೆ ಪಡೆಯುವುದು ಅಸಾಧ್ಯ. ಕೆ.ಯು.ಐ.ಡಿ.ಎಫ್.ಸಿ. ಎಂಪವರ್ ಕಮಿಟಿ ಯಾವುದೇ ತಕರಾರುಗಳಿಲ್ಲದೆ ಈ ಏರಿಕೆ ಯೋಜನೆ, ಟೆಂಡರಿಗೆ ಅನುಮೋದನೆ ನೀಡಿರುವುದು ಇದಕ್ಕೊಂದು ಉದಾಹರಣೆ.

ಅದಲ್ಲದೆ ಸ್ಥಳೀಯ ಜನಪ್ರತಿನಿಧಿಗಳು ಈ ರೀತಿಯ ಭ್ರಷ್ಟಗೊಂಡಿರುವ ಯೋಜನೆಗೆ ಬೆಂಬಲವಾಗಿ ನಿಂತಿರುವುದು, ಜನಪ್ರತಿನಿಧಿಗಳು ಇದರಲ್ಲಿ ಶಾಮೀಲಾಗಿರುವ ಸಾಧ್ಯತೆಗಳಿವೆ. ಶಾಸಕ ಜೆ.ಆರ್. ಲೋಬೊ ಮಂಗಳೂರು ಮಹಾನಗರ ಪಾಲಿಕೆಗೆ ಈ ಹಿಂದೆ ಕಮೀಷನರ್ ಆಗಿದ್ದವರು. ಸಹಜವಾಗಿ ಇಂತಹ ಯೋಜನೆಗಳ ಕುರಿತು ಅವರಿಗೆ ಅಮೂಲಾಗ್ರ ಮಾಹಿತಿಗಳಿರುತ್ತವೆ. ಆದರೂ ಅವರು 94 ಕೋಟಿ ರೂಪಾಯಿಗೆ ಏರಿಕೆಯಾಗಿರುವ, ಸಾರ್ವಜನಿಕರ ದುಡ್ಡನ್ನು ದುರ್ಬಳಕೆ ಮಾಡುವ ಯೋಜನೆಗೆ ಬೆಂಬಲವಾಗಿ ನಿಂತಿರುವುದು ಮತ್ತು ಶಾಸಕ ಮೊಯ್ದಿನ್ ಬಾವ ವಿಷಯದ ಅರಿವಿದ್ದರೂ ಮೌನ ವಹಿಸಿರುವುದು ಇವರು ಅವ್ಯವಹಾರದಲ್ಲಿ ಭಾಗಿಯಾಗಿರುವ ಸಾಧ್ಯತೆಗಳನ್ನು ತೋರುತ್ತದೆ ಎಂದು ದೂರಿದ್ದಾರೆ.

ಜನರಿಗೆ ಮೂಲಭೂತ ಸೌಲಭ್ಯ ಒದಗಿಸುವ ಈ ಯೋಜನೆಯನ್ನು ದುರುಪಯೋಗಪಡಿಸಿ ಸರಕಾರದ ನಿಧಿಯನ್ನು ತಿಂದು ಹಾಕುವ ಅವ್ಯವಹಾರವನ್ನು ಒಪ್ಪಿಕೊಳ್ಳಲಾಗದು. 360 ಕೋಟಿರೂ. ಎಡಿಬಿ ಸಾಲದಿಂದ ಈ ಹಿಂದೆ ಕುಡ್ಸೆಂಪ್ ಯೋಜನೆಯ ಹೆಸರಿನಲ್ಲಿ ನಡೆದ ಭ್ರಷ್ಟಾಚಾರ ಇನ್ನೂ ಜನಮಾನಸದಿಂದ ಮರೆಯಾಗಿಲ್ಲ. ಅಂದು 360 ಕೋಟಿ ರೂ. ಬಳಸಿ ರೂಪಿಸಿದ ಒಳಚರಂಡಿ ವ್ಯವಸ್ಥೆ ಕಳಪೆ ಕಾಮಗಾರಿಯಿಂದ ಈವರೆಗೂ ನಾಗರಿಕರ ಬಳಕೆಗೆ ಸಿಕ್ಕಿಲ್ಲ. ಆ ಕುರಿತು ಡಿವೈಎಫ್ಐ ನೀಡಿದ ದೂರನ್ನು ನಗರಾಭಿವೃದ್ಧಿ ಸಚಿವರು ಅಂಗೀಕರಿಸಿ, ಸಿಐಡಿ ತನಿಖೆಯ ಘೋಷಣೆ ಮಾಡಿದ್ದರೂ ಈವರಗೆ ತನಿಖೆಗೆ ಆದೇಶ ನೀಡದೆ ಕುಡ್ಸೆಂಪ್ ಭ್ರಷ್ಟರನ್ನು ರಕ್ಷಿಸುತ್ತಿದೆ ಎಂದು ಮುನೀರ್ ಕಾಟಿಪಳ್ಳ ಆರೋಪಿಸಿದ್ದಾರೆ.

ಈಗ ಮತ್ತೊಂದು ಸುತ್ತಿನ ಭ್ರಷ್ಟಾಚಾರಕ್ಕೆ ಪಂಪಿಂಗ್ ಮೈನ್ ಬದಲಾವಣೆಯ ಯೋಜನೆಯ ಮೂಲಕ ಅನುವು ಮಾಡಿಕೊಡಲಾಗುತ್ತಿದೆ. ಎಡಿಬಿ ಎರಡನೇ ಹಂತದ ಹಣಕಾಸಿನ ಯೋಜನೆಯಡಿ ರೂಪಿಸಲಾಗುವ ಒಳಚರಂಡಿ, ಕುಡಿಯುವ ನೀರಿನ ಯೋಜನೆಯ ಕುರಿತು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಣೆ, ಮಾಹಿತಿ ನೀಡುವಿಕೆಗಾಗಿಕೆ .ಯು.ಐ.ಡಿ.ಎಫ್.ಸಿ. ಫೆ.15 ರಂದು ಸಾರ್ವಜನಿಕ ಸಭೆ ಕರೆಯಲಾಗಿದೆ. ಈ ಸಭೆಯಲ್ಲಿ ಸಂಘಟನೆಯು ಪ್ರಶ್ನೆಗಳನ್ನು ಎತ್ತಲಿದೆ ಎಂದು ಅವರು ಹೇಳಿದರು.

ಹಾಗಾಗಿ ಮುಖ್ಯಮಂತ್ರಿ ಈ ಕುರಿತು ಮಧ್ಯ ಪ್ರವೇಶಿಸಬೇಕು, ದೂರನ್ನು ಪರಿಗಣಿಸಿ ಈಗ ಅಂಗೀಕಾರಗೊಂಡಿರುವ ಟೆಂಡರ್, ಯೋಜನೆಗೆ ತಡೆ ನೀಡಬೇಕು. ನಡೆದಿರುವ ಅವ್ಯವಹಾರವನ್ನು ಪತ್ತೆ ಹಚ್ಚಲು ಉನ್ನತ ತನಿಖೆಗೆ ಆದೇಶಿಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಲು ಕ್ರಮವಹಿಸಲು ಒತ್ತಾಯಿಸಿದ್ದಾರೆ. ಸ್ಪಂದಿಸದೇ ಇದ್ದರೆ ಸಮಾನ ಮನಸ್ಕ ಸಂಘಟನೆಗಳ ಜೊತೆಗೂಡಿ ಯೋಜನೆಯಲ್ಲಿ ನಡೆದಿರುವ ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದು ಮುನೀರ್ ಕಾಟಿಪಳ್ಳ ಎಚ್ಚರಿಸಿದ್ದಾರೆ.

ಕೆ.ಯು.ಐ.ಡಿ.ಎಫ್.ಸಿ. ಫೆ.15 ರಂದು ನಡೆಸಿದ ಸಾರ್ವಜನಿಕ ಸಭೆಯಲ್ಲಿ ಮುನೀರ್ ಕಾಟಿಪಳ್ಳ, ಸುನೀಲ್ ಕುಮಾರ್ ಬಜಾಲ್ ಮತ್ತಿತರರು ಈ ಬಗ್ಗೆ ಪ್ರಶ್ನೆಗಳನ್ನು ಎತ್ತಿದಾಗ, ಅವುಗಳಿಗೆ ಉತ್ತರವಿಲ್ಲದ ಮೊಯ್ದಿನ್ ಬಾವ ಮತ್ತು ಅವರ ಬೆಂಬಲಿಗರು ಏರುದನಿಯಲ್ಲಿ ಮಾತನಾಡಿ ತೀವ್ರ ಚಕಮಕಿ ನಡೆಯಿತು ಎಂದೂ ವರದಿಯಾಗಿದೆ.

ಕಾಯಕ ಜೀವಿಗಳನ್ನು ನಿರ್ಲಕ್ಷಿಸಿದ ಬಜೆಟ್ : ಸಿಐಟಿಯು

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ಸಾಮಾನ್ಯ ಜನರ ಹಾಗು ದುಡಿಯುವ ವರ್ಗದ ಬೇಡಿಕೆಗಳಿಗೆ ಗೌರವ ಹಾಗು ಮಾನ್ಯತೆ ನೀಡದ ಖಂಡನಾರ್ಹ ಬಜೆಟ್ಟಾಗಿದೆ. "ಒಲ್ಲೆನೆಂಬುದು ವೈರಾಗ್ಯ, ಒಲಿವೆನೆಂಬುದು ಕಾರ್ಯಗುಣ"ವೆಂಬ ಬಸವಣ್ಣ ವಚನದೊಂದಿಗೆ ಪ್ರಾರಂಭವಾದ ಈ ಬಜೆಟ್ ಕೇವಲ ವೈರಾಗ್ಯವನ್ನು ಪ್ರದರ್ಶಿಸಿ ಕಾಯಕ ಜೀವಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದೆ ಎಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ತೀವ್ರ ಅಸಮಧಾನ ವ್ಯಕ್ತಪಡಿಸಿದೆ.

ಈ ಬಜೆಟ್ ಸಾಮಾನ್ಯ ಪ್ರಜೆಗಳ ದಿನ ನಿತ್ಯದ ಬದುಕಿನ ಹಾಗು ಮನೆಯ ಲೆಕ್ಕವಾಗದೆ ಕೇವಲ ಮುಂದಿನ ಚುನಾವಣೆಗಳಲ್ಲಿ ಮತಗಳಿಸುವ ಜವಾಬ್ದಾರಿಯುತವಲ್ಲದ ಲೆಕ್ಕದ ಗಂಟಾಗಿದೆ.

ಸುಮಾರು 2.1 ಲಕ್ಷಕೋಟಿ ಬಜೆಟ್‌ನಲ್ಲಿ ಕರ್ನಾಟಕದ 'ಜನತೆಯ ಹಾಗು ಯುವದುಡಿಮೆ ಶಕ್ತಿಗೆ ಯೋಗ್ಯ ಉಧ್ಯೋಗವಕಾಶಗಳ ಸೃಷ್ಟಿಗೆ ಯಾವುದೇ ನಿರ್ದಿಷ್ಠ ಯೋಜನೆಗಳನ್ನು ಈ ಬಜೆಟ್ ಹೊಂದಿಲ್ಲ. ದುಡಿಯುವ ಜನರ ಕನಿಷ್ಟ ವೇತನ, ಉಧ್ಯೋಗ ಭದ್ರತೆ, ಸಮಾನ ಕೆಲಸಕ್ಕೆ ಸಮಾನ ವೇತನ, ಸಾಮಾಜಿಕ ಭದ್ರತಾ ಯೋಜನೆಗಳ ಜಾರಿ, ವಸತಿ ಯೋಜನೆಗಳಿಗೆ ಅನುಕೂಲವಾಗುವ ಹಣವನ್ನು ಮೀಸಲಿಟ್ಟಿಲ್ಲ.

ಕಾರ್ಮಿಕ ಹಾಗು ಕುಶಲತೆ ಅಭಿವೃದ್ಧಿ ಯೋಜನೆಗಳಿಗೆ ಸುಮಾರು ಶೇ.25ರಷ್ಟು ಅನುದಾನ ಕಡಿತಗೊಳಿಸಲಾಗಿದೆ. ವಸತಿ ಯೋಜನೆಗಳಿಗೆ ನೀಡಲಾಗುತ್ತಿರುವ ಅನುದಾನವನ್ನು ಶೇ.17ರಷ್ಟು ಕಡಿತಗೊಳಿಸಲಾಗಿದೆ. ಈ ಅವಧಿಗೆ ಕೇವಲ 3941 ಕೋಟಿಗಳು ಮಾತ್ರ ಮೀಸಲಿಡಲಾಗಿದೆ. ಇದು ಅಲ್ಪ ಮೊತ್ತದ ಹಾಗು ಜಾರಿಮಾಡದೆ ಉಳಿಯುವ ಯೋಜನೆಯಾಗುತ್ತದೆ. ಬಜೆಟ್‌ನಲ್ಲಿ ಮಂಜೂರಾದ ಯೋಜನಾ ವೆಚ್ಚಗಳಲ್ಲಿ ಶೇ 50ರಷ್ಟು ಮಾತ್ರ ಬಳಿಕೆಯಾಗಿರುವ ಹಿಂದಿನ ಅನುಭವದ ಆಧಾರದಲ್ಲಿ ಈ ಬಜೆಟ್ ನ ಘೋಷಣೆಗಳು ಕೇವಲ ಘೋಷಣೆಗಳಾಗಿಯೇ ಉಳಿಯುವ ಸಾಧ್ಯತೆಗಳೇ ಹೆಚ್ಚು ಎಂದು ಸಿಐಟಿಯು ಅಭಿಪ್ರಾಯ ಪಡುತ್ತದೆ.

ವಿವಿಧ ಸಮುದಾಯಗಳಿಗೆ ಹಾಗು ಜಾತಿಗಳಿಗೆ ಹಣವನ್ನು ಮೀಸಲಿಟ್ಟು ಓಟಿನ ಬೇಟೆಯ ಹುನ್ನಾರವಾಗಿರುವ ಈ ಬಜೆಟ್ ಸಂಘಟಿತ ಹಾಗು ಅಸಂಘಟಿತ ಕಾರ್ಮಿಕರ ದೀರ್ಘಕಾಲದ ಬೇಡಿಕೆಗಳನ್ನು ಈಡೇರಿಸುವ ಯಾವುದೇ ಕ್ರಮಗಳನ್ನು ಪ್ರಕಟಿಸಲಿಲ್ಲ.

ಕಾರ್ಮಿಕ-ಮಾಲಿಕರ-ಸರ್ಕಾರದ ಪ್ರತಿನಿಧಿಗಳನ್ನು ಒಳಗೊಂಡ "ಕರ್ನಾಟಕ ಕಾರ್ಮಿಕ ಸಮ್ಮೇಳನವನ್ನು" ನಡೆಸಲು ತಾತ್ವಿಕವಾಗಿ ಒಪ್ಪಿಗೆ ನೀಡಿದ್ದ ಸರಕಾರ ಈ ಬಜೆಟ್ ನಲ್ಲಿ ಪ್ರಸ್ಥಾಪ ಮಾಡಿಲ್ಲ. ಅನಿಷ್ಟ ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ನಿಯಂತ್ರಣಗೊಳಿಸುವ ಯಾವ ಕಾರ್ಯಕ್ರಮವು ಈ ಬಜೆಟ್‌ನಲ್ಲಿಲ್ಲ. ಸತತವಾಗಿ ಉತ್ತಮಗೊಳ್ಳುತ್ತಿರುವ ರಾಜ್ಯದ ಉತ್ಪಾದನಾ ಸಾಮರ್ಥ್ಯಕ್ಕೆ ಕೊಡುಗೆ ನೀಡುತ್ತಿರುವ ಕಾರ್ಮಿಕ ವರ್ಗದ ಭವಿಷ್ಯ ರೂಪಿಸುವ ಯಾವುದೆ ಕಾರ್ಯಕ್ರಮಗಳು ಹಾಗು ನೀತಿಗಳು ಈ ಬಜೆಟ್‌ನಲ್ಲಿರುವುದಿಲ್ಲ. ಇದು ಕಾರ್ಮಿಕ ವರ್ಗದ ನಿರೀಕ್ಷೆಯನ್ನು ಹುಸಿಗೊಳಿಸಿದೆ.

ಸರ್ಕಾರಿ ಯೋಜನೆಗಳನ್ನು ಜಾರಿ ಮಾಡುವ ಸ್ಕೀಂ ಕಾರ್ಮಿಕರಿಗೆ ನಿರೀಕ್ಷಿತ ಬೆಂಬಲವನ್ನು ಈ ಬಜೆಟ್ ನೀಡಲ್ಲ. ಹಾಲಿ ಇರುವ ಅಂಗನವಾಡಿ ಕೇಂದ್ರಗಳ ಸ್ಥಿತಿಯನ್ನು ಉತ್ತಮಗೊಳಿಸಲು ಹಾಗು ಗರ್ಭಿಣಿ ಬಾಣಂತಿಯರಿಗೆ ಅಂಗನವಾಡಿ ಕೇಂದ್ರಗಳ ಮೂಲಕ ಉತ್ತಮ ಬೆಂಬಲವನ್ನು ನೀಡುವ ಕ್ರಮಗಳನ್ನು ಪ್ರಕಟಿಸಲಿಲ್ಲ. ಬದಲಾಗಿ ಸತ್ಯಕ್ಕೆ ದೂರವಾದ ರೀತಿಯಲ್ಲಿ ಫಲಾನುಭವಿಗಳ ಅಂಕಿ-ಅಂಶಗಳನ್ನು ಭಾಷಣದಲ್ಲಿ ಹೇಳಲಾಗಿದೆ. ಗರ್ಭಿಣಿ ಬಾಣಂತೀಯರನ್ನು ಕೇಂದ್ರಗಳ ಹತ್ತಿರ ಸೆಳೆಯುವ ಉತ್ತಮ ಯೋಜನೆಗಳ ಜಾರಿಗೆ ನೀಡಲಾದ ಯಾವ ಸಲಹೆಗಳನ್ನು ಸರ್ಕಾರ ಸ್ವೀಕರಿಸಿಲ್ಲ.

ರಾಜ್ಯದಲ್ಲಿನ ಸುಮಾರು 1.18 ಲಕ್ಷ ಅಕ್ಷರದಾಸೋಹ (ಬಿಸಿಯೂಟ ತಯಾರಿ) ಕಾರ್ಮಿಕರಿಗೆ ಭರವಸೆ ನೀಡಿದ ರೀತಿಯಲ್ಲಿ ವೇತನ ಹೆಚ್ಚಳವನ್ನು ಈ ಬಜೆಟ್‌ನಲ್ಲಿ ಪ್ರಕಟನೆ ಮಾಡಿಲ್ಲ. ಮುಖ್ಯ ಅಡಿಗೆ ಮಾಡುವ ಕಾರ್ಮಿಕರು ಹಾಗು ಸಹಾಯಕಿಯರು ಕ್ರಮವಾಗಿ ಕೇವಲ ಮಾಸಿಕ ರೂ. 2,200/- ಹಾಗು ರೂ.2,100/- ವೇತನಕ್ಕೆ ದುಡಿಯುವ ಅಮಾನವೀಯ ಸ್ಥಿತಿಯಲ್ಲಿದ್ದಾರೆ. ಪೋಲೀಸ್ ಠಾಣೆಗಳಲ್ಲಿ ಹಾಗು ಕಚೇರಿಗಳಲ್ಲಿ ದುಡಿಯುವ ಸಫಾಯಿ ಕರ್ಮಚಾರಿಗಳಿಗೆ ಕೇವಲ ರೂ.3000/- ವೇತನ ನೀಡಲಾಗುತ್ತದೆ. ಈ ಅಮಾನವೀಯ ಶೋಷಣೆಗೆ ಪರಿಹಾರ ನೀಡುವ ಯಾವುದೇ ಸಾಮಾಜಿಕ ನೀತಿಯ ಪ್ರದರ್ಶನವು ಸಹ ಈ ಬಜೆಟ್‌ನಲ್ಲಿಲ್ಲ.

ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳಿಂದ ಯಾವುದೇ ರೀತಿಯಲ್ಲಿ ಭಿನ್ನವಲ್ಲದ ಬಜೆಟ್ ಇದಾಗಿದೆ. ಕೃಷಿ ರಂಗಕ್ಕೆ ಪ್ರಾಮುಖ್ಯತ್ವ ಎಂಬ ಘೋಷಣೆಗೆ ಮಾತ್ರ ಈ ಬಜೆಟ್ ಸೀಮಿತವಾಗಿದೆ. ಕಳವಳ ಸೃಷ್ಟಿಸುವ ಪ್ರಮಾಣದಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಕೃಷಿಯನ್ನು ತ್ಯಜಿಸಿ, ನಗರಗಳಿಗೆ ವಲಸೆ ಬರುವ ಕಾರ್ಮಿಕರನ್ನು ತಡೆಯುವ ಹಾಗು ಗ್ರಾಮೀಣ ಉದ್ಯೋಗ ಅವಕಾಶಗಳನ್ನು ಬಲಗೊಳಿಸುವ ಯಾವ ಯೋಜನೆಗಳು ಈ ಬಜೆಟಿನಲ್ಲಿ ಘೋಷಿತವಾಗಿಲ್ಲ.

ರಾಜ್ಯದ ಸಾರ್ವಜನಿಕ ಉದ್ದಿಮೆಗಳು ಹಾಗು ಸೇವಾ ಕ್ಷೇತ್ರಗಳ ಅಭಿವೃದ್ಧಿಗೆ ಯಾವುದೇ ಗಮನ ನೀಡಿಲ್ಲ. ಬದಲಾಗಿ ಅವುಗಳನ್ನು ದುರ್ಬಲಗೊಳಿಸುವ ನೀತಿಗಳ ಪ್ರದರ್ಶನ ಮಾಡಲಾಗಿದೆ.

ಬೃಹತ್ ಹಾಗು ಕಾರ್ಪೊರೇಟ್ ಬಂಡವಾಳಕ್ಕೆ ಈ ಬಜೆಟ್ಟಿನಲ್ಲಿಯೂ ಸಾಕಷ್ಟು ಕೊಡುಗೆಗಳನ್ನು ನೀಡಲಾಗಿದೆ. ಕೈಗಾರಿಕಾ ಬಂಡವಾಳಗಾರರಿಗೆ ನೀಡಲಾಗಿರುವ ರಿಯಾಯಿತಿಗಳ ಕುರಿತು ಬಜೆಟ್ ಭಾಷಣ ದಿವ್ಯಮೌನ ಸಾಧಿಸಿದೆ.

ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯು ಈ ಚುನಾವಣಾ ಪ್ರೇರಿತ ಘೋಷಣೆಗಳ ಗಂಟಾಗಿರುವ ರಾಜ್ಯದ ಬಜೆಟಲ್ಲಿನ ಕಾರ್ಮಿಕ ವಿರೋಧಿ ಹಾಗು ಬಡಜನ ವಿರೋಧಿ ಪ್ರಸ್ಥಾವನೆಗಳನ್ನು ಖಂಡಿಸುತ್ತದೆ.

ಅಸಂಘಟಿತ ವಲಯದ ಕಾರ್ಮಿಕರು, ಗುತ್ತಿಗೆ ಕಾರ್ಮಿಕರು ಹಾಗು ಸಂಘಟಿತ ವಲಯದ ಕಾರ್ಮಿಕ ಮೂಲಭೂತ ಬೇಡಿಕೆಗಳನ್ನು ಬಜೆಟ್ ಒಳಗೊಳ್ಳಬೇಕೆಂದು ಸಿಐಟಿಯು ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ಸೂಪರ್ ಶ್ರೀಮಂತ ವಂಚಕರ ಸುಗಮ ಪರಾರಿಯ ದಿನಗಳು

ನಾಲ್ಕು ವರ್ಷಗಳು ಮುಗಿಯುವ ಮೊದಲೇ 3ನೇ ಬಿಲಿಯಾಧಿಪತಿ ವಂಚಕನಿಗೆ ಆರಾಮವಾಗಿ ಪರಾರಿಯಾಗುವ ಅವಕಾಶ ಅಚ್ಛೇದಿನ್‌ಗಳ ಈ ವಾರದ ಪ್ರಮುಖ ಸುದ್ದಿಯಾಗಿದೆ. ಇವರಲ್ಲಿ ಇಬ್ಬರು ದೇಶದ ಪ್ರಧಾನ ಸೇವಕರೊಂದಿಗೆ ‘ಅಡ್ಡಹೆಸರು’ ಹಂಚಿಕೊಂಡಿರುವುದು ಮಾತ್ರ ಕಾಕತಾಳೀಯ.

ಕಳೆದ ವಾರ ದೇಶದ ಅತಿದೊಡ್ಡ ಸರಕಾರೀ ಒಡೆತನದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ(ಎಸ್‌ಬಿಐ) ಪ್ರಸಕ್ತ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ 2416 ಕೋಟಿ ರೂ. ನಷ್ಟ ಅನುಭವಿಸಿದೆ ಎಂದು ಸುದ್ದಿ ಬಂದಿತ್ತು. ಹಿಂದಿನ ವರ್ಷ ಇದೇ ಅವಧಿಯಲ್ಲಿ ಅದು 2610 ಕೋಟಿ ರೂ. ನಿವ್ವಳ ಲಾಭ ಗಳಿಸಿತ್ತು.

ಎಸ್‌ಬಿಐನ ಮರುಪಾವತಿಯ ನಿರೀಕ್ಷೆಯಿಲ್ಲದ ಕೆಟ್ಟ ಸಾಲಗಳ ಪ್ರಮಾಣ 7.23% ದಿಂದ 10.35% ಕ್ಕೇರಿದೆ.

ನಂತರ ಇತರ ಸಾರ್ವಜನಿಕ ವಲಯದ ಬ್ಯಾಂಕುಗಳಿಂದಲೂ ಸುಮಾರಾಗಿ ಇಂತಹುದೇ ಸುದ್ದಿಗಳು ಬರುತ್ತಿವೆ. ಬ್ಯಾಂಕ್ ಆಫ್ ಇಂಡಿಯಾ 2341 ಕೋಟಿ ರೂ., ಸೆಂಟ್ರಲ್ ಬ್ಯಾಂಕ್ 1664 ಕೋಟಿ ರೂ; ಯುಕೊ ಬ್ಯಾಂಕ್ 1016 ಕೋಟಿ ರೂ., ಸಿಂಡಿಕೇಟ್ ಬ್ಯಾಂಕ್ 870 ಕೋಟಿ ರೂ. ಮತ್ತು ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ 637 ಕೋಟಿ ರೂ. ನಷ್ಟ ದಾಖಲಿಸಿವೆ. ಇಂಡಿಯನ್ ಬ್ಯಾಂಕ್ ನಷ್ಟ ಅನುಭವಿಸದಿದ್ದರೂ, ನಿವ್ವಳ ಲಾಭ 373 ಕೋಟಿರೂ.ಗಳಿಂದ 303 ಕೋಟಿ ರೂ.ಗೆ ಇಳಿದಿದೆ. ಬ್ಯಾಂಕ್ ಆಫ್ ಬರೋಡಾದ ಲಾಭದಲ್ಲಿಯೂ 56% ಇಳಿಕೆಯಾಗಿದೆ.

ಈ ಎಲ್ಲ ನಷ್ಟಗಳೂ, ಲಾಭದಲ್ಲಿ ಇಳಿಕೆಗಳೂ ಎನ್‌ಪಿಎ ಗಳ ,ಅಂದರೆ ದೊಡ್ಡ ಉದ್ಯಮಿಗಳು ಮರುಪಾವತಿ ಮಾಡದ ಸಾಲಗಳ ಪರಿಣಾಮಗಳು. ಇವೆಲ್ಲ ಕಾಂಗ್ರೆಸ್ ಸರಕಾರಗಳ ದುರಾಡಳಿತದ, ಅವರ ಚಮಚಾ ಬಂಡವಾಳಿಗರ ಅಸಮರ್ಥತೆಯ, ವಂಚನೆಯ ದುಷ್ಫಲಗಳು ಎಂದು ಪ್ರಧಾನಿಗಳು ಕಳೆದ ವಾರ ಸಂಸತ್ತಿನಲ್ಲಿ ಅಬ್ಬರಿಸಿದರು. ಆದರೆ ಅವರ ಚಮಚಾ ಬಂಡವಾಳಿಗರ ಈ ಅಸಮರ್ಥತೆಯ, ವಂಚನೆಯ ದುಷ್ಫಲಗಳನ್ನು ಅವರಿಂದ ಕಕ್ಕಿಸುವ ಬದಲು ಈ ಸರಕಾರ ಅವರ ಸಾಲಗಳನ್ನು ರೈಟ್ ಆಫ್, ಅಂದರೆ ಲೆಕ್ಕದಿಂದ ತೆಗೆದು ಹಾಕಿರುವುದು ಏಕೆ ಎಂದು ಹೇಳಲಿಲ್ಲ. 2014–15ರಲ್ಲಿ 49018 ಕೋಟಿ, 2015–16ರಲ್ಲಿ 57,585 ಕೋಟಿ, 2016–17ರಲ್ಲಿ 81,683 ಕೋಟಿ ಮತ್ತು 2017–18ರಲ್ಲಿ ಸಪ್ಟಂಬರ್ 30 ರ ವರೆಗೆ, ಅಂದರೆ ಅರ್ಧ ವರ್ಷದಲ್ಲೇ 53,625 ಕೋಟಿ ರೂ.ಗಳನ್ನು, ಅಂದರೆ ಒಟ್ಟು 2,41,911 ಕೋಟಿ ರೂ.ಗಳನ್ನು ಮಾಫಿ ಅಲ್ಲವೆನ್ನುತ್ತಲೇ, ವಾಸ್ತವವಾಗಿ ಮಾಫಿ ಮಾಡಿರುವುದು ಏಕೆ ಎಂದು ಹೇಳಲಿಲ್ಲ.

ಇವೆಲ್ಲಕ್ಕೆ ಮುಕುಟವಿಟ್ಟಂತೆ ಈ ವಾರ ದೇಶದ ಎರಡನೇ ಅತಿ ದೊಡ್ಡ ಪಂಜಾಬ್ ನ್ಯಾಶನಲ್ ಬ್ಯಾಂಕಿ(ಪಿಎನ್‌ಬಿ)ಗೆ ನೀರವ್ ಮೋದಿ ಎಂಬ ಒಬ್ಬ ಬಿಲಿಯಾಧಿಪತಿ ವಜ್ರದ ವ್ಯಾಪಾರಿ 11,400 ಕೋಟಿ ರೂ.ಗಳ ವಂಚನೆ ನಡೆಸಿರುವ ಸಂಗತಿ ಬಯಲಾಗಿದೆ.

ಎನ್‌ಪಿಎ ವಿಷಯದಂತೆ, ಇದಕ್ಕೆ ಯಾರು ಹೊಣೆ ಎಂದು ನವ–ಉದಾರವಾದವನ್ನು ಅಪ್ಪಿಕೊಂಡಿರುವ ದೇಶದ ಎರಡು ಪ್ರಮುಖ ಪಕ್ಷಗಳು, ಹಾಲೀ ಮತ್ತು ಮಾಜಿ ಆಳುವ ಪಕ್ಷಗಳು ಪರಸ್ಪರ ಕೆಸರೆರಚುತ್ತಿವೆ. ಆದರೆ ಎನ್‌ಪಿಎ ಮಾಫಿಯಂತೆ ಇಲ್ಲಿಯೂ ಅಚ್ಛೇ ದಿನ್‌ಗಳ ಮಂದಿ ಹೊಣೆ ಜಾರಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ತೋರಿಸುವ ಸಂಗತಿಗಳೂ ಒಂದೊಂದಾಗಿ ಬೆಳಕಿಗೆ ಬರುತ್ತಿವೆ.

ಬ್ಯಾಂಕಿನ ಅಧಿಕಾರಿಗಳ ಶಾಮೀಲಿನಿಂದ ಎಲ್‌ಒಯು(ಮುಚ್ಚಳಿಕೆ ಪತ್ರ)ವನ್ನು ನಿಯಮಬಾಹಿರವಾಗಿ ಪಡೆದು ಅದನ್ನು ಆಧರಿಸಿ ದೇಶದೊಳಗೆ ಮತ್ತು ಹೊರಗೆ ವಿವಿಧ ಬ್ಯಾಂಕುಗಳಿಂದ ಅವು ಸಾಲ ಎಂದು ದಾಖಲಾಗದಂತೆ ಹಣ ಎತ್ತುವುದು ಈ ವಂಚನೆಯ ಸಾರಾಂಶ. ಇಂತಹ ವಂಚನೆ ಉನ್ನತ ಸ್ಥಾನಗಳಲ್ಲಿ ಇರುವವರ ಆಶೀರ್ವಾದವಿಲ್ಲದೆ ಸಾಧ್ಯವಿಲ್ಲ ಎಂಬುದು ಬಹಳಷ್ಟು ಪರಿಣಿತರ ಅಭಿಪ್ರಾಯ.

ಇದು ಸಾಮಾನ್ಯ ಸಂಗತಿಯಾದರೆ, ಈ ವಜ್ರದ ವ್ಯಾಪಾರಿಯೊಂದಿಗೆ ವ್ಯವಹರಿಸುವವನೊಬ್ಬ ಈ ವಿಷಯವನ್ನು ಸರಕಾರದ ಸಂಬಂಧಪಟ್ಟ ತನಿಖಾ ಸಂಸ್ಥೆಗಳಿಗೆ ತಿಳಿಸಿದರೂ ಯಾವುದೇ ಕ್ರಮ ಜರುಗಲಿಲ್ಲ ಎಂಬದು ವಿಶೇಷವಾಗಿ ಗಮನಿಸಬೇಕಾದ ಸಂಗತಿ.


* ಕೊನೆಗೆ ಜುಲೈ 26,2016 ರಲ್ಲಿ ಪ್ರಧಾನ ಮಂತ್ರಿ ಕಚೇರಿಗೆ ಇದನ್ನು ತಿಳಿಸಲಾಯಿತು. ಬ್ಯಾಂಕ್‌ಗಳಿಗೆ ಸಾವಿರಾರು ಕೋಟಿ ರೂ.ಗಳ ವಂಚನೆಯಾಗುತ್ತಿದೆ ಎಂಬ ಸಂಗತಿಯನ್ನು ಅವರ ಗಮನಕ್ಕೆ ತರಲಾಯಿತು.
* ಕಳೆದ ವರ್ಷದ ಫೆ.9ರಿಂದ 14 ರನಡುವೆ ಮತ್ತೆ ಇಂತಹ ಎಂಟು ಸುಳ್ಳು ಎಲ್‌ಒಯುಗಳನ್ನು ಪಡೆಯಲಾಯಿತು.
* ಈ ಹುಸಿ ಎಲ್‌ಒಯುಗಳನ್ನು ಕೊಡುತ್ತಿದ್ದ ಬ್ಯಾಂಕ್ ಅಧಿಕಾರಿಯ ನಿವೃತ್ತಿ.
* ಜನವರಿ 1, 2018– ನೀರವ್ ಮೋದಿ ಮತ್ತು ಆತನ ಸೋದರ ದೇಶ ಬಿಟ್ಟು ಹೋಗುತ್ತಾರೆ.
* ಜನವರಿ 4–ನೀರವ್ ಮಾವ ದೇಶ ಬಿಟ್ಟು ಹೋಗುತ್ತಾರೆ.
* ಜನವರಿ 6– ನೀರವ್ ಮೋದಿ ಹೆಂಡತಿ ದೇಶ ಬಿಟ್ಟು ಹೋಗುತ್ತಾರೆ.
* ಜನವರಿ 16– ನೀರವ್ ಕಂಪನಿ ಮತ್ತೊಂದು ಎಲ್‌ಒಯು ಪಡೆಯಲು ಪ್ರಯತ್ನಿಸುತ್ತದೆ.
* ಜನವರಿ 23– ಸ್ವಿಝರ್ಲೆಂಡ್‌ನ ದಾವೊಸ್‌ನಲ್ಲಿ ಮೋದಿಯವರೊಂದಿಗೆ ಭಾರತೀಯ ಉದ್ದಿಮೆದಾರರ ಫೋಟೋದಲ್ಲಿ ನೀರವ್ ಮೋದಿ–ಎಸ್‌ಬಿಐ ಅಧ್ಯಕ್ಷರ ಪಕ್ಕದಲ್ಲಿ.
* ಜನವರಿ 25–ಎಲ್‌ಒಯು ವ್ಯವಹಾರದ ಬಗ್ಗೆ ಸಂದೇಹ
* ಜನವರಿ 29– ಸಿಬಿಐ ಗೆ ಪಿಎನ್‌ಬಿ ದೂರು
* ಜನವರಿ 31– ಸಿಬಿಐನಲ್ಲಿ ಎಫ್‌ಐಆರ್

ಇದಾದ ನಂತರ ಬ್ಯಾಂಕ್ ಸಿಬಿಐ ಗೆ ಇನ್ನೆರಡು ಇಂತಹ ವಂಚನೆಗಳ ದೂರು ಸಲ್ಲಿಸಿತು, ಮರುದಿನ ರಾಷ್ಟ್ರೀಯ ಶೇರು ವಿನಿಮಯ ಕಚೇರಿಗೂ ತಿಳಿಸಿತು.

ಹಣಕಾಸು ಮಂತ್ರಿಗಳು ಈ ಬಗ್ಗೆ ಬಾಯಿ ತೆರೆದಿಲ್ಲ, ಪ್ರಧಾನ ಮಂತ್ರಿಗಳದ್ದರತೂ ಟ್ರೇಡ್‌ಮಾರ್ಕ್ ಮೌನ. ಆದರೆ ಇದಕ್ಕೆ ಸಂಬಂಧಪಡದ ಇಬ್ಬರು ಮಂತ್ರಿಗಳು, ರಕ್ಷಣಾ ಮಂತ್ರಿ ಮತ್ತು ಕಾನೂನುಮಂತ್ರಿಗಳು ಸರಕಾರವನ್ನು ಸಮರ್ಥಿಸಿಕೊಳ್ಳಲು ಹೆಣಗಿದ್ದಾರೆ. ಪ್ರಧಾನ ಮಂತ್ರಿ ಕಚೇರಿಗೆ ಮಾಹಿತಿ ಬಂದಿದ್ದರೂ ‘ನ ಖಾವುಂಗಾ, ನ ಖಾನೇ ದೂಂಗ’ ಮಂತ್ರ ಪಠಿಸುವವರು ಸಾರ್ವಜನಿಕರ ಉಳಿತಾಯದ ಕೋಟಿಗಟ್ಟಲೆ ರೂಪಾಯಿಗಳನ್ನು ತಿನ್ನುವುದು ಗಮನಕ್ಕೆ ಬಂದಾಗ ಏನು ಮಾಡಿದರು ಎಂದು ತಿಳಿಸಿಲ್ಲ. ಎಫ್‌ಐಆರ್ ಬರುವ ಒಂದು ತಿಂಗಳ ಮೊದಲೇ (ಅದರ ಮಾಹಿತಿ ತಿಳಿದು?) ದೇಶ ಬಿಟ್ಟು ಹೋದ ಈ ವಜ್ರದ ವ್ಯಾಪಾರಿ ಎಫ್‌ಐಆರ್‌ನ ಕೇವಲ ಒಂದು ವಾರದ ಮೊದಲು ದೇಶದ ಪ್ರಧಾನ ಮಂತ್ರಿಯೊಂದಿಗೆ ಕಾಣಿಸಿಕೊಂಡದ್ದು ಹೇಗೆ ಎಂದೂ ತಿಳಿಸಿಲ್ಲ.

“ನಿನ್ನೆಯಷ್ಟೇ ತ್ರಿಪುರಾದಲ್ಲಿ ಮತದಾರರಿಗೆ ‘ಮಾಣಿಕ್ಯ’ ಕೈಬಿಟ್ಟು ವಜ್ರ ಆರಿಸಿಕೊಳ್ಳಿ ಎಂದು ಹೇಳಿದ ಹಾಗಿತ್ತು, ಇನ್ನೂ ಪಿಎನ್‌ಬಿ ಹಗರಣದ ನಂತರ ಇಂತಹ ಒಂದು ಉತ್ತಮ ವಿಚಾರ? ಹಾಂ..”

–ಇದು ಪ್ರಖ್ಯಾತ ಪತ್ರಕರ್ತೆ ಮೃಣಾಲ್ ಪಾಂಡೆಯವರ ಟ್ವೀಟ್.



ಸೊಹ್ರಬುದ್ಧಿನ್ ಕೇಸಿನ ವಿಚಾರಣೆ ನ್ಯಾಯದ ವಿಫಲತೆಯತ್ತ ಬೊಟ್ಟುಮಾಡುತ್ತಿದೆ–ಮಾಜಿ ಮುಂಬೈ ನ್ಯಾಯಾಧೀಶರು

ಕಳೆದ ವರ್ಷ ಅಲಹಾಬಾದ್ ಹೈಕೋರ್ಟಿನ ನ್ಯಾಯಾಧೀಶರಾಗಿ ನಿವೃತ್ತರಾದ ನ್ಯಾಯಮೂರ್ತಿ ಅಭಯ್ ಎಂ ಥಿಪ್ಸೆ ಸೊಹ್ರಬುದ್ದಿನ್ ಶೇಖ್ ಹುಸಿ ಎನ್‌ಕೌಂಟರ್ ಕೇಸಿನ ವಿಚಾರಣೆಗಳ ಹಲವು ಅಂಶಗಳು ‘ನ್ಯಾಯದ ವಿಫಲತೆ’ಯತ್ತ ಬೊಟ್ಟು ಮಾಡುತ್ತಿವೆ ಎಂದು ಹೇಳಿದ್ದಾರೆ.

ಇವರು 2013 ಮತ್ತು 2014ರಲ್ಲಿ ಮುಂಬೈ ಹೈಕೋರ್ಟಿನ ನ್ಯಾಯಾಧೀಶರಾಗಿ ಇಬ್ಬರಿಗೆ ಜಾಮೀನು ಕೊಟ್ಟಿದ್ದರು.

ಈ ಕೇಸಿನ ವಿಚಾರಣೆ ನಡೆಸುತ್ತಿದ್ದ ಸಿಬಿಐ ನ್ಯಾಯಮೂರ್ತಿ ಬಿ.ಹೆಚ್.ಲೋಯರ ಸಾವಿನ ಬಗ್ಗೆ ಸಂದೇಹ ಎದ್ದಿರುವ ಹಿನ್ನೆಲೆಯಲ್ಲಿ ಮರುಯೋಚನೆ ಮಾಡಿದಾಗ ತನಗೆ ಹೀಗನಿಸುತ್ತದೆ ಎಂದು ಅವರು ಇಂಡಿಯನ್ ಎಕ್ಸ್‌ಪ್ರೆಸ್‌ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಈ ಕೇಸಿನ 38 ಆರೋಪಿಗಳಲ್ಲಿ 15 ಮಂದಿಯನ್ನು ಈಗಾಗಲೇ ಆರೋಪಮುಕ್ತಗೊಳಿಸಲಾಗಿದೆ. ಇವರಲ್ಲಿ ಬಿಜೆಪಿ ಅಧ್ಯಕ್ಷ ಅಮಿತ್ ಷಾ ಕೂಡ ಸೇರಿದ್ದಾರೆ.

“ಹಲವಾರು ಆರೋಪಿಗಳಿಗೆ ವರ್ಷಗಳ ಕಾಲ ಜಾಮೀನು ನಿರಾಕರಿಸಲಾಯಿತು. ನಂತರ ಅವರ ವಿರುದ್ಧ ಮೊದಲ ನೋಟಕ್ಕೇ ಆರೋಪಗಳಿಲ್ಲ ಎಂದು ಹೇಳಲಾಗುತ್ತದೆ. ಹೀಗೆ ಆರೋಪಮುಕ್ತರಾದವರಲ್ಲಿ ಕೆಳಗಣ ಮಟ್ಟದ ಆಧಿಕಾರಿಗಳಿಲ್ಲ, ಆದರೆ ಅದೇ ಆರೋಪ ಎದುರಿಸುತ್ತಿದ್ದ ಉನ್ನತ ಅಧಿಕಾರಿಗಳು ಮುಕ್ತರಾಗುತ್ತಾರೆ. ಇದು ಅಸಾಮಾನ್ಯ ಸಂಗತಿ” ಎನ್ನುತ್ತಾರೆ ಈ ನಿವೃತ್ತ ನ್ಯಾಯಾಧೀಶರು.

ಈ ನಡುವೆ ನ್ಯಾಯಮೂರ್ತಿ ಲೋಯ ಸಾವು ಹೃದಯಾಘಾತದಿಂದ ಸಂಭವಿಸಿಲ್ಲ ಎಂದು ಅವರ ವೈದ್ಯಕೀಯ ದಾಖಲೆಗಳನ್ನು ಪರೀಕ್ಷಿಸಿದ ದೇಶದ ಪ್ರಮುಖ ಫೊರೆನ್ಸಿಕ್ ತಜ್ಞ ಡಾ. ಆರ್.ಕೆ..ಶರ್ಮ ಹೇಳಿರುವುದಾಗಿ ವರದಿಯಾಗಿದೆ.



ದೇಶದ ಹೆಸರುಗೆಡಿಸಿದ ‘ರಾಷ್ಟ್ರೀಯ’ ಸುದ್ದಿ ಚಾನೆಲ್‌ಗಳು

ಭಾರತದ ಪ್ರಮುಖ ಇಂಗ್ಲಿಷ್ ಸುದ್ದಿ ಚಾನೆಲ್‌ಗಳಾದ ಟೈಮ್ಸ್ ನೌ ಮತ್ತು ಝೀನ್ಯೂಸ್ ಪ್ರಧಾನಿಗಳು ಆ ದೇಶದ ಭೇಟಿಗೆ ಹೋದ ಸಂದರ್ಭದಲ್ಲಿ ಸ್ವತಃ ಅಬುದಭಿಯ ರಾಜಕುಮಾರ ‘ಜೈಶ್ರೀರಾಮ್’ ಎನ್ನುತ್ತಾರೆ ಎಂದು ಬಿಂಬಿಸಲು ಪ್ರಯತ್ನಿಸಿದ್ದ ಒಂದು ವೀಡಿಯೋ ಶೇರ್‌ಮಾಡಿದವು. ವಾಸ್ತವವಾಗಿ ಅದು 2016ರಲ್ಲಿ ಭಾರತದ ಒಬ್ಬ ದೇವಮಾನವ ಮುರಾರಿ ಬಾಪು ಕಾರ್ಯಕ್ರಮದಲ್ಲಿ ಅಲ್ಲಿನ ಒಬ್ಬ ಪತ್ರಕರ್ತನಿದ್ದ ವೀಡಿಯೋ.

ಇದನ್ನು ಕೊಲ್ಲಿ ಪ್ರದೇಶದ ಪ್ರಮುಖ ಪತ್ರಿಕೆ ‘ಗಲ್‌ನ್ಯೂಸ್ ಬಲವಾಗಿ ಟೀಕಿಸಿತು, ಭಾರತದ ಸುದ್ದಿ ಚಾನೆಲ್‌ಗಳು ಭಾರತದಲ್ಲಿ ರಾಜಕೀಯ ಲಾಭ ಪಡೆಯಲು ಸುಳ್ಳು ಪ್ರಚಾರದಲ್ಲಿ ತೊಡಗಿವೆ ಎಂಬ ಒಂದು ವರದಿಯನ್ನು ಪ್ರಕಟಿಸಿ ಈ ಚಾನೆಲ್‌ಗಳಿಗೆ ಮುಜುಗರವಾಗುವಂತೆ ಮಾಡಿತು. ಅಂದರೆ ಕಾರ್ಪೊರೇಟ್ ಮಾಧ್ಯಮಗಳ ಭಟ್ಟಂಗಿತನ ದೇಶದ ಮಾನ ಕಳೆಯುವ ಮಟ್ಟಕ್ಕೆ ಇಳಿದಿದೆ ಎಂಬುದನ್ನು ಇದು ತೋರಿಸುತ್ತದೆ. ಅದರೆ ಈ ಭಟ್ಟಂಗಿಗಳಿಗೆ, ಭಕ್ತರುಗಳಿಗೆ ಅದರ ಪರಿವೆಯೂ ಇದ್ದಂತಿಲ್ಲ. ‘ಫೇಕ್ ನ್ಯೂಸ್’ಗಳನ್ನು ಉತ್ಪಾದಿಸುತ್ತಲೇ ಇವೆ.

19 ಬಿಜೆಪಿ–ಎನ್‌ಡಿಎ ಸಿಎಂಗಳಲ್ಲಿ 15 ಕೋಟ್ಯಾಧೀಶರು


ಭಾರತದ ಚುನಾವಣೆಗಳ ಬಗ್ಗೆ ಮಾಹಿತಿ ಕಲೆ ಹಾಕುವ ಅಸೋಸಿಯೇಶನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್(ಎಡಿಆರ್) ಭಾರತದ 31 ಮುಖ್ಯಮಂತ್ರಿಗಳ ಬಗ್ಗೆ ಮಾಹಿತಿಯನ್ನು ಪ್ರಕಟಿಸಿದೆ. ಇವರಲ್ಲಿ 19 ಬಿಜೆಪಿ–ಎನ್‌ಡಿಎ ಮುಖ್ಯಮಂತ್ರಿಗಳಿದ್ದು 15 ಮಂದಿ ಕೋಟ್ಯಾಧೀಶರು. ಅವರ ಪೈಕಿ 177.5 ಕೋಟಿ ರೂ.ಗಳ ಆಸ್ತಿ ಹೊಂದಿರುವ ಆಂಧ್ರಪ್ರದೇಶದ ಮುಖ್ಯಮಂತ್ರಿಗಳದ್ದು ಮೊದಲ ಸ್ಥಾನ. ಈಶಾನ್ಯ ಭಾರತದ ಮುಖ್ಯಮಂತ್ರಿ ಪೆಮ ಖಂಡು ಎರಡನೇ ಸ್ಥಾನದಲ್ಲಿದ್ದಾರೆ. ನಂತರದ ಸ್ಥಾನ ಪಂಜಾಬಿನ ಕಾಂಗ್ರೆಸ್ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್‌ರದ್ದು.

ಇಬ್ಬರು 100 ಕೋಟಿಗಿಂತ ಹೆಚ್ಚಿನ ಅಸ್ತಿ ಹೊಂದಿದ್ದಾರೆ, 10ರಿಂದ 50 ಕೋಟಿ ಆಸ್ತಿಯಿರುವವರು 6 ಮಂದಿ, 1 ಕೋಟಿಯಿಂದ 10 ಕೋಟಿ ಆಸ್ತಿಯಿರುವವರು 17 ಮುಖ್ಯಮಂತ್ರಿಗಳು, 1ಕೋಟಿ ರೂ.ಗಿಂತ ಕಡಿಮೆ ಆಸ್ತಿ ಇದೆ ಎಂದು ಹೇಳಿರುವವರು 6 ಮುಖ್ಯಮಂತ್ರಿಗಳು ಮಾತ್ರ.

ಇದರಲ್ಲಿ ಅತಿ ಕಡಿಮೆ ಆಸ್ತಿಯಿರುವವರು ತ್ರಿಪುರಾದ ಮುಖ್ಯಮಂತ್ರಿಗಳು ಎಂದರೆ ಯಾರಿಗೂ ಆಶ್ಚರ್ಯವಾಗದು ಎಂದಿದೆ ಈ ಎಡಿಆರ್ ವರದಿ. ಅವರ ಆಸ್ತಿ 26ಲಕ್ಷ ರೂ. ಅದರಲ್ಲೂ ಬಹುಪಾಲು ಕೇಂದ್ರ ಸರಕಾರೀ ಅಧಿಕಾರಿಯಾಗಿ ನಿವೃತ್ತರಾಗಿರುವ ಅವರ ಮಡದಿಯದ್ದು. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರದ್ದು 30.5 ಲಕ್ಷ ರೂ. ಮತ್ತು ಇನ್ನೊಬ್ಬ ಮಹಿಳಾ ಮುಖ್ಯಮಂತ್ರಿ ಜಮ್ಮು–ಕಾಶ್ಮೀರದ ಮೆಹಬೂಬ ಮುಫ್ತಿಯವರದ್ದು 56 ಲಕ್ಷ ರೂ.


ಪ್ರಧಾನ ಮಂತ್ರಿಗಳು ಸಂಸತ್ತಿನಲ್ಲಿ ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆಯ ಮೇಲಿನ ಚರ್ಚೆಗೆ ಉತ್ತರಿಸುತ್ತ ಆಧಾರ್‌ಗೆ ಮೊದಲು ಮಾತಾಡಿದವರು ಅಡ್ವಾಣಿಯವರು ಎನ್ನುತ್ತಿದ್ದಾಗ ಕಾಮಗ್ರೆಸ್ ಸದಸ್ಯೆ ಹ!ಹ! ಎಂದು ಜೋರಾಗಿ ನಕ್ಕರು. ಇದರಿಂದ ಕುಪಿರಾದ ಪ್ರಧಾನಿಗಳು ಬಹಳ ವರ್ಷಗಳ ನಂತರ ರಾಮಾಯಣ ಸೀರಿಯಲ್ಲಿನ ನೆನಪಾಯ್ತು ಎಂದು ಟಿಪ್ಪಣಿ ಮಾಡಿದರು – ಸುದ್ದಿ

ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ



ಗಲಭೆ ಕೋರರು | ಆರ್ಥಿಕ ಮಂದಗತಿ | ಪೆಟ್ರೋಲ್ ಬೆಲೆಗಳು | ಉದ್ಯೋಗ ಕೊರತೆ | ಅಸಹಿಷ್ಣುತೆ | ಕೃಷಿ ಬಿಕ್ಕಟ್ಟು | ಕೋಮು ಭಜನೆ

‘ಮೋದಿಕೇರ್’ಗೆ ಜೈಕಾರ ಹಾಕುತ್ತಿರುವವರು ಯಾರು?



ಬಿಜೆಪಿಯ ಅಳಲೆಕಾಯಿ ಪಂಡಿತರು ಈಗಾಗಲೇ ‘ಮೋದಿಕೇರ್’ ಎಂಬ ನಾಮಕರಣ ಮಾಡಿರುವ ‘ಬೃಹತ್ ಆರೋಗ್ಯ ಪ್ಲನೆ ಕಾರ್ಯಕ್ರಮ’ದಲ್ಲಿ ನಿಜವಾಗಿ ಏನಿದೆ? 1.2ಲಕ್ಷ ಕೋಟಿ ರೂ. ಬೇಕಾಗುವ ಕಾರ್ಯಕ್ರಮ ಬಜೆಟಿನಲ್ಲಿ ಕೇವಲ 2000 ಕೋಟಿರೂ. ಪಡೆದಿರುವಾಗ ಇದು ನಿಜವಾಗಿಯೂ ಕಾರ್ಯರೂಪಕ್ಕೆ ಬರುತ್ತದೆಯೇ? ದೇಶದ ಬಹುಪಾಲು ಭಾಗಗಳಲ್ಲಿ ಮಾನ್ಯತೆ ಪಡೆದ ಪ್ರಾಥಮಿಕ ಆರೋಗ್ಯ ಸೇವೆಗಳು ಇಲ್ಲದಿರುವಾಗ ಪ್ರಾಥಮಿಕ ರಕ್ಷೆಯಿಲ್ಲದ ಬಹುಪಾಲು ಜನಸಂಖ್ಯೆಗೆ ಜಗಜಗಿಸುವ ಖಾಸಗಿ ಆಸ್ಪತ್ರೆಗಳಲ್ಲಿ ಮೋದಿಕೇರ್ ಪಡೆಯುವುದು ಎಂದಾದರೂ ಸಾಧ್ಯವಾಗಬಹುದೇ? ಏಕೆ ಮಾಧ್ಯಮಗಳಲ್ಲಿ ಈ ಬಗ್ಗೆ ಸಂಭ್ರಮಾಚರಣೆ? ಸಂಭ್ರಮಿಸುತ್ತಿರುವವರಾದರೂ ಯಾರು? ಸಾರ್ವಜನಿಕ ಆರೋಗ್ಯದ ಕ್ಷೇತ್ರದಲ್ಲಿ ಬಹುವರ್ಷಗಳ ಅನುಭವವಿರುವ

ಡಾ. ಅಮಿತ್ ಸೇನ್‌ಗುಪ್ತ ಇಲ್ಲಿ ಪರಿಶೀಲಿಸಿದ್ದಾರೆ. ಅನು: ಎಂ.ಜಿ.ವೆಂಕಟೇಶ್

ಅಬ್ಬರದ ಮಾತುಗಳು, ಅದರಲ್ಲೂ ಟೊಳ್ಳು ಪದಪುಂಜಗಳು ಮೋದಿ ಸರಕಾರದ ಮುಖ್ಯ ಲಕ್ಷಣವಾಗಿಬಿಟ್ಟಿವೆ. ಹಣಕಾಸು ಮಂತ್ರಿ ಅರುಣ ಜೇಟ್ಲಿ ಅವರ ಬಜೆಟ್ ಭಾಷಣದಲ್ಲಿ ವಿಶ್ವದ ಅತಿದೊಡ್ಡ ಸರ್ಕಾರದ ನೆರವಿನಿಂದ ಸ್ಥಾಪಿಸಲಾದ ಆರೋಗ್ಯ ರಕ್ಷಣಾ ಕಾರ್ಯಕ್ರಮವೆಂಬಂತೆ ಬಿಂಬಿಸಿದ್ದು ಮೋದಿ ಸರ್ಕಾರದ ಹಿಂದಿನ ಎಲ್ಲಾ ಉತ್ಪ್ರೇಕ್ಷಿತ ಸಾಧನೆಗಳನ್ನು ಹಿಂದಕ್ಕೆ ಹಾಕಿದೆ. ಬೇಗನೇ ಬಿಜೆಪಿಯವರ ಅಳಲೆಕಾಯಿ ಪಂಡಿತರು ಇದಕ್ಕೆ ‘ಮೋದಿಕೇರ್’ ಎಂಬ ನಾಮಕರಣ ಮಾಡಿದರು ಮತ್ತು ದೇಶದ ಕಾರ್ಪೊರೇಟ್ ಪೋಷಿತ ಮಾಧ್ಯಮಗಳು ಇದನ್ನು ಪ್ರಶ್ನಿಸದೇ ಒಪ್ಪಿಕೊಂಡು ಪಸರಿದವು.

ಪ್ರತಿ ಕುಟುಂಬಕ್ಕೆ ವರ್ಷಕ್ಕೆ 5ಲಕ್ಷ ರೂ.ವರೆಗೆ ಆಸ್ಪತ್ರೆ ವೆಚ್ಚಗಳನ್ನು ತುಂಬಿ ಕೊಡುವ ಒಂದು ವಿಮಾ ಕಾರ್ಯಕ್ರಮದ ಮೂಲಕ 10 ಕೋಟಿ ಕುಟುಂಬಗಳಿಗೆ ಅರೋಗ್ಯ ರಕ್ಷಣೆ ಕೊಡಲಾಗುವುದು ಎಂದು ಪ್ರಕಟಿಸಲಾಗಿದೆ. ರಾಜ್ಯಗಳು ಇದರ ಶೇ. 40ವೆಚ್ಚವನ್ನು ಭರಿಸುತ್ತವೆ ಎಂದೂ ಹೇಳಲಾಗಿದೆ.

ಉತ್ಪ್ರೇಕ್ಷೆಗಳ ನಡುವೆ ನಿಜ ಸಂಗತಿಯೇನು ಎಂದು ನಾವು ತಿಳಿಯಬೇಕಾಗಿದೆ. ಸಾರ್ವಜನಿಕ ಮರೆವು ಹೆಚ್ಚು ಎನ್ನಲಾಗುತ್ತದೆ. ಬಹುಶಃ ಕೆಲವೇ ಜನರಿಗೆ ಇಂತಹದೇ ಕಾರ್ಯಕ್ರಮವನ್ನು 2016 ರಲ್ಲಿ ಪ್ರಕಟಿಸಿದ್ದರು ಎಂಬುದು ನೆನಪಿರಬಹುದು. ವ್ಯತ್ಯಾಸವೆಂದರೆ, 2016 ರಲ್ಲಿ 5 ಮಂದಿಯ ಒಂದು ಕುಟುಂಬಕ್ಕೆ ನಿಗದಿಪಡಿಸಿದ ವಿಮಾ ಮೊತ್ತ 1.5 ಲಕ್ಷ ಮತ್ತು 2018 ರಲ್ಲಿ 5 ಲಕ್ಷ ಮೊತ್ತ ಹೆಚ್ಚಾಗಿದೆ. ಆದರೆ ಇದರ ಪ್ರಯೋಜನ ಪಡೆಯುವವರು ಬಹಳ ಕಡಿಮೆ. ಏಕೆಂದರೆ ಈಗಿನ ವಿಮಾ ಯೋಜನೆಗಳಲ್ಲಿ ಸಿಕ್ಕಿರುವ ಸರಾಸರಿ ಹಣ 1ಲಕ್ಷ ರೂ,ಗಳಿಗಿಂತ ಕಡಿಮೆಯೇ. ಈಗ ಎಲ್ಲರಿಗೂ 5 ಲಕ್ಷ ಸಿಗುತ್ತದೆ ಎಂದೇನಲ್ಲ. ಆದರೂ ಸಾರ್ವಜನಿಕರಿಗೆ ಆಸೆ ತೋರಿಸುವ ಒಂದು ಚಂದದ ಚಿತ್ರವನ್ನು ಇದು ಕೊಡುತ್ತದೆ.

ಹಾಗಾದರೆ 2016 ರಿಂದ 2018 ರ ಅವಧಿಯಲ್ಲಿ ನಡೆದದ್ದಾರೂ ಏನು? ಹಾಗೆ ನೋಡಿದರೆ ಏನೂ ನಡೆಯಲಿಲ್ಲ. ಹೊಸ ಯೋಜನೆಯೇನೂ ಆರಂಭವಾಗಲೇ ಇಲ್ಲ. ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನಾ (ಆರ್‌ಎಸ್‌ಬಿವೈ) ಕ್ಕೆ ಮೀಸಲಿಟ್ಟಿದ್ದ ಕೇವಲ 1000 ಕೋಟಿ ರೂ.ಗಳಲ್ಲೂ 2017–18 ರಲ್ಲಿ ಖರ್ಚಾಗಿರುವುದು ಅರ್ಧದಷ್ಟು ಮಾತ್ರ. ಆದರೂ ಅಬ್ಬರದ ಮಾತುಗಳ ಶಕ್ತಿ ಎಷ್ಟೆಂದರೆ, ಈ ಹೊಸ ಯೋಜನೆಯನ್ನು ‘ಆಟವನ್ನೇ ಬದಲಾಯಿಸುವ ದಿಟ್ಟ ಕ್ರಮ’ ಎಂದೆಲ್ಲ ಬಣ್ಣಿಸಲಾಗುತ್ತಿದೆ. ಒಂದು ವೇಳೆ ಹೊಸ ಯೋಜನೆ ಜಾರಿಯಾದರೂ ಅದು ಹಿಂದಿನ ಆರ್‌ಎಸ್‌ಬಿವೈ ಮತ್ತು ಅನೇಕ ರಾಜ್ಯಮಟ್ಟದ ವಿಮಾ ಕಾರ್ಯಕ್ರಮಗಳ ಶುಭ್ರಗೊಳಿಸಿದ ರೂಪ ಮಾತ್ರ, ದೇಶದಲ್ಲಿ ತೀವ್ರಗೊಳ್ಳುತ್ತಿರುವ ಆರೋಗ್ಯ ರಕ್ಷಣೆಯ ಬಿಕ್ಕಟ್ಟನ್ನು ಎದುರಿಸಲು ಇದರಲ್ಲಿ ಏನೂ ಇಲ್ಲ.

ಆರೋಗ್ಯಕ್ಕಾಗಿ ಕಡಿಮೆ ಬಜೆಟ್ ಹಣ

2018–19 ರ ಬಜೆಟ್‌ನಲ್ಲಿ ಆರೋಗ್ಯಕ್ಕಾಗಿ ಮೀಸಲಿಟ್ಟಿರುವ ಮೊತ್ತ ರೂ.54,667 ಕೋಟಿ ಹಣದುಬ್ಬರವನ್ನು ಗಮನಿಸಿ ಪರಿಶೀಲಿಸಿದರೆ ವಾಸ್ತವವಾಗಿ ಇದು ಕಳೆದ ವರ್ಷದ ರೂ.53,198 ಕೋಟಿಗಿಂತ ಕಡಿಮೆ. ಅದಕ್ಕೂ ಮುಖ್ಯವಾಗಿ ಸರ್ಕಾರದ ಪ್ರಮುಖ ಆರೋಗ್ಯ ಕಾರ್ಯಕ್ರಮವಾದ ರಾಷ್ಟ್ರೀಯ ಆರೋಗ್ಯ ಮಿಶನ್‌ಗೆ ನೀಡಿರುವ ಹಣವಂತೂ ಅಕ್ಷರಶಃ ಕಡಿಮೆ ಕಡಿಮೆ. ಅದು 2017–18 ರಲ್ಲಿ ಖರ್ಚಾಗಿರುವುದು ರೂ. 31292 ಕೋಟಿಗಳಾದರೆ 2018–19 ರಲ್ಲಿ ನೀಡಿರುವುಲುದ ರೂ.30634 ಕೋಟಿ.

ಧೋರಣೆಗಳ ಸ್ಥಾನದಲ್ಲಿ ಟೊಳ್ಳು ಭರವಸೆಗಳನ್ನು ನೀಡುವುದರಲ್ಲಿ ಮೋದಿಯವರು ನಿಸ್ಸೀಮರು. ರಾಷ್ಟ್ರೀಯ ಆರೋಗ್ಯ ನೀತಿ–2017ನ್ನು ಕೆಲವೇ ತಿಂಗಳ ಹಿಂದೆ ಅಬ್ಬರದ ಪ್ರಚಾರದ ಮೂಲಕ ಪ್ರಕಟಿಸಲಾಯಿತು. ಅದು 2025 ರ ವೇಳೆಗೆ ಜಿಡಿಪಿಯ 2.5% ರಷ್ಟು ವೆಚ್ಚ ಮಾಡುವುದಾಗಿ ಸಾರಿತ್ತು (ಈಗ 1.2%). ಅಂದರೆ ಈಗ ಲಭ್ಯ ಮಾಡುತ್ತಿರುವ ಅಂದಾಜಿಗಿಂತ ವಾರ್ಷಿಕವಾಗಿ 20% ಹೆಚ್ಚಾಗಬೇಕಾಗಿತ್ತು. ಆದರೆ ಮೇಲೆ ವಿವರಿಸಿರುವಂತೆ 2018–19 ರ ಸಾಲಿನಲ್ಲಿ ‘ಹೆಚ್ಚುವುದಂತೂ ದೂರ, ಅದು ಕಡಿಮೆ ಕಡಿಮೆಯೇ ಆಗಿದೆ. ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಆರೋಗ್ಯ ಕ್ಷೇತ್ರಕ್ಕೆ ಹಣ ನೀಡಿಕೆಯಲ್ಲಿ ಗಣನೀಯ ಹೆಚ್ಚಳವೇನೂ ಆಗಿಲ್ಲ.

ವಿಮಾ ಯೋಜನೆಗಷ್ಟೇ ಹಣಕಾಸು

50 ಕೋಟಿ ಫಲಾನುಭವಿಗಳಿಗೆ ಸಹಾಯವಾಗಲಿರುವ ವಿಶ್ವದ ಬೃಹತ್ ಆರೋಗ್ಯ ಕಾರ್ಯಕ್ರಮಕ್ಕೆ ಪ್ರಸ್ತುತ ವರ್ಷದಲ್ಲಿ ನಿಗದಿಪಡಿಸಿರುವ ಅಂದಾಜು ಕೇವಲ 2000 ಕೋಟಿಗಳನ್ನು ಮಾತ್ರ ಕೊಟ್ಟಿದ್ದರೂ ಹೇಗೋ ಮ್ಯಾಜಿಕ್‌ನಿಂದ ಹಣ ಸುಗುತ್ತದೆ ಎಂದು ನಂಬಿಸುವ ಪ್ರಯತ್ನ ನಡೆದಿದೆ. ಇದು ಅಸಂಬದ್ಧ ಎಂದು ಈಗ ಸರ್ಕಾರಕ್ಕೆ ಅರಿವಾದಂತಿದೆ. ಹಣಕಾಸು ಕಾರ್ಯದರ್ಶಿ ಹಸ್ಮುಕ್ ಅದಿಯಾ ಒಂದು ಸಂದರ್ಶನದಲ್ಲಿ “ಈ ಯೋಜನೆಯ ಕಾರ್ಯರೂಪ ಸಿದ್ಧವಾಗಬೇಕಿದೆ. ರಾಜ್ಯ ಸರ್ಕಾರಗಳೊಂದಿಗೆ ಚರ್ಚಿಸಿ ರೂಪ ರೇಷೆ ಸಿದ್ಧಪಡಿಸಬೇಕು” ಎಂದು ಹೇಳುತತ ಅವರು ಇದು ಕಾರ್ಯರೂ ಪಕ್ಕೆ ಬರುವ 2019–20 ರಲ್ಲಿ ಅಗತ್ಯವಾದ ಹಣವನ್ನು ಒದಗಿಸಲಾಗುವುದು ಎಂದಿದ್ದಾರೆ(ಆಗ ಯಾವ ಸರ್ಕಾರ ಇರುತ್ತದೋ ಯಾರಿಗೆ ಗೊತ್ತು?). ವಿಶ್ವದ ಅತಿದೊಡ್ಡ ಆರೋಗ್ಯ ಕಾರ್ಯಕ್ರಮವೆಂದು ಬಿಂಬಿಸುವುದು ಅದು ಕೇವಲ ಕಲ್ಪನೆ ಮಾತ್ರವಗಿರುವಾಗ ಸುಲಭದ ಕೆಲಸ. ಈ ಕಾರ್ಯಕ್ರಮವನ್ನು ನಿಜವಾಗಿಯೂ ಆರಂಭಿಸಲಾಗುತ್ತದೆ, ಅದಕ್ಕೆ ಶೀಘ್ರವೇಗೋರಿ ಕಟ್ಟಲಿಕ್ಕಿಲ್ಲ ಎಂಬುದನ್ನು ಜನ ಸ್ವೀಕರಿಸುತ್ತಾರೆ ಎಮದು ಈ ಸರಕಾರ ಹೇಗೆ ನಂಬುತ್ತಿದೆಯೋ ಊಹೆಗೆ ಬಿಟ್ಟ ಸಂಗತಿ. ಸರ್ಕಾರದ ಮೂಲಗಳು ಈ ಯೋಜನೆಗೆ ಬೇಕಾಗಿರುವುದು 10000 ಕೋಟಿಯೆಂದರೂವಾಸ್ತವದಲ್ಲಿ ವಾರ್ಷಿಕ 50,000ಕೋಟಿಯಿಂದ 1.2 ಲಕ್ಷ ಕೋಟಿ ಅಗತ್ಯವಿರುತ್ತದೆ ಎಂದು ಅಂದಾಜು ಮಾಡಲಾಗಿದೆ. ಆದರೆ ಇದು ಸರಕಾರವನ್ನು ಬಾಧಿಸಬೇಕಾಗಿಲ್ಲ. ಏಕೆಂದರೆ ದೇಶ ಆರೋಗ್ಯ ರಕ್ಷಣೆಯ ಸೇವೆಗಳಲ್ಲಿ ಬಿಕ್ಕಟ್ಟು ಎದುರಿಸುತ್ತಿದ್ದರೂ ಅದಕ್ಕೆ ಬಜೆಟಿನಲ್ಲಿ ನಿಡುರುವ ಮೊತ್ತ ಕಡಿಮೆಯಾಗಿದೆ ಎಂಬ ಸಂಗತಿಯತ್ತ ಜನಗಳ ಗಮನ ಹೋಗದಂತೆ ಮಾಡುವುದೇ (ಬೆಳಕು ಕಾಣುವ ಸಂಭವವೇ ಇರದ)ಈ ವಿಮಾ ಯೋಜನೆಯ ಪ್ರಕಟಣೆಯ ಹಿಂದಿರುವ ಪ್ರಾಥಮಿಕ ಆಶಯ.

ವಿಮಾ ಯೋಜನೆಗಳ ಮೂಲಕ ಆರೋಗ್ಯ ರಕ್ಷಣೆ?

ಇಲ್ಲಿ ಇನ್ನು ಅನೇಕ ಊಹೆಗೆ ನಿಲುಕದ ಸಂಗತಿಗಳಿವೆ. ‘ರಾಜ್ಯ ಸರ್ಕಾರಗಳು ಅದರಲ್ಲೂ ಬಡರಾಜ್ಯ ಸರ್ಕಾರಗಳು ಹೇಗೆ ಹಣವನ್ನು ಒದಗಿಸುತ್ತವೆ ಎಂಬ ಪ್ರಶ್ನೆಯಂತೂ ಇದೆ. ಯಾವುದಾದರೂ ಪವಾಡದ ಮುಖಾಂತರ ಹಣ ಅದು ಸಿಬಹುದು ಎಂದೇ ಇಟ್ಟುಕೊಳ್ಳೋಣ. ನಮ್ಮ ಆರೋಗ್ಯ ವ್ಯವಸ್ಥೆಗೆ ಇದರ ಅರ್ಥವೇನು? ವಿಮಾ ಯೋಜನೆಗಳ ಮುಖಾಂತರ ಆರೋಗ್ಯ ಒದಗಿಸುವುದರಲ್ಲಿ ನಮ್ಮ ಅನುಭವ ಹೇಗೆ?

2009 ರಲ್ಲಿ ಕೇಂದ್ರ ಸರ್ಕಾರ ರಾಷ್ಟವ್ಯಾಪಿಯಾದ “ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನಾ” ಆಸ್ಪತ್ರೆಯ ವಿಪರೀತ ಖರ್ಚು ಗಳನ್ನು ನಿರ್ವಹಿಸುವುದಕ್ಕೆ ಆಂದ್ರಪ್ರಆದರಿಯನ್ನು ತಗೊಂಡು ಆರಂಭವಾಯಿತು. ರಾಷ್ಟ್ರೀಯ ವಿಮಾ ಯೋಜನೆಯ ಜತೆಯಲ್ಲೇ ರಾಜ್ಯ ಸರ್ಕಾರಗಳ ರಾಜ್ಯಮಟ್ಟದ ಆರೋಗ್ಯ ಕಾರ್ಯಕ್ರಮಗಳು ಚಾಲ್ತಿಯುಲ್ಲಿದೆ. ಇವು ಮೂರನೇ ಒಂದರಷ್ಟು ಜನಸಂಖ್ಯೆಯನ್ನು ತಲುಪುತ್ತವೆ. ಅದರೆ ಇದು ಕೇವಲ ಊಹೆ. ಎನ್‌ಎಸ್‌ಎಸ್‌ಒ(2014) ಅಂಕಿ ಅಂಶಗಳ ಪ್ರಕಾರ ಇದರ ನಿಜವಾದ ವ್ಯಾಪ್ತಿ 10–12% ಮಾತ್ರ.

ಈ ವಿಮಾಯೋಜನೆಗಳು ಆಸ್ಪತ್ರೆ ಚಿಕಿತ್ಸೆಗಾಗಿ ಇರುವ ಕೆಲವೇ ನಿಗದಿತ ಕ್ರಮಗಳಿಗೆ ಮೀಸಲಾಗಿರುತ್ತದೆ.

ವಿಮಾಯೋಜನೆಗಳು ಆಸ್ಪತ್ರೆ ಖರ್ಚುಗಳುನ್ನು ಹೊಂದಿಸಲಿಕ್ಕಾಗಿ. ಇವು ನಿಂತಿರುವುದು ಎರಡು ಆಧಾರ ಸ್ಥಂಬಗಳ ಮೇಲೆ–ಹಣಕಾಸು ಮತ್ತು ಚಿಕಿತ್ಸಾ ಸೇವೆಗಳನ್ನು ಒದಗಿಸುವುದು. ಹಣಕಾಸು ಸಾರ್ವಜನಿಕ ಮೂಲಗಳಿಂದ ಬರುತ್ತದೆ. ಚಿಕಿತ್ಸೆ ಒದಗಿಸುವ ವಿಷಯ ಬಂದಾಗ ಅವು ಸಾರ್ವಜನಿಕ ಅಥವ ಖಾಸಗಿ ಅಂಗೀಕೃತ ಸೌಲಭ್ಯ ದಿಮದ ಬರಬಹದು. ಹೆಚ್ಚಾಗಿ ಅದು ಖಾಸಗಿ ವ್ಯವಸ್ಥೆಯೇ ಆಗಿರುತ್ತದೆ. ಉದಾಹರಣೆಗಾಗಿ ತೆಗೆದುಕೊಂಡರೆ ಆಂಧ್ರಪ್ರದೇಶದಲ್ಲಿ ಆರೋಗ್ಯಶ್ರೀ ಕಾರ್ಯಕ್ರಮದ ಮೂಲಕ 2007–2013 ಅವಧಿಯಲ್ಲಿ ಪಾವತಿಸಿದ ಮೊತ್ತ 4723 ಕೋಟಿ ರೂಗಳಾಗಿದ್ದು ಅದರಲ್ಲಿ ಸಾರ್ವಜನಿಕ ಸೌಲಭ್ಯಗಳಿಗೆ 1071 ಕೋಟಿ ನೀಡಿದ್ದರೆ ಖಾಸಗಿಯವರ ಪಾಲು 3652 ಕೋಟಿಗಳಾಗಿತ್ತು.

ಈ ಯೋಜನೆಯ ಎರಡನೇಯ ಸ್ಥಂಭದಲ್ಲಿ ಫಲಾನುಭವಿಗಳಿಗೆ ಕೆಲವು ನಿರ್ಧಾರಿತ ಖಾಯಿಲೆಗಳಿಗೆ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುವುದಕ್ಕೆ ವಿಮಾ ರಕ್ಷೆ ಲಭ್ಯವಿರುತ್ತದೆ. ಆದರೆ ಬಹುತೇಕ ಸಾಂಕ್ರಾಮಿಕ ರೋಗಗಳನ್ನು ಹೊರತುಪಡಿಸಲಾಗಿದ್ದು, ದೀರ್ಘಾವದಿ ಚಿಕಿತ್ಸೆ ಅವಶ್ಯವಿರುವ ಕ್ಷಯದಂತಹ ರೋಗಗಳಿಗೆ; ಸಾಮಾನ್ಯವಾಗಿ ಬೇರೂರಿದ ಖಾಯಿಲೆಗಳಾದ ಮಧುಮೇಹ, ರಕ್ತದೊತ್ತಡ, ಹೃದಯ ರೋಗಗಳಿಗೆ ಅಥವಾ ಕ್ಯಾನ್ಸರ್ ಚಿಕಿತ್ಸೆಗೆ ಆಸ್ಪತ್ರೆಯಲ್ಲಿ ದಾಖಲಾತಿ ಇಲ್ಲದೆ ಹೊರರೋಗಿಗಳಾಗಿಯೇ ಚಿಕಿತ್ಸೆ ನೀಡಲಾಗುತ್ತಿದೆ. ಮತ್ತೊಮ್ಮೆ ಆರೋಗ್ಯಶ್ರೀ ಅನುಭವದಲ್ಲಿ ಹೇಳುವುದಾದರೆ ರಾಜ್ಯದ ಆರೋಗ್ಯ ಬಜೆಟಿನ 25% ವೆಚ್ಚ ಕೇವಲ 2% ಖಾಯಿಲೆಗಳಿಗೆ ಸೀಮಿತವಾಗಿತ್ತು. ಇಂತಹ ಅಸಮಾನ ಆದ್ಯತೆಗಳು ಇಡೀ ಆರೋಗ್ಯ ವ್ಯವಸ್ಥೆಯ ರಚನೆಯನ್ನೇ ವಿರೂಪಗೊಳಿಸುತ್ತದೆ. ಸಾರ್ವಜನಿಕ ಹಣ ಈಗಾಗಲೆ ಬಲಿಷ್ಠವಾಗಿರುವ ಖಾಸಗಿ ಕಾರ್ಪೋರೇಟ್ ಆರೋಗ್ಯ ಕ್ಷೇತ್ರವನ್ನು ಬಲಪಡಿಸುತ್ತದೆ.

ತಾತ್ವಿಕವಾಗಿ, ಒಳ್ಳೆಯ ಆರೋಗ್ಯ ವ್ಯವಸ್ಥೆ ಪಿರಮಿಡ್ ಆಕಾರದಲ್ಲಿ ರುತ್ತದೆ. ಬಹುದೊಡ್ಡ ಸಂಖ್ಯೆಯ ಜನರಿಗೆ ಪ್ರಾಥಮಿಕವಾಗಿ ಅವರು ವಾಸಿಸುವ, ಕೆಲಸ ಮಾಡುವ ಜಾಗಗಳಲ್ಲೇ ಚಿಕಿತ್ಸೆ ನೀಡಬಹದು ಎರಡನೇಯ ಹಂತದಲ್ಲಿ ಕೆಲವರನ್ನು ಅವಶ್ಯಕತೆಯಿದ್ದಲ್ಲಿ ಸಮುದಾಯ ಚಿಕಿತ್ಸಾ ಕೇಂದ್ರಗಳಿಗೆ ಕಳಿಸಬೇಕಾಗಬಹುದು. ಮತ್ತು ಕೆಲವೇ ಜನರಿಗೆ ಮೂರನೇ ಹಂತದ ಚಿಕಿತ್ಸೆಯನ್ನು ಸ್ಪೆಷಾಲಿಟ್ ಕೇಂದ್ರಗಳಲ್ಲಿ ನೀಡ ಬೇಕಾಗಬಹುದು. ಪ್ರಾಥಮಿಕ ಮತ್ತು ಎರಡನೇಯ ಹಂತದ ಸೌಲಭ್ಯಗಳನ್ನು ಉತ್ತಮ ಪಡಿಸಿದರೆ ದುಬಾರಿ ಸ್ಪೆಷಲ್ ಆಸ್ಪತ್ರೆಗೆ ಹೋಗುವ ಅವಶ್ಯಕತೆ ಕಡಿಮೆಯಾಗುತ್ತದೆ. ಆರೋಗ್ಯ ವಿಮಾ ಯೋಜನೆಗಳು ಈ ಪಿರಮಿಡ್‌ನ್ನು ತಲೆಕೆಳಗಾಗಿಸಿ ಪ್ರಾಥಮಿಕ ಆರೋಗ್ಯ ಸೌಕರ್ಯಗಳಿಗೆ ಸಂಪನ್ಮೂಲ ಕೊರತೆಯುಂಟಾಗುವಂತೆ ಮಾಡುತ್ತವೆ.

ಇನ್ನೊಂದು ಚಿಂತೆಯ ವಿಷಯವೆಂದರೆ ಖಾಸಗಿ ಸಹಭಾಗಿತ್ವದಿಂದ ಸ್ಥಾಪಿಸಿದ ಸಾಮಾಜಿಕ ಆರೋಗ್ಯ ವಿಮಾ ಯೋಜನೆಗಳು ಅನೇಕ ರಾಜ್ಯಗಳಲ್ಲಿ ವಂಚನೆಮಾಡಿರುವುದು ಕಂಡು ಬಂದಿರುತ್ತದೆ. ಬೇಡದಿರುವ ಚಿಕಿತ್ಸೆ ನೀಡಿ (ತೋರಿಸಿ?) ವಿಮಾ ಕಂಪನಿಗಳ ಜೇಬನ್ನು ಈ ಖಾಸಗಿ ಸಂಸ್ಥೆಗಳು ತುಂಬಿಸುತ್ತಿರುವ ಹಲವಾರು ವರದಿಗಳಿವೆ. 22 ವರ್ಷದ ಹೆಣ್ಣು ಮಗಳಿಗೆ ನಗತ್ಯವಾಗಿ ಗರ್ಭಾಶಯ ತೆಗೆಯುವ ಶಸ್ತ ಚಿಕಿತ್ಸೆ ನಡೆಸಿರುವ ದಾರುಣ ಪ್ರಕರಣಗಳಿವೆ.

ನವ ಉದಾರವಾದಿ ತರ್ಕದ ಬೆಂಬಲ

ಚರ್ಚಾಸ್ಪದ ಪ್ರಶ್ನೆಯೆಂದರೆ ಈ ಸರ್ಕಾರವಾಗಲಿ ಅಥವಾ ಹಿಂದಿನ ಸರ್ಕಾರವಾಗಲಿ ಖಾಸಗಿ ಯವರನ್ನು ಭಾಗೀದಾರರಗಿಸುವ ವಿಮಾ ಯೋಜನೆಗಳನ್ನು ಪ್ರೋತ್ಸಾಹಿಸುತ್ತಿರುವುದು ಏಕೆ? ಇದು ಎಲ್ಲ ಸಾರ್ವಜನಿಕ ಸೇವೆಗಳನ್ನು ಕುರಿತಾದ ನವ ಉದಾರವಾದೀ ನಿಲುವಿನಲ್ಲೇ ಹುದುಗಿಕೊಂಡಿದೆ. ವಿಮಾ ಯೋಜನೆಗಳು ಸಾರ್ವಜನಿಕ ಹಣವನ್ನು ಖಾಸಗಿ ಸೌಲಭ್ಯಗಳತ್ತ ಹರಿಸುತ್ತವೆ. ಖಾಸಗಿಯವರು ಆಗಲೇ ಪ್ರಬಲವಾಗಿರುವಲ್ಲಿ ಸಾರ್ವಜನಿಕ ವ್ಯವಸ್ಥೆ ಮತ್ತಷ್ಟು ಕುಸಿಯುತ್ತದೆ. ಈ ಯೋಜನೆಗಳು ಒಂದು ಕಡೆ ಖಾಸಗಿಯವರಿಗೆ ನಿರಂತರವಾಗಿ ಗಿರಾಕಿಗಳು ಒದುಗುವಂತೆ ಖಾತ್ರಿ ಪಡಿಸುತ್ತದೆ. ಆರೋಗ್ಯ ರಕ್ಷೆಯ ಗುಣಮಟ್ಟ ಅಥವಾ ಚಿಕಿತ್ಸಾ ದರ ಯಾವ ನಿಬಂಧನೆಗಳಿಗೂ ಒಳಪಟ್ಟಿರುವುದಿಲ್ಲದಿರುವಾಗ ಖಾಸಗಿಯವರ ಪ್ರಾಬಲ್ಯ ಮತ್ತೊಂದು ಆತಂಕದ ವಿಷಯ.

ಸರ್ಕಾರಕ್ಕೆ ಸಾರ್ವಜನಿಕ ಆರೋಗ್ಯ ವಿಷಯದಲ್ಲಿ ನಿಜವಾಗಿಯೂ ಕಾಳಜಿಯಿದ್ದರೆ ಈಗ ಕುಸಿದು ಬಿದ್ದಿರುವ ಸಾರ್ವಜನಿಕ ವ್ಯವಸ್ಥೆಗಳನ್ನು ಸರಿಪಡಿಸಲು, ಬಲಪಡಿಸಲು ಹೆಚ್ಚಿನ ಹಣ ಒದಗಿಸಬಹುದಾಗಿತ್ತು. ಗೋರಖಪುರದ ಮಕ್ಕಳ ಸಾವುಗಳಂತಹ ಪ್ರಕರಣಗಳು ದಶಕಗಳಿಂದ ಸೌಲಭ್ಯಗಳ ಕೊರತೆ, ನಿರ್ಲಕ್ಷ ಮತ್ತು ತೀವ್ರ ಹಣದ ಕೊರತೆಯಿಂದ ನರಳುತ್ತಿರುವ ಸ್ಥಿತಿಯತ್ತ ಗಮನ ಸೆಳೆಯ ಬೇಕಾಗಿತ್ತು. ಆದರೆ ನವ ಉದಾರವಾದದ ತರ್ಕದ ಪ್ರಕಾರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಇನ್ನೊಂದು ಹೆಸರೇ ಅಸಮರ್ಥತೆ, ಅದಕ್ಷತೆ.

ಆದರೆ, ವಾಸ್ತವವಾಗಿ, ಆರೋಗ್ಯ ಕ್ಷೇತ್ರದಲ್ಲಿನ ಯಶಸ್ಸಿನ ಕತೆಗಳು ವರದಿಯಾಗಿರುವುದು ಉತ್ತಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಿರುವ ಇಂಗ್ಲೆಂಡ್, ಶ್ರೀಲಂಕಾ, ಥೈಲ್ಯಾಂಡ್, ಫ್ರಾನ್ಸ್, ಕ್ಯೂಬಾದಿಂದಲೇ. ಜೇಟ್ಲಿಯವರು ತಮ್ಮ ‘ಆರೋಗ್ಯ ಮತ್ತು ಕ್ಷೇಮಕೇಂದ್ರ’ (ಹೆಲ್ತ್ ಅಂಡ್ ವೆಲ್‌ನೆಸ್ ಸೆಂಟರ್–ಇದು ಈಗಿರುವ ಆರೋಗ್ಯ ಉಪಕೇಂದ್ರಕ್ಕೆ ಇನ್ನೊಂದು ಹೆಸರಷ್ಟೇ) ಗಳ ಬಗ್ಗೆ ಅಬ್ಬರದ ಮಾತುಗಳ ನಂತರ ಅದಕ್ಕೆ ನೀಡಿರುವುದು ಕೇವಲ 1200 ಕೋಟಿ ರೂ. ಇದು ದೇಶದಲ್ಲಿ ಪ್ರಾಥಮಿಕ ಹಂತದ ಕೇಂದ್ರಗಳನ್ನು ಕಟ್ಟಲು ಬೇಕಾದ ಹಣದ 5% ರಷ್ಟು ಮಾತ್ರವೇ.

ದೇಶದ ಬಹುಪಾಲು ಭಾಗಗಳಲ್ಲಿ ಮಾನ್ಯತೆ ಪಡೆದ ಪ್ರಾಥಮಿಕ ಸೇವೆಯಿಲ್ಲ. ಇದಕ್ಕೆ ತಕ್ಷಣ ಗಮನ ಕೊಡಬೇಕಾಗಿತ್ತು. ಪ್ರಾಥಮಿಕ ರಕ್ಷೆಯಿಲ್ಲದೆ ಬಹುಪಾಲು ಜನಸಂಖ್ಯೆಗೆ ಜಗಜಗಿಸುವ ಖಾಸಗಿ ಆಸ್ಪತ್ರೆಗಳಲ್ಲಿ ಮೋದಿಕೇರ್ ಪಡೆಯುವುದು ಎಂದೂ ಸಾಧ್ಯವಾಗದು.

ಸಂಭ್ರಮ ಪಡುತ್ತಿರುವವರು ಯಾರು?

ಕೊನೆಯದಾಗಿ, ಈ ಮೋದಿಕೇರ್ ಪ್ರಕಟಣೆಯಿಂದ ಸಂಭ್ರಮಪಡುತ್ತಿರುವವರು ಯಾರು ಎಂಬುದನ್ನು ನೋಡೋಣ. ನಮ್ಮ ದೇಶದ ಸಮೃದ್ಧಿ ಹೊಂದುತ್ತಿರುವ ಖಾಸಗಿ ಆರೋಗ್ಯ ಕ್ಷೇತ್ರದ ಮುಖ್ಯರಾದ ನರೇಶ್ ಟ್ರೆಹಾನ್ ಪ್ರಕಾರ “ಆರೋಗ್ಯದ ಬಗ್ಗೆ ಇಷ್ಟೊಂದು ಗಮನ ಕೇಂದ್ರಿಕರಿಸಿರುವ ಬಜೆಟ್‌ಗೆ ಪೂರ್ಣ ಅಂಕ” ಕಾರ್ಪೊರೇಟ್ ಮಂದಿ ಹುಚ್ಚೆದ್ದು ಕುಣಿಯುತ್ತಿರುವುದಕ್ಕೆ ಕಾರಣ ಹುಡುಕಲು ಯಾವ ಬಹುಮಾನವನ್ನೂ ಕೊಡಬೇಕಾಗಿಲ್ಲ. ಇದುವರೆಗೂ ಮಾಕ್ಸ್, ಫೋರ್ಟಿಸ್, ಅಪೊಲೊ. ಮೆಡೆಂತಾ – ಸಾರ್ವಜನಿಕ ಹಣದ ವಿಮಾ ಯೋಜನೆಗಳಿಂದ ದೂರ ಉಳಿದಿದ್ದವು. ಏಕೆಂದರೆ ಅವುಗಳಲ್ಲಿ ಹೆಕ್ಕಿಕೊಳ್ಳಲು ಸಾಕಷ್ಟು ಸಿಗದು ಎಂದು. ಡೆಂಗ್ಯೂ ಜರದಿಂದ ಸತ್ತ ಸಣ್ಣ ಹುಡುಗಿಯ ಕಡೆಯವರಿಂದ 18 ಲಕ್ಷ ರೂ.ಗಳನ್ನು ಯಾವುದೇ ನಾಚಿಕೆಯಿಲ್ಲದೆ ಕಿತ್ತುಕೊಂಡ ಪೋರ್ಟಿಸ್ ಆಸ್ಪತ್ರೆ ಪ್ರಕರಣವನ್ನು ನೆನಪಿಸಿಕೊಳ್ಳಿ ಅಥವಾ ಹಣ ಕಿತ್ತುಕೊಳ್ಳಲು ಸಾಧ್ಯವಾಗಲಿಕ್ಕಿಲ್ಲ ಎಂದು ಬದುಕಿರುವ ಮಗುವನ್ನು ಸತ್ತಿರುವುದೆಂದು ಘೋಷಿಸಿದ ಮ್ಯಾಕ್ಸ್ ಪ್ರಕರಣವನ್ನು ನೆನಪಿಸಿಕೊಳ್ಳಿ. ವಿಮಾ ಮಿತಿಯನ್ನು 5 ಲಕ್ಷಕ್ಕೆ ಹೆಚ್ಚಿಸಿರುವುದರಿಂದ ಲಾಭಕೋರತನಕ್ಕೆ ಹೊಸ ಮಾರ್ಗವೊಂದು ಲಭ್ಯವಾಗಿರುವುದನ್ನು ಕಂಡು ಇವರೆಲ್ಲ ಈ ಬಕ್ಷೀಸನ್ನು ಬಾಚಿಕೊಳ್ಳಲು ತಮ್ಮ ಕೈಗಳನ್ನು ಉಜ್ಜಿಕೊಳ್ಳುತ್ತಿರುವುದು ಈಗಾಗಲೇ ಕಾಣುತ್ತಿದೆ.

ರಾಜ್ಯಗಳ ಸುತ್ತ

ತ್ರಿಪುರಾದ ಜನತೆ ಮೋದಿಯವರ 'ಹೀರಾ'ಗಳನ್ನು ನೋಡಿದ್ದಾರೆ, ಅವುಗಳನ್ನು ತಿರಸ್ಕರಿಸುತ್ತಾರೆ, 'ಮಾಣಿಕ್ಯ' ಆರಿಸುತ್ತಾರೆ







ಫೆಬ್ರುವರಿ 8ರಂದು ತ್ರಿಪುರಾದಲ್ಲಿ ಚುನಾವಣಾ ಸಭೆಯುಲ್ಲಿ ಮಾತಾಡುತ್ತ ದೇಶದ ಪ್ರಧಾನ ಮಂತ್ರಿಗಳು ಬೆಲೆಬಾಳುವ ಮಣಿಗಳನ್ನು ಧರಿಸಿದರೆ ಒಳ್ಳೆಯದಾಗುತ್ತದೆ ಎಂಬ ಜ್ಯೋತಿಷಿಗಳ ಮೂಢನಂಬಿಕೆಯನ್ನು ಪುನರುಚ್ಚರಿಸುತ್ತ "ತ್ರಿಪುರಾದ ಜನತೆ 20ವರ್ಷಗಳಿಂದ ತಪ್ಪು ಮಾಣಿಕ್ಯವನ್ನು ಧರಿಸಿದ್ದಾರೆ, ಇದು ಅವರಿಗೆ ಅಪಾರ ಕಷ್ಟಗಳನ್ನು ತಂದಿದೆ. ಅದನ್ನು ತಿರಸ್ಕರಿಸಿ, ನಾವು ನಿಮಗೆ ವಜ್ರವನ್ನು ಕೊಡುತ್ತೇವೆ" ಎಂದರು. ಎಡರಂಗ ಸರಕಾರದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಹೆಸರಿನ ಮೇಲೆ ವ್ಯಂಗ್ಯವಾಡುವ ಟೀಕೆ ಇದಾಗಿತ್ತು.

ಇದಕ್ಕೆ ಉತ್ತರಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಚುನಾವಣಾ ಪ್ರಚಾರ ಸಭೆಯಲ್ಲಿ "ಈ ಹೀರಾಗಳು ಯಾರು ಎಂದು ತ್ರಿಪುರಾದ ಜನತೆ ನೋಡಿದ್ದಾರೆ, ಅವರು ವೇದಿಕೆಯ ಮೇಲೆ ಮೋದಿಯವರ ಪಕ್ಕದಲ್ಲೇ ಇದ್ದರು" ಎಂದರು. ಪ್ರತ್ಯೇಕತಾವಾದಿ ಐಪಿಎಫ್‌ಟಿಯ ಮುಖಂಡರು ಅವರ ಪಕ್ಕದಲ್ಲಿದ್ದವರು. ಉಗ್ರಗಾಮಿ ಗುಂಪುಗಳ ಜತೆಗೆ ಕೈಜೋಡಿಸಿರುವವರು, ಕ್ರಿಮಿನಲ್ ಕೇಸುಗಳನ್ನು ಹೊತ್ತವರು ಮತ್ತು ಪಕ್ಷಾಂತರಿಗಳನ್ನು ಅವರ 'ಹೀರಾ'ಗಳು (ವಜ್ರಗಳು) ಎಂದು ಬೃಂದಾ ಅವರು ವರ್ಣಿಸಿದಾಗ ನೆರೆದಿದ್ದ ಸಾವಿರಾರು ಮಂದಿ ಹರ್ಷೋದ್ಗಾರ ಮಾಡಿದರು. ಅಂಕೆ-ಸಂಖ್ಯೆಗಳೊಂದಿಗೆ ಪ್ರಧಾನಿಗಳ ಸುಳ್ಳುಗಳನ್ನು ಬಯಲಿಗೆಳೆಯುತ್ತ "ಅವರು ದೇಶದ ಪ್ರಧಾನ ಮಂತ್ರಿಯಾಗಿ ಮಾತಾಡಲಿಲ್ಲ, ಭಾರತೀಯ ಜಗಡಾ(ಜಗಳ) ಪಾರ್ಟಿಯ ಮುಖಂಡರಾಗಿ ಮಾತಾಡಿದ್ದಾರೆ, ಸುಳ್ಳುಗಳು ಮತ್ತು ಮಾಣಿಕ್ ಸರ್ಕಾರ್ ಬಗ್ಗೆ ಬೈಗುಳದ ಮಾತುಗಳು ತ್ರಿಪುರಾದಲ್ಲಿ ಅವರಿಗೆ ಮತಗಳನ್ನು ತಂದು ಕೊಡುವುದಿಲ್ಲ ಎಂದು ಗೇಲಿ ಮಾಡಿದರು. ದಿಲ್ಲಿಯಿಂದ ಬರುವ ಬಿಜೆಪಿ ಮುಖಂಡರಿಗೆ ರಾಜ್ಯದಲ್ಲಿ ಎಡರಂಗ ಸರಕಾರದ ಅಡಿಯಲ್ಲಿ ಆಗಿರುವ ಅಭಿವೃದ್ಧಿಯನ್ನು ಕಾಣಲು ತ್ರಿಪುರದ ಜನತೆ ಕನ್ನಡಕಗಳನ್ನು ಕೊಡಬೇಕು ಎಂದು ಮನವಿ ಮಾಡಿದರು.

ಇನ್ನೊಬ್ಬ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಸುಭಾಷಿಣಿ ಅಲಿ ಮಾತಾಡುತ್ತ ಪ್ರಾಚೀನ ಕಾಲದಲ್ಲಿ ಹೀರಾ(ವಜ್ರ)ಗಳನ್ನು ಆತ್ಮಹತ್ಯೆಗೆ ಜನ ಬಳಸುತ್ತಿದ್ದರು ಎಂಬುದನ್ನು ಮೋದಿಯವರು ಮರೆತಂತಿದೆ ಎಂದರು. ಎಲ್ಲ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಅವರು ಮೋದಿಯವರಿಗೆ ನೆನಪಿಸಿದರು. ತ್ರಿಪುರಾದ ಮತದಾರರು ಈ ಹೀರಾಗಳನ್ನು ತಿರಸ್ಕರಿಸುತ್ತಾರೆ ಎಂದರು. ತ್ರಿಪುರಾದಲ್ಲಿ ಮೋದಿಯವರು ಉದ್ಯೋಗ ಕೊಡುವುದಾಗಿ ಹೇಳುತ್ತಾರೆ, ದಿಲ್ಲಿಯಲ್ಲಿ ಪಕೋಡಾ ಮಾರಲು ಹೇಳುತ್ತಾರೆ ಎಂದೂ ಅವರು ಲೇವಡಿ ಮಾಡಿದರು. ಯುವಜನರಿಗೆ ಉದ್ಯೋ ಗ ಕೊಡಲು ನೀವೇನು ಮಾಡಿದ್ದೀರಿ ಎಂದು ತ್ರಿಪುರಾದ ಮತದಾರರು ಅವರನ್ನು ಕೇಳಬೇಕು ಎಂದು ಸುಭಾಷಿಣಿ ಅಲಿ ಹೇಳಿದರು.

ಪ್ರಧಾನಿಗಳ ನಂತರ ಕೇಂದ್ರ ಹಣಕಾಸು ಮಂತ್ರಿ, ಸಾರಿಗೆ ಮಂತ್ರಿ, ಜವಳಿ ಮಂತ್ರಿ, ಬಿಜೆಪಿ ಆಳ್ವಿಕೆಯ ರಾಜ್ಯಗಳ ಮುಖ್ಯಮಂತ್ರಿಗಳು ಸಾಲುಗಟ್ಟಿ ಬಂದರು, ಬಿಜೆಪಿಯ ರಾಷ್ಟ್ರ ಅಧ್ಯಕ್ಷರೂ ಬಂದರು, ತಮ್ಮ-ತಮ್ಮ ಪಾಲಿನ ಸುಳ್ಳುಗಳನ್ನು ಹರಡಿಸಿ ಹೋದರು.

ಚುನಾವಣಾ ಪ್ರಣಾಳಿಕೆಯ ಬದಲು ಬಿಜೆಪಿಯ 'ಕಣ್ಣೋಟ ದಸ್ತಾವೇಜು' ಕೊನೆಗೂ ಬಿಡುಗಡೆಯಾಗಿದೆ- ಪ್ರತಿಕುಟುಂಬಕ್ಕೆ ಉದ್ಯೋಗ, 7ನೇ ವೇತನ ಆಯೋಗ ಇತ್ಯಾದಿ 'ಜುಮ್ಲಾ'ಗಳು ದಂಡಿಯಾಗಿವೆ, ಆದರೆ ಅದರ ಮಿತ್ರಪಕ್ಷವಾದ ಐಪಿಎಫ್‌ಟಿಯ ಪ್ರತ್ಯೇಕ ತ್ವಿಪ್ರಲ್ಯಾಂಡಿನ ಪ್ರಸ್ತಾಪವೇ ಇಲ್ಲ.

ಬೇರೆ ರಾಜ್ಯಗಳಿಂದ ಆರೆಸ್ಸೆಸ್ ಕಾರ್ಯಕರ್ತರೂ ಬಂದು ಹರಡಿಕೊಳ್ಳುತ್ತಿದ್ದಾರೆ, ಹಣದ ಹೊಳೆಯೂ ಹರಿದು ಬರುತ್ತಿದೆ. ಮತದಾರರಿಗೆ ಆಮಿಷ ಕೊಡಲು, ಅದಕ್ಕೆ ಸ್ಪಂದಿಸದಿದ್ದರೆ, ಭಯೋತ್ಪಾದನೆಯ ತಯಾರಿಗಾಗಿ. ಬುಡಕಟ್ಟು ಜನರು ಮತ್ತು ಇತರರ ನಡುವೆ ಒಡಕು ತರುವ ಪಿತೂರಿಗಳು ಇದುವರೆಗೆ ಸಫಲವಾಗಿಲ್ಲ. ಎಡರಂಗದ ಕಾರ್ಯಕರ್ತರು ಇವು ಯಾವುದರಿಂದಲೂ ವಿಚಲಿತರಾಗದೆ ರಾಜ್ಯದ ಮೂಲೆ-ಮೂಲೆಗಳಲ್ಲಿ ಪ್ರಚಾರ ಮಾಡುತ್ತಿದ್ದಾರೆ,ಪ್ರಧಾನಿಗಳ ಮತ್ತು ಅವರ ಸಹಯೋಗಿಗಳ ಸುಳ್ಳುಗಳನ್ನು ಬಯಲಿಗೆಳೆಯುತ್ತಿದ್ದಾರೆ, ತಪ್ಪಲುಗಳಲ್ಲಿ, ಬೆಟ್ಟ-ಗುಡ್ಡಗಳಲ್ಲಿ ಎಲ್ಲೆಲ್ಲೂ ಕೆಂಬಾವುಟಗಳು ಹಾರಾಡುತ್ತಿವೆ. ಮುಖ್ಯಮಂತ್ರಿ ಮಾಣಿಕ್ ಸರ್ಕಾರ್, ಅವರ ಸಂಪುಟದ ಇತರ ಮಂತ್ರಿಗಳು, ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್, ಮಹಮ್ಮದ್ ಸಲೀಂ, ಸುಭಾಷಿಣಿ ಅಲಿ ಬೃಹತ್ ಚುನಾವಣಾ ಸಭೆಗಳನ್ನುದ್ದೇಶಿಸಿ ಪ್ರಚಾರದಲ್ಲಿ ತೊಡಗಿದ್ದಾರೆ ಎಂದು ರಾಜ್ಯದ ಹಿರಿಯ ಸಿಪಿಐ(ಎಂ) ಮುಖಂಡ ಗೌತಮ್ ದಾಸ್ ಹೇಳಿದ್ದಾರೆ.

ಇದೇ ಫೆಬ್ರುವರಿ 18 ರಂದು ಮತದಾನ ನಡೆಯಲಿದೆ.

ಪ್ರಧಾನ ಮಂತ್ರಿಗಳ ಭೇಟಿಯ ನಂತರ ತ್ರಿಪುರಾದಲ್ಲಿ ಅವರಿಗೆ ಬಂದಿರುವ ಸವಾಲು ರಾಷ್ಟ್ರೀಯ ಮಾಧ್ಯಮಗಳನ್ನೂ ಸೆಳೆದಂತೆ ಕಾಣುತ್ತದೆ. ನ್ಯೂಸ್18 ಪ್ರಧಾನಿಗಳ ಮಾಣಿಕ್-ಹೀರಾ ಪ್ರಾಸದ ಬಗ್ಗೆ ಕೇಳಿದಾಗ ಮಾಣಿಕ್ ಸರ್ಕಾರ್ ಪ್ರತಿಕ್ರಿಯ ಹೀಗಿತ್ತು

"ನಾವು ನಡೆಸುತ್ತಿರುವುದು ಸಿದ್ಧಾಂತ, ರಾಜಕೀಯ, ಕಾರ್ಯಕ್ರಮಗಳು ಮತ್ತು ಅವುಗಳ ಜಾರಿಯ ಹೋರಾಟ. ಇದು ಇಬ್ಬರು ವ್ಯಕ್ತಿಗಳ ನಡುವಿನ ಸಮರವಲ್ಲ. ಅವರು ಕೂತಿರುವ ಪೀಠಕ್ಕೆ ನನ್ನ ಗೌರವವಿದೆ. ಅವರು ನಮ್ಮ ಪ್ರಧಾನ ಮಂತ್ರಿ. ಇಂತಹ ಮಾತುಗಳನ್ನಾಡಿ ಅವರು ತಮ್ಮ ದೌರ್ಬಲ್ಯವನ್ನು ಪ್ರದರ್ಶಿಸಿದ್ದಾರಷ್ಟೆ. ಇದು ಅವರಿಂದ ನಿರೀಕ್ಷಿಸುವಂತದ್ದಲ್ಲ."

ಕೊಲ್ಕತಾದ ಟೆಲಿಗ್ರಾಫ್ ಪತ್ರಿಕೆಯ ಸಂದರ್ಶನದಲ್ಲಿ ಕೇಳಿದ ಪ್ರಶ್ನೆಗೆ ಮಾಣಿಕ್ ಸರ್ಕಾರ್ ಉತ್ತರ:

"ಬಿಜೆಪಿ ಮತ್ತು ಐಪಿಎಫ್‌ಟಿ ಒಂದಕ್ಕೊಂದು ಹೇಳಿ ಮಾಡಿಸಿದವುಗಳು. ಒಂದು ವೈಷಮ್ಯ ಹುಟ್ಟಿಸುತ್ತದೆ, ಇನ್ನೊಂದು ಅದನ್ನು ಸಾಗಿಸುವ ಸಾಧನ ಒದಗಿಸುತ್ತದೆ. ಅವರು ನಾವು ಕಷ್ಟಪಟ್ಟು ಗಳಿಸಿದ ಶಾಂತಿಯನ್ನು ನಾಶಮಾಡುತ್ತಾರೆ. ಆದರೆ ನಮ್ಮ ಮತದಾರರು ಮೂರ್ಖರಲ್ಲ. ಅವರು ವಿಚ್ಛಿದ್ರಕಾರಿತೆಯ ಹಳೆಯ ಮದ್ಯವನ್ನು ಈ ಹೊಸ ಬಾಟಲಿನಲ್ಲಿ ಗುರುತಿಸಬಲ್ಲರು."

ಮುಝಫ್ಫರ್‌ನಗರ ಗಲಭೆ ಕೇಸುಗಳನ್ನು ಹಿಂತೆದುಕೊಳ್ಳುವುದಕ್ಕೆ ಡಿಎಂ ಮತ್ತು ಎಸ್‌ಎಸ್‌ಪಿ ವಿರೋಧ

2013ರಲ್ಲಿ ಉತ್ತರಪ್ರದೇಶದ ಮುಝಫ್ಫರ್‌ನಗರ ಭೀಕರ ಕೋಮುಗಲಭೆಗಳನ್ನು ಕಂಡಿತ್ತು. ಅದರಲ್ಲಿ 60ಕ್ಕೂ ಹೆಚ್ಚು ಮಂದಿ ಪ್ರಾಣ ಕಳಕೊಂಡರು, 40ಸಾವಿರ ಮಂದಿ ಮನೆಮಾರು ಕಳಕೊಂಡರು.

ಬಿಜೆಪಿ ಈ ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ನಾಂದಿ ಹಾಕಿದ ಈ ಗಲಭೆಗಳಿಗೆ ಕಾರಣರಾಗಿದ್ದಾರೆ ಎಂಬವರ ಮೇಲೆ ಕೇಸುಗಳ ವಿಚಾರಣೆಗಳು ನಡೆಯುತ್ತಿವೆ. ಆರೋಪಿಗಳಲ್ಲಿ ಕೇಂದ್ರದಲ್ಲಿ ಮಂತ್ರಿಯಾಗಿದ್ದ ಸಂಜೀವ ಬಲಿಯಾನ್, ರಾಜ್ಯದಲ್ಲಿ ಮಂತ್ರಿಯಾಗಿರುವ ಸುರೇಶ್ ರಾಣ, ಸಂಸದ್ ಸದಸ್ಯ ಭರತೇಂದು ಸಿಂಗ್, ಶಾಸಕ ಉಮೇಶ್ ಮಲಿಕ್, ಬಿಜೆಪಿ ಮುಖಂಡೆ ಸಾಧ್ವಿ ಪ್ರಾಚಿ ಮುಂತಾದವರಿದ್ದಾರೆ. ಮುಖ್ಯಮಂತ್ರಿಗಳ ಮೇಲಿನ ಕೇಸುಗಳ ವಿಚಾರಣೆ ನಡೆಯದಂತೆ ಮಾಡಿರುವ ಇಲ್ಲಿಯ ಬಿಜೆಪಿ ಸರಕಾರ ಜಿಲ್ಲಾ ಮ್ಯಾಜಿಸ್ಟ್ರೇಟ್(ಡಿಎಂ) ಮತ್ತು ಹಿರಿಯ ಪೋಲೀಸ್ ಸೂಪರಿಂಟೆಂಡೆಂಟ್ (ಎಸ್‌ಎಸ್‌ಪಿ)ರಿಗೆ ಎರಡೆರಡು ಪತ್ರ ಕಳಿಸಿತ್ತು. ಇವುಗಳಲ್ಲಿ 10 ಕೇಸುಗಳನ್ನು 'ಸಾರ್ವಜನಿಕ ಹಿತಾಸಕ್ತಿ'ಯಿಂದ ಹಿಂತೆಗೆದುಕೊಳ್ಳಲು ಸಾಧ್ಯವೇ ಎಂಬುದೂ ಸೇರಿದಂತೆ 13 ಅಂಶಗಳ ಬಗ್ಗೆ ಮಾಹಿತಿ ಕೇಳಲಾಗಿತ್ತು. ನ್ಯಾಯದ ದೃಷ್ಟಿಯಿಂದ ಮತ್ತು ಜಿಲ್ಲಾ ವಿಚಾರಣಾ ಇಲಾಖೆಯ ಶಿಫಾರಸಿನ ಮೇಲೆ ಈ ಕೇಸುಗಳನ್ನು ಹಿಂತೆಗೆದುಕೊಳ್ಳುವುದು ಬೇಡ ಎಂದು ಅವರಿಗೆ ಉತ್ತರ ಸಿಕ್ಕಿರುವುದಾಗಿ ವರದಿಯಾಗಿದೆ.

ಈ ಕೇಸುಗಳಲ್ಲಿ ಆಗಲೇ ಪೋಲಿಸರು ಆರೋಪಪತ್ರಗಳನ್ನು ಹಾಕಿರುವುದರಿಂದ ಮತ್ತು ವಿಶೇಷ ತನಿಖಾ ದಳದ ವಿಚಾರಣೆ ನಡೆಯುತ್ತಿದೆಯಾದ್ದರಿಂದ ಮುಝಫ್ಫರ್‌ನಗರ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಎಸ್‌ಎಸ್‌ಪಿ ಈ ಕೇಸುಗಳನ್ನು ಹಿಂತೆಗೆದುಕೊಳ್ಳುವದನ್ನು ವಿರೋಧಿಸಿದ್ದಾರೆ ಎಂದು ತಿಳಿದು ಬಂದಿದೆ.



ನಾಗಾಲ್ಯಾಂಡ್ ಬಿಜೆಪಿ: 'ಧ್ರುವೀಕರಣ'ದ ಎಚ್ಚರಿಕೆ ಮತ್ತು ಕ್ರೈಸ್ತರ 'ತುಷ್ಟೀಕರಣ'

ಹೌದು, ಕೋಮು ಅಥವ ಇನ್ನಾವುದೇ ಐಡೆಂಟಿಟಿಯ ಧ್ರುವೀಕರಣವನ್ನು ತನ್ನ ಕಾರ್ಯಪ್ರಣಾಳಿಯ ಮುಖ್ಯ ಅಂಶವಾಗಿ ಮಾಡಿಕೊಂಡಿರುವ ಬಿಜೆಪಿ ಈ ತಿಂಗಳ ಕೊನೆಗೆ ಮತದಾನ ನಡೆಯಲಿರುವ ನಾಗಾಲ್ಯಾಂಡಿನಲ್ಲಿ ಧಾರ್ಮಿಕ ಧ್ರುವೀಕರಣದ ಬಗ್ಗೆ ಎಚ್ಚರಿಕೆ ನೀಡಿದೆ! ಮತ್ತು ಮುಸ್ಲಿಮರ 'ತುಷ್ಟೀಕರಣ'ದ ಬೊಬ್ಬೆ ಹಾಕುವ ಈ ಪಕ್ಷ ಕ್ರೈಸ್ತರ 'ತುಷ್ಟ್ಟೀಕರಣ'ಕ್ಕೆ ಇಳಿದಿದೆ!

ಬಿಜೆಪಿಯ ರಾಜ್ಯ ಘಟಕ ನೀಡಿದ ಒಂದು ಹೇಳಿಕೆಯಲ್ಲಿ ಚುನಾವಣೆಗಳಲ್ಲಿ ಧಾರ್ಮಿಕ ಧ್ರುವೀಕರಣದ ಪ್ರಯತ್ನವನ್ನು ಮಾಡಲು ಕೆಲವರು ಪ್ರಯತ್ನಿಸುತ್ತಿದ್ದಾರೆ ಎಂದು ಆಪಾದಿಸಿದೆ. ಆದರೆ ನಾಗಾ ಬ್ಯಾಪ್ಟಿಸ್ಟ್ ಚರ್ಚ್ ಕೌನ್ಸಿಲ್ ಇದನ್ನು ಮಾಡುತ್ತಿಲ್ಲ ಎಂದೂ 'ಸ್ಪಷ್ಟೀಕರಣ' ನೀಡಿದೆ. ಆದರೆ ಚರ್ಚಿನ ಕೆಲವು ಮುಖಂಡರುಗಳು ಜನಗಳಲ್ಲಿ 'ಗೊಂದಲ' ಉಂಟು ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ಅದು ಹೇಳಿದೆ.

ಮುಂದುವರೆದು ಬಿಜೆಪಿ ಕೋಮುವಾದಿಯಲ್ಲ, ಭಾರತದ ಸಂವಿಧಾನದ ಜಾತ್ಯತೀತ ಸ್ವರೂಪವನ್ನು ಯಾವುದೇ ರಾಜಕಿಯ ಪಕ್ಷ, ಅದು ನಿಚ್ಚಳ ಬಹುಮತ ಪಡೆದರೂ ಬದಲಿಸಲು ಸಾಧ್ಯವಿಲ್ಲ ಎಂದೂ ಅದು ಹೇಳಿದೆ !

ಇನ್ನೊಂದೆಡೆಯಲ್ಲಿ ಸ್ವತಃ ತಾನೇ ಅಲ್ಪಸಂಖ್ಯಾತರ 'ತುಷ್ಟೀಕರಣ'ಕ್ಕೆ ಮುಂದಾಗಲೂ ಹೇಸಿಲ್ಲ. "ನಾವು ಅಧಿಕಾರಕ್ಕೆ ಬಮದರೆ ಹಿರಿಯ ಕ್ರೈಸ್ತ ನಾಗರಿಕರನ್ನು ಜೆರುಸಲೇಂ ಪ್ರವಾಸಕ್ಕೆ ಕಳಿಸುತ್ತೇವೆ" ಎಂದು ಇಲ್ಲಿನ ಬಿಜೆಪಿ ವಕ್ತಾರ ಜೇಮ್ಸ್ ವಿಝೊ ಹೇಳಿರುವುದಾಗಿ ವರದಿಯಾಗಿದೆ.

ಮಾಲ್ಡೀವ್ಸ್‌ಗೆ ಬೇಕಿರುವುದು ಪ್ರಜಾಪ್ರಭುತ್ವ, ಭಾರತದ ಮಧ್ಯಪ್ರವೇಶವಲ್ಲ

ಮಾಲ್ಡೀವ್ಸ್‌ನ ಅಧ್ಯಕ್ಷ ಯಮೀನ್ ಸರ್ಕಾರವು ಸರ್ವಾಧಿಕಾರಿ ಧೋರಣೆಗಳನ್ನು ಅನುಸರಿಸಿ, ಪ್ರಜಾಪ್ರಭುತ್ವದ ಆಶಯಗಳನ್ನು ಕಗ್ಗೊಲೆ ಮಾಡುತ್ತಿದೆ. ಆದರೆ ಭಾರತದ ಮಧ್ಯಪ್ರವೇಶ ಮತ್ತಷ್ಟು ಅಸ್ತವ್ಯಸ್ತತೆಯನ್ನು ತರಬಹುದಷ್ಟೇ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಮಾಲ್ಡೀವ್ಸ್ ರಾಷ್ಟ್ರವು 26 ಹವಳ ದಿಬ್ಬಗಳು ಮತ್ತು 1192 ಪ್ರತ್ಯೇಕ ದ್ವೀಪಗಳನ್ನು ಹೊಂದಿರುವ ಆಕರ್ಷಕ ದ್ವೀಪ ರಾಷ್ಟ್ರವಾಗಿದೆ. ಇದೀಗ ತುರ್ತು ಪರಿಸ್ಥಿತಿಯ ಕರಾಳತೆಯನ್ನು, ರಾಜಕೀಯ ಸಂಕ್ಷೋಭೆಯನ್ನು ಈ ರಾಷ್ಟ್ರ ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿಯೇ ಮಾಲ್ಡೀವ್ಸ್‌ನ ಮಾಜಿ ಅಧ್ಯಕ್ಷ ಮೊಹಮದ್ ನಶೀದ್ ನೆರೆಯ ನಮ್ಮ (ಭಾರತ) ದೇಶಕ್ಕೆ ಮಿಲಿಟರಿ ಕಾರ್ಯಾಚರಣೆಯ ಮೂಲಕ ಹಸ್ತಕ್ಷೇಪ ಮಾಡುವಂತೆ ಕರೆಯನ್ನು ಕೊಟ್ಟಿದ್ದಾರೆ. ಅಪರೇಷನ್ ಕ್ಯಾಕ್ಟಸ್ (ಅಂದರೆ, 1988 ರಲ್ಲಿ ಮಾಲ್ಡೀವ್ಸ್ ನಲ್ಲಿ ಭಾರತೀಯ ಮಿಲಿಟರಿ ಕಾರ್ಯಾಚರಣೆ) ಅನ್ನು ಪುನಾರಾವರ್ತಿಸುವ ಮೂಲಕ ಹಾಗೆಯೇ, ಭಾರತದ 'ಹಿತಾಸಕ್ತಿ' ಯನ್ನು ಮರು ಸ್ಥಾಪಿಸಲು, ಪ್ರಸ್ತುತ ಮಾಲ್ಡೀವ್ಸ್ ನ ರಾಜಕೀಯ ಪರಿಸ್ಥಿಯನ್ನು ಬಳಸಿಕೊಳ್ಳಬೇಕೆಂದು ಇಲ್ಲಿನ ಗಿಡುಗಗಳು ತುದಿಗಾಲಲ್ಲಿ ನಿಂತಿದ್ದಾರೆ.

ಈ ಹಿನ್ನೆಲೆಯಲ್ಲಿ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು "ಮಾಲ್ಡೀವ್ಸ್ ನಲ್ಲಿನ ಪ್ರಸ್ತುತ ರಾಜಕೀಯ ಬೆಳವಣಿಗೆಗಳನ್ನು ನಾವು ತುಂಬ ಎಚ್ಚರಿಕೆಯಿಂದ ಗಮನಿಸುತ್ತಿದ್ದೇವೆ. ಅಲ್ಲಿನ ಸರ್ಕಾರದ ಎಲ್ಲಾ ಅಂಗಗಳು ಪ್ರಜಾಪ್ರಭುತ್ವ ಮತ್ತು ಕಾನೂನಿನ ಆಳ್ವಿಕೆಯ ಸ್ಫೂರ್ತಿಯಿಂದ ಸರ್ವೋಚ್ಚ ನ್ಯಾಯಾಲಯದ ಆದೇಶಕ್ಕೆ ಗೌರವ ತೋರುವುದು ಮತ್ತು ಪಾಲಿಸುವುದು ಅತ್ಯಗತ್ಯವಾಗಿದೆ" ಎಂದು ಹೇಳಿಕೆ ನೀಡಿದೆ.

ಮಾಜಿ ರಾಜತಾಂತ್ರಿಕ ಮತ್ತು ರಾಜಕೀಯ ವಿಶ್ಲೇಷಕರಾದ ಎಂ.ಕೆ. ಭದ್ರಕುಮಾರ್ ಭಾರತದ ಈ ನಿಲುವು ಪ್ರಚೋದನಕಾರಿ ಎಂದು ಟೀಕಿಸಿದ್ದಾರೆ. ಮಾಲ್ಡೀವ್ಸ್ ನ ಸರ್ಕಾರವು ತನ್ನ ಆಂತರಿಕ ರಾಜಕೀಯಕ್ಕೆ ಸಂಬಂಧಪಟ್ಟಂತೆ ಕೆಲವು ಕಾರ್ಯಾಚರಣೆಗಳನ್ನು ನಡೆಸಬೇಕು ಎಂದಿರುವುದು, ಅತ್ಯಗತ್ಯವಾಗಿದ ಎಂದು ವಸಾಹತುಶಾಹಿ ಯುಗದ ಮತ್ತು ಫಿರಂಗಿ ದೋಣಿ ರಾಜತಂತ್ರಕ್ಕೆ ವಾಪಸ್ಸು ಮರಳುವಂತಹದ್ದು ಎಂದು ಎಂದು ಭದ್ರಕುಮಾರ್ ಟೀಕಿಸಿದ್ದಾರೆ.

ರಕ್ಷಣಾ ಮೂಲಗಳ ಕೆಲವು ವರದಿಗಳ ಪ್ರಕಾರ, ಭಾರತೀಯ ಸೇನೆ, ಅದರ ವಿಶೇಷ ಪಡೆಗಳು ಸೇರಿದಂತೆ, ನೌಕಪಡೆಗಳು ಸಹ, ಸಂಪೂರ್ಣ ಕಾರ್ಯಾಚರಣೆಗೆ ಸಜ್ಜುಗೊಳ್ಳುತ್ತಿವೆ. ಆದರೆ ಮಾಲ್ಡೀವ್ಸ್ ನ ಪ್ರಸಕ್ತ ಪರಿಸ್ಥಿತಿ 1988ಕ್ಕಿಂತ ಭಿನ್ನವಾಗಿದೆ, ಇದರಿಂದಾಗಿ ಭಾರತದ ಹಸ್ತಕ್ಷೇಪವು ಆ ದ್ವೀಪ ರಾಷ್ಟ್ರವನ್ನು ಗೊಂದಲದ ಗೂಡಾಗಿಸುತ್ತದೆ ಎಂದು ತಜ್ಞರ ವಾದವಾಗಿದೆ.

ರಾಜಕೀಯ ನಾಟಕ

ತುರ್ತು ಪರಿಸ್ಥಿತಿಯನ್ನು ಘೋಷಿಸಿದ ಕೆಲವೇ ಗಂಟೆಗಳ ನಂತರ ಮಾಲ್ಡೀವಿಯನ್ ರಾಷ್ಟ್ರೀಯ ರಕ್ಷಣಾ ಪಡೆಯ (ಎಂ.ಎನ್.ಡಿ.ಎಫ್) ಸೈನಿಕರು ಮಾಲ್ಡೀವ್ಸ್ ನ ರಾಜಧಾನಿಯಾದ ಮಾಲೆನಗರ ದಲ್ಲಿರುವ ಸುಪ್ರೀಂ ಕೋರ್ಟಿನ ಕಟ್ಟಡದೊಳಕ್ಕೆ ನುಗ್ಗಿ ಒಂಬತ್ತು ಗಂಟೆಗಳ ಮುತ್ತಿಗೆಯ ನಂತರ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಅಬ್ದುಲ್ಲಾ ಸಯೀದ್ ಮತ್ತು ಮತ್ತೊಬ್ಬ ನ್ಯಾಯಾಧೀಶ ಅಲಿ ಹಮೀದ್ ರನ್ನು ಬಂಧಿಸಿದರು. ಮಾಜಿ ಅಧ್ಯಕ್ಷ ಮೊಹಮ್ಮದ್ ನಶೀದ್ ಮತ್ತು ಮಾಜಿ ಉಪಾಧ್ಯಕ್ಷ ಅಹ್ಮದ್ ಅಡೀಬ್, ಸೇರಿದಂತೆ, ಅಗ್ರಗಣ್ಯ ವಿರೋಧಿ ನಾಯಕರನ್ನು ಬಿಡುಗಡೆ ಮಾಡಿ ಎಂದು ಸುಪ್ರೀಂ ಕೋರ್ಟ್ ಅಧ್ಯಕ್ಷ ಅಬ್ದುಲ್ಲಾ ಯಮೀನ್ ರವರಿಗೆ ಆದೇಶ ಹೊರಡಿಸಿದ ನಂತರ, ಈ ಭಾರೀ ಹುರುಪಿನ ನಾಟಕ ಮಾಲ್ಡೀವ್ಸ್‌ನ ರಾಜಧಾನಿಯ ಬೀದಿಗಳಲ್ಲಿ ಕಾಣ ಬಂದಿತು.

ನ್ಯಾಯಾಲಯವು ಇಬ್ಬರು ಪ್ರಭಾವಿ ಮಾಜಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಮೇಲಿರುವ ಆರೋಪಗಳ ಕುರಿತಂತೆ ನ್ಯಾಯೋಚಿತವಾಗಿ ಮತ್ತು ಯಾವುದೇ ಅನಪೇಕ್ಷಿತ ಪ್ರಭಾವವಿಲ್ಲದೆ ವಿಚಾರಣೆ ನಡೆಸುವವರೆಗೂ, ಅವರಿಬ್ಬರನ್ನು ಬಿಡುಗಡೆಗೊಳಿಸಿರೆಂದು ಸರ್ಕಾರಕ್ಕೆ ಸಂಕ್ಷಿಪ್ತವಾದ



ಆದೇಶ ಹೊರಡಿಸಿತ್ತು. ಈ ಆದೇಶವನ್ನು ವಾಪಸ್ಸು ಪಡೆಯಲು ನ್ಯಾಯಾಲಯ ನಿರಾಕರಿಸಿದ ಕಾರಣ ತನ್ನ ರಾಜಕೀಯ ಭವಿಷ್ಯದ ಬಗ್ಗೆ ಆತಂಕವೊಂದಿರುವ ಯಾಮೀನ್ ಸಂಸತ್ತನ್ನು ಅಮಾನತುಗೊಳಿಸಿದರು ಮತ್ತು ತನ್ನ ಮೇಲೆಯೇ ಸುಪ್ರೀಂ ಕೋರ್ಟ್ ದೋಷಾರೋಪಣೆ ಮಾಡಬಹುದೆಂಬ ಕಾರಣದಿಂದ, ನ್ಯಾಯಾಲಯದ ಎಲ್ಲಾ ಚಲನ–ವಲನೆಗಳನ್ನು ಹತ್ತಿಕ್ಕಲು ಸೇನೆಗೆ ಆದೇಶ ನೀಡಿದರು. ಏಕೆಂದರೆ, ಇದೇ ವರ್ಷದಲ್ಲಿ ನಡೆಯುವ ಅಧ್ಯಕ್ಷೀಯ ಚುನಾವಣೆಯಲ್ಲಿ ತನ್ನ ಭವಿಷ್ಯ ಕುಂಠಿತಗೊಳ್ಳಬಹುದೆಂಬ ನಿರೀಕ್ಷಣೆಯಿಂದಾಗಿ, ನಾಶೀದ್‌ನ ಬಿಡುಗಡೆಗೆ ನಿರಾಕರಿಸಿ, ಸುಪ್ರೀಂ ಕೋರ್ಟಿನ ಆದೇಶವನ್ನು ಉಲಂಘಿಸಲಾಗಿದೆ.

ಇದಲ್ಲದೆ, ಯಾಮೀನ್‌ರ ಪಕ್ಷದ 12 ಶಾಸಕರು ಸಂಸತ್ತಿನಲ್ಲಿ ಪಕ್ಷಾಂತರ ಮಾಡಿದ್ದಕ್ಕೆ ಅವರನ್ನು ಸಂಸದೀಯ ಸ್ಥಾನಗಳಿಂದ ಕಿತ್ತು ಹಾಕಲಾಗಿತ್ತು. ಅವರನ್ನು ಪುನಃ ವಾಪಸ್ಸು ತೆಗೆದುಕೊಳ್ಳ ನ್ಯಾಯಾಲಯ ಆದೇಶಿಸಿತ್ತು. ಹಾಗೆ ಮಾಡಿದಲ್ಲಿ ಯಾಮೀನ್ ಪಕ್ಷವು 85 ಸದಸ್ಯ ಮಜ್‌ಲಿಸ್(ಸಂಸತ್ತು)ನಲ್ಲಿ ಬಹುಮತ ಕಳೆದುಕೊಳ್ಳುತ್ತಿದ್ದರು.

ಯಾಮೀನ್ ಪಈ ಇಬ್ಬರೂ ನ್ಯಾಯಾಧೀಶರು ಲಂಚ ಸ್ವೀಕರಿಸಿ,ತಮ್ಮ ಸರ್ಕಾರದ ವಿರುದ್ಧ ಪಿತೂರಿ ಹೂಡಿದ್ದಾರೆ ಎಂದು ಆರೋಪಿಸಲಾಗಿದೆ.

ಯಾಮೀನ್ ತಮ್ಮ ಸಹೋದರ ಹಾಗೂ ಮಾಜಿ ಅಧ್ಯಕ್ಷ ಮೌಮುನ್ ಅಬ್ದುಲ್ ಗಯೂಮ್ ರವರನ್ನು ಕೂಡ ಬಂಧಿಸಿದ್ದಾರೆ. ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಮೊದಲ ಅಧ್ಯಕ್ಷ ನಾಹೀದ್‌ಗೆ ಅಧಿಕಾರವನ್ನು ಹಸ್ತಾಂತರಿಸುವ ಮುನ್ನ ಗಯೂಮ್ 30 ವರ್ಷಗಳ ಕಾಲ ರಾಷ್ಟ್ರವನ್ನು ಸರ್ವಾಧಿಕಾರಶಾಹಿಯಾಗಿ ಆಳ್ವಿಕೆ ಮಾಡಿದ್ದರು. ಅವರು ಅಧ್ಯಕ್ಷರಾಗಿದ್ದಾಗ ನಡೆದ ಪ್ರಮುಖ ಸಂಗತಿಯೆಂದರೆ ಅದು ಹವಾಮಾನ ಬದಲಾವಣೆ ಸಮಸ್ಯೆಯ ವಾಸ್ತವತೆಯನ್ನು ಜಗತ್ತಿಗೆ ಎತ್ತಿತೋರಿಸಲು ನೀರಿನೊಳಗೆ ಸಂಪುಟ ಸಭೆಯನ್ನು ನಡೆಸಿದ್ದು.

ಪ್ರಕ್ಷುಬ್ಧತೆಯ ನಾಡು

ಇದೇ ಪೆಬ್ರವರಿ 7 ಕ್ಕೆ ನಿಖರವಾಗಿ ಆರು ವರ್ಷಗಳ ಹಿಂದೆಯಷ್ಟೆ ನಾಹೀದ್ ರವರು ತಮ್ಮ ಅಧಿಕಾರವನ್ನು ತನ್ನ ಸಹಾಯಕರಾಗಿದ್ದ ಮೊಹಮ್ಮದ್ ವಾಹೀದ್ ಗೆ ವಹಿಸುಕೊಡುವಂತೆ ಬಲವಂತ ಪಡಿಸಲಾಗಿತ್ತು. ಆಗ ನಾಹೀದ್ ರವರು, ಗಯೂಮ್‌ರವರ ನಿಷ್ಠರು ತನ್ನ ಸರ್ಕಾರದ ವಿರುದ್ಧ ದಂಗೆ ಎಬ್ಬಿಸಲು ಯೋಜಿಸುತ್ತಿದ್ದಾರೆ ಎಂದು ಆರೋಪಿಸಿದ್ದರು. ಆದರೆ, 2013 ರ ಅಧ್ಯಕ್ಷೀಯ ಚುನಾವಣೆಯಲ್ಲಿ 'ಯಾಮೀನ್' ಗೆದ್ದು ಅಧಿಕಾರಕ್ಕೆ ಬಂದರು. ಇದನ್ನು ವಿರೋಧ ಪಕ್ಷದವರು ಇದು ಅಕ್ರಮ ಚುನಾವಣೆ ಎಂದು ಆರೋಪಿಸಿದ್ದರು. ಅಂದಿನಿಂದ ಈ ದ್ವೀಪ ರಾಷ್ಟ್ರದಲ್ಲಿ ಯಾಮೀನ್ ಅಧ್ಯಕ್ಷತೆಯ ಸರ್ಕಾರ ವಿರೋಧಿಗಳನ್ನು ಜೈಲಿಗೆ ಹಾಕುವುದು ವಾಕ್‌ಸ್ವಾತಂತ್ರ್ಯದ ದಮನ, ನ್ಯಾಯಾಂಗದ ಮೇಲೆ ಒತ್ತಡ ಹಾಕಿಕೊಂಡು ಬರುತ್ತಿದೆ. ಈ ಪ್ರಕ್ಷುಬ್ಧ ರಾಜಕೀಯ ಪರಿಸ್ಥಿತಿ 2013 ರಿಂದಲೂ ಮಾಲ್ಡೀವ್ಸ್ ಎದುರಿಸುತ್ತಿದೆ.

ಯಾಮೀನ್ ರ ಆಡಳಿತದಲ್ಲಿ ಮಾಲ್ಡೀವ್ಸ್ ಸಮಾಜದಲ್ಲಿ ಇಸ್ಲಾಮೀಕರಣ ಹೆಚ್ಚುತ್ತಿರುವುದು ಕೂಡ ಕಂಡು ಬಂದಿದೆ. 2015 ರಲ್ಲಿ ಭಯೋತ್ಪಾದನೆ ಆರೋಪಗಳ ಮೇಲೆ ನಾಹೀದ್ ಗೆ ಶಿಕ್ಷೆ ವಿಧಿಸಲಾಗಿತ್ತು. 13 ವರ್ಷಗಳ ಕಾಲ ಜೈಲು ಶಿಕ್ಷೆಗೆ ಒಳಪಡಿಸಲಾಗಿತ್ತು. ಇದು ರಾಜಕೀಯ ದುರುದ್ದೇಶದಿಂದ ಕೂಡಿದ ಆರೋಪಗಳೆಂದು ಅಮ್ನೆಸ್ಟಿ ಇಂಟರ್ ನ್ಯಾಷನಲ್ ಸಂಸ್ಥೆ ಟೀಕಿಸಿತ್ತು. ನಾಹೀದ್ ಬ್ರಿಟನ್ನಿಗೆ ವೈದ್ಯಕೀಯ ಚಿಕಿತ್ಸೆಗೆಂದು ಹೋಗಿ ಅಲ್ಲಿ ರಾಜಕೀಯ ಆಶ್ರಯ ಪಡೆದರು.

ಯಾಮೀನ್ ಮೇಲೆ ನಿರಂಕುಶ ನಾಯಕತ್ವ ಮಾತ್ರವಲ್ಲ, ಭ್ರಷ್ಟಾಚಾರ, ಕಳ್ಳತನ, ಮತ್ತು ಕಪ್ಪು ಹಣವನ್ನು ಬಳಿ ಮಾಡುವ ಅಂತರಾಷ್ಟ್ರೀಯ ಗುಂಪುಗಳೊಂದಿಗೆ ಇವರ ಸಂಬಂಧವಿದೆ ಎಂಬ ಆರೋಪಗಳೂ ಇವೆ. 2016 ರ ಅಲ್ ಜಜೀರಾ ಸಾಕ್ಷ್ಯ ಚಿತ್ರ 'ಸ್ಟೀಲೀಂಗ್ ಪ್ಯಾರಾಡೈಸ್' ನಲ್ಲಿ ಯಾಮೀನ್ ಒಂದು ಮಿಲಿಯ ಡಾಲರ್ ನಗದನ್ನು ತುಂಬಿಸಿದ ಚೀಲಗಳನ್ನು ಪಡೆದರು, ಅವ್ವನು ಒತ್ತುವೆದೇ ಕಷ್ಟವಾಗಿತ್ತು ಎಂದು ಹೇಳಿಕೊಂಡಿತು.

ತನ್ನ ಅಧಿಕಾರವನ್ನು ಕ್ರೋಡೀಕರಿಸುವ ಮಧ್ಯೆ ಅವರಿಗೂ ಮತ್ತು ಅಣ್ಣ ಗಯೂಮ್ ನಡುವಿನ ಸಂಬಂಧ ಒಡೆದುಹೋಯಿತು. ಗಯೂಮ್ ಪ್ರತಿಪಕ್ಷಗಳ ಕಡೆಗೆ ಹೋದರು. ಆತ ಇನ್ನೂ ಭದ್ರತಾ ಪಡೆಗಳಲ್ಲಿ ಗಮನಾರ್ಹವಾದ ನಿಷ್ಠೆಯನ್ನು ಪಡೆದಿದ್ದಾರೆ. ಇವರನ್ನು ಬಂಧಿಸಲು ಬಂದ ಕೆಲವು ಅಧಿಕಾರಿಗಳು ಸೆಲ್ಯೂಟ್ ಹೊಡೆದರು ಎಂದು ವರದಿಯಾಗಿದೆ. ಇದು ಸಾರ್ವಜನಿಕವಾಗಿ ಹಲವಾರು ಅಭಿನಂದಿಸದ್ದನ್ನೂ ರಾಜಕೀಯ ಸುದ್ದಿಗಾರರು ಈ ರೀತಿ ಬಿಂಬಿಸಿದ್ದಾರೆ.

ಮಾಲ್ಡೀವ್ಸ್ ಮೇಲೆ ವಿದೇಶಿ ಪ್ರಭಾವ

ರಾಜಕೀಯ ವಿಶ್ಲೇಷಕರ ಪ್ರಕಾರ, ಹಿಂದೂ ಮಹಾ ಸಾಗರದೊಳಗಿನ ಈ ದ್ವೀಪ ರಾಷ್ಟ್ರದಲ್ಲಿನ ರಾಜಕೀಯದಲ್ಲಿ ಆಳವಾದ ಪ್ರಭಾವ ಬೀರುವ ಎರಡು ವಿದೇಶಿ ರಾಷ್ಟ್ರಗಳೆಂದರೆ ಏಷ್ಯಾದ ಎದುರಾಳಿಗಳಾದ ಭಾರತ ಮತ್ತು ಚೀನಾ ದೇಶಗಳು. ಭಾರತ ಮಾಲ್ಡೀವ್ಸ್‌ನ್ನು ಸರ್ವ ಋತು ಸ್ನೇಹಿತ ಎಂದು ಪರಿಗಣಿಸಿಕೊಂಡು ಬಂದಿದೆ..

1988 ರಲ್ಲಿ ಗಯೂಮ್ ಸರ್ಕಾರವನ್ನು ಉಳಿಸಲಿಕ್ಕಾಗಿಯೇ ಭಾರತ ಸೇನಾಕಾರ್ಯಾಚರಣೆಯನ್ನು ನಡೆಸಿದ್ದು. ಈ ಕಾರ್ಯಾಚರಣೆಯಲ್ಲಿ ಮಾಲೆ ನಗರ್ ಮೇಲೆ ಪ್ಯಾರಾಟ್ರೂಪರ್‌ಗಳನ್ನು ಇಳಿಸಿ ಮತ್ತು ನೌಕಾ ಪಡೆಗಳನ್ನು ನಿಯೋಜಿಸುವುದರೊಂದಿಗೆ ಅಬ್ದುಲ್ಲಾ ಲೂಧೂಪಿ ನೇತೃತ್ವದ ಕೆಲವು ಮಾಲ್ಡೇವಿಯನ್ನರು ತಮಿಳ ಈಲಮ್ ಲಿಬರೇಷನ್ ಸಂಘಟನೆಯ ಸಹಾಯದಿಂದ ನಡೆಸಿದ ಕ್ಷಿಪ್ರಕ್ರಾಂತಿಯನ್ನು ವಿಫಲಗೊಳಿಸಲಾಗಿತ್ತು.

ಭಾರತ ಮತ್ತು ಮಾಲ್ಡೀವ್ಸ್ ನಡುವಿನ ಸಂಬಂಧಗಳು ಐತಿಹಾಸಿಕ ಮತ್ತು 2000–3000 ವರ್ಷಗಳ ಹಿಂದಿನದ್ದು ಎಂದು ನಾಹೀದ್ ಒಮ್ಮೆ ಹೇಳಿಕೆ ಕೊಟ್ಟಿದ್ದರು?

ಇತ್ತೀಚೆಗೆ ಯಾಮೀನ್ ಸರ್ಕಾರಮತ್ತು ಚೀನಾದೊಂದಿಗಿನ ರಾಜಕೀಯ ಮತ್ತು ಆರ್ಥಿಕ ಸಂಬಂಧಗಳು ಬಲವರ್ಧನೆ ಗೊಂಡಿರುವುದು ಭಾರತಕ್ಕೆ ಕಸಿವಿಸಿಯಾಗಿದೆ. ಚೀನಾ ಮತ್ತು ಮಾಲ್ಡೀವ್ಸ್ ಕಳೆದ ವರ್ಷ ಬೆಲ್ಟ್ ಮತ್ತು ರಸ್ತೆ (ಒಬೊರೊ) ನಿರ್ಮಾಣ, ಮುಕ್ತ ವ್ಯಾಪಾರ, ಮಾನವ ಸಂಪನ್ಮೂಲ, ಸಾಗರಗಳು, ಪರಿಸರ, ಆರೋಗ್ಯ ಮತ್ತು ಹಣಕಾಸು ವಲಯಗಳಲ್ಲಿ 12 ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಿವೆ. ಅಲ್ಲದೆ ಚೀನಾದ ಕಂಪನಿಗಳಿಗೆ ಮಾಲ್ಡೀವ್ಸ್‌ನಲ್ಲಿ ಪ್ರಮುಖ ಮೂಲಭೂತ ಸೌಕರ್ಯ ಯೋಜನೆಗಳನ್ನು ನೀಡಲಾಗುತ್ತಿದೆ.

ಭಾರತವು ಹಿಂದೂ ಮಹಾಸಾಗರದಲ್ಲಿ ತನ್ನನ್ನು ಪ್ರಧಾನ ಶಕ್ತಿಯಾಗಿ ಸ್ಥಾಪಿಸಲು ಪ್ರಯತ್ನಿಸುತ್ತಿರುವುದರಿಂದ ಮಾಲ್ಡೀವ್ಸ್ ಭಾರತಕ್ಕೆ ಹೆಚ್ಚು ಮಹತ್ವದ್ದಾಗಿದೆ. ಯಾಮೀನ್ ಚೀನಾದೊಂದಿಗೆ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡು, ಪಶ್ಚಿಮದ ಕಡೆಯಿಂದ ಬರುವಂತ ಒತ್ತಡವನ್ನು ಹಾಗೂ ಮಾಲ್ಡೀವ್ಸ್ ಮೇಲಿನ ಭಾರತದ ಐತಿಹಾಸಿಕ ಹತೋಟಿಯನ್ನು ತಗ್ಗಿಸಲು ಯೋಜನೆ ಹೊಂದಿದ್ದಾರೆ ಎಂದು ನವದೆಹಲಿಯ ಕಾರ್ನೆಗೀ ಇಂಡಿಯಾದ ಒಬ್ಬ ಫೆಲೋ ಹೇಳಿದ್ದಾರೆ.

ಮಾಲ್ಡೀವ್ಸ್‌ನಲ್ಲಿ ಚೀನಾದ ಪ್ರಭಾವ ಭಾರತವನ್ನು ಸುತ್ತುವರೆಯುವ ಚೀನಾದ 'ಮುತ್ತುಗಳ ಸರ' ಕಾರ್ಯತಂತ್ರದ ಭಾಗ ಎಂದು ಭಾರತ ಪರಿಗಣಿಸುತ್ತಿದೆ.

ಮಾಲ್ಡೀವ್ಸ್‌ನಲ್ಲಿ ಯಾವುದೇ ಮಿಲಿಟರಿ ಹಸ್ತಕ್ಷೇಪದ ವಿರುದ್ಧ ಚೀನಾ ಎಚ್ಚರಿಕೆ ನೀಡಿದೆ ಹಾಗೂ ಮಾಲ್ಡೀವ್ಸ್ ನ ರಾಜಕೀಯ ಬಿಕ್ಕಟ್ಟನ್ನು ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳುವಂತೆ ಹೇಳಿಕೆ ನೀಡಿದೆ.

ಅಧ್ಯಕ್ಷೀಯ ಚುನಾವಣೆ :


ಮಾಲ್ಡೀವ್ಸ್‌ನಲ್ಲಿನ ಪ್ರಕ್ಷುಬ್ಧತೆಯು ಮುಂದುವರಿದಂತೆ, ಭದ್ರತಾ ಪಡೆಗಳ ಪಾತ್ರವು ಬಹಳ ನಿರ್ಣಾಯಕವಾಗುತ್ತದೆ. '.ಭದ್ರತಾ ಪಡೆಗಳೊಳಗಿನ ಕೆಲವರು ಮಾಜಿ ಅಧ್ಯಕ್ಷ ಗಯೂಮ್ ಗೆ ಇನ್ನೂ ನಿಷ್ಠರಾಗಿದ್ದಾರೆ. ಇದರಿಂದಾಗಿ ಭದ್ರತಾ ಸೇವೆಗಳಲ್ಲಿಯೂ ವಿಭಜನೆ ಸಂಭವಿಸಬಹುದು ಎಂಬ ಆತಂಕ ಯಾಮೀನ್‌ಗೆ ಕಾಡುತ್ತಿದೆ. ಈ ವರ್ಷದಲ್ಲಿಯೇ ಅಧ್ಯಕ್ಷೀಯ ಚುನಾವಣೆ ಬರುತ್ತದೆ. ವಿರೋಧ ಪಕ್ಷದ ಅನೇಕರು ಪ್ರಮುಖವಾಗಿ ನಾಹಿದ್ ಕೂಡ ಜೈಲಿನಲ್ಲಿರುವುದರಿಂದಾಗಿ ಈ ಚುನಾವಣೆ ಕೇವಲ ಒಂದು ನಾಟಕವಾಗುತ್ತದೆ.

ಈ ಹಿನ್ನೆಲೆಯಲ್ಲಿ ಚೀನಾ– ಸ್ನೇಹಿ ಯಾಮೀನ್ ಅಧಿಕಾರಕ್ಕೆ ಪುನಃ ಬಂದರೆ, ಭಾರತಕ್ಕೆ ಕಳವಳ ಹೆಚ್ಚಾಗುತ್ತದೆ. ಈಗಾಗಲೇ ನೆರೆಯ ನೇಪಾಳದಲ್ಲಿ ಕಮ್ಯೂನಿಸ್ಟ್ ಮೈತ್ರಿಕೂಟದ ವಿಜಯ ಭಾರತದ ಸಂಪ್ರದಾಯವಾದಿ ಮೋದಿ ಸರ್ಕಾರಕ್ಕೆ ಆಘಾತ ಉಂಟು ಮಾಡಿದೆ. ಭಾರತ ಸರಕಾರದ ಮೇಲೆಯೇ ಪ್ರಧಾನಿ ಮೋದಿಯ ನೇತೃತ್ವದಲ್ಲಿ ಕುರುಡು ದೇಶ ಭಕ್ತಿಯನ್ನು' ಉತ್ತೇಜಿಸುವ ಮತ್ತು ದೇಶದಲ್ಲಿ ಪ್ರಜಾಪ್ರಭುತ್ವದ ಹಕ್ಕುಗಳನ್ನು ನಿರ್ಬಂಧಿಸುವ ಆರೋಪಗಳಿವೆ.

ಮಾಲ್ಡೀವ್ಸ್‌ನಲ್ಲಿ ಪ್ರಜಾಪ್ರಭುತ್ವ ಅಥವಾ ಕಾನೂನು ಸುವ್ಯವಸ್ಥೆ ಎಂಬ ಹೆಸರಿನಲ್ಲಿ ನಡೆಯುವ ಯಾವುದೇ ಹಸ್ತಕ್ಷೇಪ ತಒಂದು ದೊಡ್ಡ ಪ್ರಮಾದವಾಗುತ್ತದೆ. ಇದು ಅಂತರಾಷ್ಟ್ರೀಯ ಕಾನೂನಿನ ಉಲ್ಲಂಘನೆಯಾಗುತ್ತದೆ. ಅಫ್ಘಾನಿಸ್ತಾನದಿಂದ ಮೊದಲುಗೊಂಡು, ಇರಾಕ್‌ವರೆಗೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆಸಿರುವ ವಿದೇಶಿ ಮಿಲಿಟರಿ ಮಧ್ಯಪ್ರವೇಶಗಳ ಗತಿ ಏನಾಗಿದೆ ಎಂದು ಇಡೀ ಜಗತ್ತಿಗೆ ಗೊತ್ತಿದೆ. ಇಂತಹ ನಡೆಗಳ ಮೂಲಕ ಅಸ್ತವ್ಯಸ್ತತೆಯಷ್ಟ ಬಂದಿರುವುದು, ಯಾವುದೇ ಪ್ರಜಾಪ್ರಭುತ್ವ ಬಂದಿಲ್ಲ.

ಮಾಲ್ಡೀವ್ಸ್‌ನ್ನು ಪ್ರಜಾಪ್ರಭುತ್ವ ಸಾಧಿಸುವತ್ತ ಒಯ್ಯಲು ರಾಜಕೀಯ ಮತ್ತು ನ್ಯಾಯಾಂಗದ ಸುಧಾರಣೆ ತುರ್ತಾಗಿ ಆಗಬೇಕಾಗಿದೆ ಎಂಬುದು ರಾಜಕೀಯ ಪರಿಣಿತರ ವಾದ. ಜನತಾ ಚಳುವಳಿಯೊಂದೆ ಈಗ ಈ ದೇಶವನ್ನು ನಾಶಮಾಡುತ್ತಿರುವ ಯಾಮೀನ್ ರವರ ಸರ್ವಾಧಿಕಾರಶಾಹಿಯನ್ನು ಮತ್ತು ನ್ಯಾಯಾಂಗ ಅಸಮರ್ಥತೆಯನ್ನು ಬದಲಿಸಬಲ್ಲದು.

JANASHAKTHI KANNADA VARA PATRIKE Feb 19-25, 2018 Price : Rs. 10/- Date of Publication : 16 February 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಡಾರ್ವಿನ್ ವಿಕಾಸವಾದದ ಪಿತಾಮಹ

ಅಹಮದ್ ಹಗರೆ


ಫೆಬ್ರುವರಿ 12 ಜೀವ ವಿಕಾಸವಾದದ ಪಿತಾಮಹನಾದ ಮಹಾನ್ ವಿಜ್ಞಾನಿ ಡಾರ್ವಿನನ 209ನೇ ಜನ್ಮದಿನ. ಇತ್ತೀಚಿಗಷ್ಟೇ ಕೇಂದ್ರ ಮಂತ್ರಿಯೊಬ್ಬರು ವಿಕಾಸವಾದ ಸತ್ಯವಲ್ಲ. ಶಾಲೆಯಲ್ಲಿ ಕಲಿಸಬಾರದು ಎಂದು ತಾಕೀತು ಮಾಡಿದ್ದರು. ಅದಕ್ಕೆ ನಾಗೇಶ ಹೆಗಡೆಯವರ ಪ್ರತಿಕ್ರಿಯೆ ಹಿಂದಿನ ಸಂಚಿಕೆಗಳಲ್ಲಿ ಓದಿದ್ದೀರಿ. ಡಾರ್ವಿನನ ಜೀವನ ಮತ್ತು ಸಂಶೋಧನೆ-ಸಾಧನೆ ಬಗೆಗೆ ಲೇಖನದ ಭಾಗ-2 ಇಲ್ಲಿದೆ. ಜೀವನದ ಬಗ್ಗೆ ಭಾಗ-1ರಲ್ಲಿ ಓದಿದ್ದೀರಿ. ಇಲ್ಲಿನ ಭಾಗ-2ರಲ್ಲಿ ಅವರ ಸಂಶೋಧನೆ-ಸಾಧನೆ ಬಗೆಗೆ ಇದೆ.

ಸಂಶೋಧನೆ ಮತ್ತು ಸಾಧನೆ

ಡಾರ್ವಿನ್ 5 ವರ್ಷಗಳ ಕಾಲ ಪರ್ಯಟನೆ ನಡೆಸಿ ಅದಾದ ನಂತರ ಮತ್ತೂ ಒಮ್ಮೆ ತಿರುಗಾಡಿ ಗುರುತು ಮಾಡಿಕೊಂಡಿದ್ದ ವಿಷಯವನ್ನು, ಸಂಗ್ರಹಿಸಿದ ವಸ್ತುಗಳನ್ನು ಸಿಕ್ಕ ಸಿಕ್ಕ ಪುಸ್ತಕ ನೋಡಿ ಅಭ್ಯಸಿಸಿ ಬಂದ ಅನುಮಾನಗಳ ಬಗ್ಗೆ ಸಂಬಂಧಿಸಿದ ತಜ್ಞರಲ್ಲಿ ಸಂವಾದಿಸಿ, ಒಂದು ಸಂಶೋಧನಾ ಗ್ರಂಥ ಮಾಲೆಯನ್ನು ಪ್ರಕಟಿಸಿದ. ಹವಳದ ದಿಣ್ಣೆಗಳ ಹುಟ್ಟು ಮತ್ತು ವಿಕಾಸದ ಪ್ರವಾಸ ಕಥನವನ್ನು ಲೋಕಾರ್ಪಣೆ ಮಾಡಿದ್ದೇ ತಡ, ರಾತ್ರೋ-ರಾತ್ರಿ ಡಾರ್ವಿನ್ ಮನೆಮಾತಾಗಿದ್ದ. ಇದರಿಂದ ಡಾರ್ವಿನ್‌ಗೆ ವಿಶೇಷ ಗೌರವಾದರಗಳು, ಇಂಗ್ಲೇಂಡಿನ ರಾಯಲ್ ಸೊಸೈಟಿಯ ಫೆಲೋಷಿಪ್, ಪ್ರಶಸ್ತಿಗಳು ಹುಡುಕಿಕೊಂಡು ಬಂದವು.

ತುಂಬಾ ದಣಿದ ಡಾರ್ವಿನ್ ತೀವ್ರ ತರದ ಖಾಯಿಲೆಗೆ ತುತ್ತಾದಾಗ ಆರೋಗ್ಯ ಸುಧಾರಣೆಗಾಗಿ ಜನಜಂಗುಳಿಯ ಲಂಡನ್ ಬಿಟ್ಟು ದೂರದ ಪ್ರಶಾಂತ ಹಳ್ಳಿಯೊಂದರಲ್ಲಿ ವಾಸಿಸಲಾರಂಬಿಸಿದ. ಇದು ಆತನ ವಿಕಾಸವಾದಕ್ಕೆ ನಿಸರ್ಗದ ಆಯ್ಕೆಯ ಬರವಣಿಗೆಗೆ ಪೂರಕ ಪ್ರತ್ಯಕ್ಷ ಸಾಕ್ಷಿ ಒದಗಿಸಿತು.

ಈ ಜಗತ್ತಿನಲ್ಲಿ ಹೊಸ ಪ್ರಬೇಧದ ಸಸ್ಯಗಳು, ಪ್ರಾಣಿಗಳು ಹೇಗೆ ಹುಟ್ಟಿದವು? ಜೀವಿಗಳ ಸೃಷ್ಟಿ ಧರ್ಮ ಗ್ರಂಥಗಳಲ್ಲಿರುವಂತೆ ಎಲ್ಲವೂ ಏಕಕಾಲಕ್ಕೆ ಆಯಿತೆ? ಅಥವ ಸಾವಿರಾರು ವರ್ಷಗಳಲ್ಲಿ ಆಯಿತೆ? ಈ ಭೂಮಿಯ ಮೇಲಿನ ಜೀವಿಗಳು ಯಾವಾಗಲೂ ಬದಲಾಗದೆ ಹಾಗೆಯೇ ಇರುತ್ತವೋ? ಹೇಗೆ? ಬದಲಾದಲ್ಲಿ ಹೇಗೆ ಬದಲಾಗುತ್ತವೆ? ಈ ಪ್ರಶ್ನೆ ಡಾವಿನ್ನನನ್ನೂ ಒಳಗೊಂಡಂತೆ ಹಿಂದಿನ ಅನೇಕ ವಿಜ್ಞಾನಿಗಳನ್ನೂ ಕಾಡಿತ್ತು. ಕೆಲವರು ಬೈಬಲ್ ನಲ್ಲಿ ನಂಬಿಕೆ ಇಟ್ಟಿದ್ದರು. ಕೆಲವರಿಗೆ ತುಂಬಾ ಕುತೂಹಲವಿತ್ತು.




ಡಾರ್ವಿನ್ ತನ್ನ ಸಮಕಾಲೀನ ಸಮಾಜದ ಎಲ್ಲಾ ಸ್ತರಗಳ ವಿಜ್ಞಾನಿ, ಗಣಿತಜ್ಞ, ಅರ್ಥಶಾಸ್ತ್ರಜ್ಞ, ರಾಜಕೀಯ ಶಾಸ್ತ್ರಜ್ಞ ಹಾಗು ಇತರ ಭೌತ ವಿಜ್ಞಾನಿಗಳ ಜೊತೆ ಸಂಭಾಷಿಸಿ ಅವರವರ ವಿಚಾರಧಾರೆಗಳನ್ನ ಪರಾಮರ್ಷಿಸಿ ತನ್ನಲ್ಲಿರುವ ದಾಖಲೆ ಮತ್ತು ಅಧ್ಯಯನಗಳನ್ನು ಸತ್ಯದೊಂದಿಗೆ ಒರೆ ಹಚ್ಚಿ ತನ್ನ 30 ವರ್ಷದ ಸುಧೀರ್ಘ ಸಂಶೋಧನೆಯ ಆಧಾರದಲ್ಲಿ ತನ್ನದೇ ಆದ ಅನುಭವ ಮತ್ತು ಪ್ರಯೋಗಗಳನ್ನ ಬರವಣಿಗೆಗೆ ಇಳಿಸುತ್ತಾ ಹೋದ. ಹಾಗೆ ಅದೊಂದು ಜಗತ್ತನ್ನು ತಲ್ಲಣಗೂಳಿಸುವ ಸುಂದರ ಗ್ರಂಥವಾಗಿ 1859ರ ನವೆಂಬರ್ 24 "ಜೀವ ಸಂಕುಲಗಳ ಉಗಮ"[ORIGIN OF THE SPECIES] ಎಂಬ ಹೆಸರಿನಲ್ಲಿ ಹೊರಬಂದು ಜಗತ್ತನ್ನೇ ನಡುಗಿಸಿತು. ಇದರ ಮೊದಲ ಮುದ್ರಣದ ಎಲ್ಲಾ ಪ್ರತಿಗಳು ಒಂದೇ ದಿನದಲ್ಲಿ ಖರ್ಚಾಗಿ ಮೂಲಭೂತವಾದಿಗಳ ಮೌಢ್ಯದ ಮೇಲೆ ಗದಾ ಪ್ರಹಾರ ಮಾಡಿತು. ಚರ್ಚು-ಮಂದಿರಗಳ ಗರ್ಭಗುಡಿಗಳು ನಲುಗಿ ತತ್ತರಿಸಿತು. 'ರಾಜಾ ಪ್ರತ್ಯಕ್ಷ ದೇವತಾ' ಎಂಬ ಮೋಸದ ಸಿದ್ಧಾಂತ ಮಣ್ಣುಪಾಲಾಯಿತು. ಇಡೀ ಜಗತ್ತು ನಂಬಿದ್ದ ಕುರುಡು ಸಿದ್ಧಾಂತ ಬಟಾಬಯಲಾಗಿ ವಸ್ತುವಾದಿ ಸೈದ್ಧಾಂತಿಕ ಧೋರಣೆಗಳಿಗೆ ಬಲ ಬಂದಂತಾಯಿತು. ಭಾವನಾವಾದದ ಪ್ರಭಾವ ಮುರುಟಿ ಹಿಂದೆ ಬಿತ್ತು. ಕ್ರಾಂತಿಕಾರಿ ಹೋರಾಟ ಜಗದಾದ್ಯಂತ ಚುರುಕುಗೊಂಡು ನಿರಂಕುಶ ರಾಜಪ್ರಭುತ್ವ ನಾಶಗೊಂಡು ಸಮಾಜವಾದಿ ಪ್ರಜಾಪ್ರಭುತ್ವ ತಲೆಎತ್ತಿ ನಿಂತಿತು.

ಏನಿದೆ ಈ "ಜೀವ ಸಂಕುಲಗಳ ಉಗಮ"ದೊಳಗೆ?

ಅತ್ಯಂತ ಸುಂದರ, ಸರಳ ಹಾಗೂ ಪುರಾವೆಗಳ ಮೂಲಕ ಹಂತ ಹಂತವಾಗಿ, ತಾರ್ಕಿಕವಾಗಿ ಜೀವಿಗಳ ವಿಕಾಸದ ಕಥೆಯನ್ನು ಹೆಣೆದಿದ್ದಾರೆ. ಸುಮಾರು 300 ಪುಟದ ಈ ಪುಸ್ತಕದಲ್ಲಿ 14 ಅಧ್ಯಾಯಗಳಿವೆ ಈ ಎಲ್ಲಾ ಅಧ್ಯಯಗಳೂ ಈ ಕೆಳಗಿನ ಪ್ರಮುಖ 5 ಅಂಶಗಳಿಂದ ಕೂಡಿವೆ.

1. **ವೈವಿಧ್ಯತೆ (Diversity):** ಪ್ರಪಂಚದ ಎಲ್ಲಾ ಜೀವಿಗಳಲ್ಲೂ ವ್ಯತ್ಯಾಸ ಮತ್ತು ವೈವಿಧ್ಯತೆಗಳು ಇರುತ್ತವೆ ಈ ವೈವಿಧ್ಯತೆಯೇ ಜೀವಿಗಳನ್ನು ಭಿನ್ನ ಭಿನ್ನವಾಗಿ ಸೃಷ್ಟಿಸಿವೆ. ಈ ಭಿನ್ನತೆಯು ಮಾನವ ನಿಯಂತ್ರಿತ ಪರಿಸರ ಹಾಗೂ ನೈಸರ್ಗಿಕ ಪರಿಸರಗಳಲ್ಲಿ ಬೇರೆ ಬೇರೆಯಾಗಿಯೇ ಇರುತ್ತವೆ ಹಾಗೂ ಆ ಪರಿಸರ ಬಂಧಿಯಾಗಿರುತ್ತದೆ (ಉದಾ: ಸಾಕು ಪ್ರಾಣಿ ಲಕ್ಷಣ ಹಾಗೂ ಕಾಡುಪ್ರಾಣಿಗಳಲ್ಲಿನ ಲಕ್ಷಣಗಳ ವ್ಯತ್ಯಾಸ ಭಿನ್ನವಾಗೇ ಇರುತ್ತದೆ)



2. **ಅತಿಸಂತಾನ (Over breeding):** ಜೀವಿಗಳಲ್ಲಿನ ಭಿನ್ನತೆಯಿಂದಾಗಿಯೇ ಎಲ್ಲ ಜೀವಿಗಳಲ್ಲೂ ಅತಿಹೆಚ್ಚಿನ ಸಂಖ್ಯೆಯಲ್ಲಿ ಸಂತಾನ ಮಾಡಿಕೊಳ್ಳುವ ಸಾಮರ್ಥ್ಯ ಇದೆ (ಮೊಲ ವರ್ಷಕ್ಕೆ 3 ಬಾರಿ, ಕೀಟಗಳು ದಿನಗಳಿಂದ ವಾರಕ್ಕೊಂದು ಬಾರಿ, ನೊಣ 15ದಿನಕ್ಕೊಂದು ಬಾರಿ) ಆದರೆ ಇವುಗಗಳಲ್ಲಿ ಕೆಲವೇ ಕೆಲವು ಮಾತ್ರ ಬದುಕುಳಿಯುತ್ತವೆ.
3. **ಬದುಕಿಗಾಗಿ ಹೋರಾಟ (Struggle for existence):** ಜೀವಿಗಳ ಸಂಖ್ಯೆಯಲ್ಲಿ ಅದೆಷ್ಟೇ ಸಂಖ್ಯೆಯಲ್ಲಿ ಹೆಚ್ಚಿದರೂ ಈ ಭೂಮಿ ಮೇಲಿರುವ ಆಹಾರ ಮತ್ತು ಸ್ಥಳ ಹೆಚ್ಚುವುದಿಲ್ಲ. ಜೀವಿಗಳ ಸಂಖ್ಯೆ ಹೆಚ್ಚಾದಷ್ಟೂ ಆಹಾರ ಮತ್ತು ಸ್ಥಳಾವಕಾಶ ಕಡಿಮೆಯಾಗುತ್ತದೆ ಆದ್ದರಿಂದ ಜೀವಿಗಳಲ್ಲಿ ಆಹಾರ ಮತ್ತು ಸ್ಥಳಾವಕಾಶಕ್ಕಾಗಿ ಹೋರಾಟ ಪ್ರಾರಂಭವಾಗುತ್ತದೆ. ಹೀಗೆ ಬದುಕಿಗಾಗಿ ನಡೆಯುವ ಹೋರಾಟದಲ್ಲಿ ಮೂರು ಬಗೆ ಮೊದಲನೆಯದಾಗಿ ಒಂದೇ ಪ್ರಬೇಧದ ಜೀವಿಗಳ ನಡುವೆ. ಎರಡನೆಯದಾಗಿ ಪ್ರಬೇಧ ಪ್ರಬೇಧಗಳ ನಡುವೆ ಮತ್ತು ಮೂರನೆಯದಾಗಿ ಪ್ರಕೃತಿ ವಿಕೋಪಗಳ ವಿರುದ್ಧ.
4. **ಹೊಂದಿಕೊಳ್ಳುವರಿಗೆ ಬಾಳುವೆ (Survival of fittest):**-ಬದುಕಿಗಾಗಿ ನಡೆವ ಹೋರಾಟದಲ್ಲಿ ನಿಸರ್ಗಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯವಿರುವ ಜೀವಿಗಳು ಮಾತ್ರ ಬದುಕುಳಿಯುತ್ತವೆ. ಮಿಕ್ಕವು ನಾಶ ಹೊಂದುತ್ತವೆ.
5. **ಪ್ರಾಕೃತಿಕ ಆಯ್ಕೆ (Natural selection):** ಕುಸುಲಕ್ಕಿ ತಿನ್ನಲು ಸಾಧ್ಯವಾದರೆ ಮಾತ್ರ ಮಂಗಳೂರಿನಲ್ಲಿ ಬದುಕಲು ಸಾಧ್ಯ. ಚಳಿ ತಡೆಯಲು ಸಾಧ್ಯವಾದರೆ ಮಾತ್ರ ಊಟಿ ಮತ್ತು ಶಿಮ್ಲಾದಲ್ಲಿ ಸಂಸಾರ ಹೂಡಲು ಸಾಧ್ಯ. ಬಿಸಿಲ ಝಳ ತಡೆಯಲು ಸಾಧ್ಯವಾದರೆ ಮಾತ್ರ ಬಳ್ಳಾರಿಯಲ್ಲಿ ಇರಲು ಸಾಧ್ಯ. ಈ ಹಿನ್ನೆಲೆಯಲ್ಲಿಯೇ ಕುಸುಲಕ್ಕಿ ತಿನ್ನುವವನು ಮಂಗಳೂರು, ರಾಗಿ ತಿನ್ನುವವನು ಹಾಸನ, ರೊಟ್ಟಿ ತಿನ್ನುವವನು ಧಾರವಾಡಗಳಲ್ಲಿ ಹಂಚಿಕೆಯಾಗಿರುವುದು. ಭೌಗೋಳಿಕ ಹಂಚಿಕೆ ಮತ್ತು ಜೀವಿಗಳ ರೂಪುರೇಷೆಗಳು ಪ್ರಾಕೃತಿಕ ಆಯ್ಕೆಯನ್ನು ಸಮರ್ಥಿಸುತ್ತವೆ ಅಂದರೆ ತನಗೆ ಬೇಕಾದ ಜೀವಿಗಳನ್ನು ಪ್ರಕೃತಿಯು ತನಗೆ ಬೇಕಾದ ರೀತಿಯಲ್ಲೇ ಆಯ್ಕೆ ಮಾಡಿಕೊಳ್ಳುತ್ತದೆ.

ಈ ಎಲ್ಲಾ ಹಿನ್ನೆಲೆಯಲ್ಲೇ ಡಾರ್ವಿನ್, ಜೀವಿಗಳು ಲಕ್ಷಾಂತರ ವರ್ಷಗಳಿಂದ ಒಂದು ಜೀವಿಯಿಂದ ಇನ್ನೊಂದು ಜೀವಿಯಾಗಿ ಮಾರ್ಪಾಟು ಹೊಂದಿ ವಿಕಾಸವಾಗಿ ಬಂದಿವೆಯೇ ಹೊರತು ಬೈಬಲ್ಲಿನ ಅಡಂ ಮತ್ತು ಈವ್ ನಿಂದಲ್ಲ ಎಂದು ಸಾಕ್ಷಿ ಸಮೇತ ನಿರೂಪಿಸಿದ.

ಮಾನವನ ಉಗಮ

1871ರಲ್ಲಿ ಡಾರ್ವಿನ್ ಇನ್ನೊಂದು ಮಹತ್ವಪೂರ್ಣ ಪುಸ್ತಕ "ಮಾನವನ ಉಗಮ"[The descent of Man] ಪ್ರಕಟಮಾಡಿದ. ಇದರಲ್ಲಿ ಮಾನವನೂ ಸಹ ಇತರ ಜೀವಿಗಳಂತೆ ಒಂದು ಜೀವಿಯಿಂದ ವಿಕಾಸ ಹೊಂದಿ ಬಂದಿದ್ದಾನೆ ಎಂದು ನಿರೂಪಿಸಿ, ಮನುಷ್ಯ ಗೊರಿಲ್ಲಾ ಜಾತಿಯ ಮೂಲದ ಪ್ರಾಣಿಯಿಂದ ಲಕ್ಷಾಂತರ ವರ್ಷಗಳ ಹಿಂದೆ ರೂಪಾಂತರ ಹೊಂದಿ ವಿಕಾಸವಾದನೇ ಹೊರತು, ದೇವರು ಸೃಷ್ಟಿಸಿದ ಆತನ ಪ್ರತಿಬಿಂಬ ಅಲ್ಲ ಎಂದು ಸಾಬೀತು ಮಾಡಿದ.

ಜಗತ್ತಿನ ವಿಜ್ಞಾನಿಗಳಲ್ಲಿ ಮನುಷ್ಯನ ಹುಟ್ಟಿನ ಮೂಲ ಹುಡುಕುವ ಕೆಲಸಕ್ಕೆ ತೊಡಗಿ, ಜ್ಯೋತಿಷ್ಯದ ಪಂಡಿತರಿಗೆ ಮರ್ಮಾಘಾತ ಉಂಟುಮಾಡಿ, ಸೈದ್ಧಾಂತಿಕ ತಿಳುವಳಿಕೆಯಲ್ಲಿ ಅಲ್ಲೋಲ-ಕಲ್ಲೋಲ ಎಬ್ಬಿಸಿ 1882 ನವೆಂಬರ್ 19 ರಂದು ಹೊಸ ವಿಕಾಸಕ್ಕೆ ಮುನ್ನುಡಿ ಬರೆದು ನಿಸರ್ಗ ಗರ್ಭ ಸೇರಿತು ಈ ಮಹಾನ್ ಚೇತನ. ಈತನ ಸಂಶೋಧನೆಯಿಂದ ಪ್ರೇರೇಪಿತರಾಗಿ ಕಗ್ಗಂಟಾಗಿ ಉಳಿದಿದ್ದ ಮಾನವನ ಹುಟ್ಟಿನ ಮೂಲ ಸರಳವಾಗಿ ಬಿಡಿಸಿದಂತಾಯಿತು.

ಡಾರ್ವಿನ್ ಸಿದ್ಧಾಂತದ ಮಹಿಮೆ

ಒಬ್ಬ ವಿಜ್ಞಾನಿಯ ಸಾಧನೆಯನ್ನು ಅಳೆಯುವಾಗ ಆತ ಏನು ಮಾಡಿದ್ದಾನೆ ಎನ್ನುವುದಕ್ಕಿಂತ ಆತನ ಸಂಶೋಧನೆ ಬೆರೆಯವರಲ್ಲಿ ಎಂತಹ ಪರಿಣಾಮ ಬೀರಿದೆ ಎನ್ನುವುದು ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಡಾರ್ವಿನ್ನನ "ಜೀವ ಸಂಕುಲಗಳ ಉಗಮ" ಯೂರೋಪಿನಲ್ಲಿ ಅಲ್ಲೋಲ-ಕಲ್ಲೋಲ ಉಂಟುಮಾಡಿತು. ಧಾರ್ಮಿಕ ಪ್ರಭುಗಳು ವ್ಯಗ್ರರಾದರು. ಧರ್ಮದ ಅಮಲೇರಿಸಿಕೊಂಡಿದ್ದ ರಿಚರ್ಡ್ ಓವನ್ ಮತ್ತು ಲೂಯಿ ಅಗಾಸಿರ್ ಎನ್ನುವ ಪಳೆಯುಳಿಕಾ ವಿಜ್ಞಾನಿಗಳು ಸುಳ್ಳು ಪುರಾವೆಗಳನ್ನು ಸೃಷ್ಟಿಸಿ ಡಾರ್ವಿನ್ ಸಿದ್ಧಾಂತ ಸುಳ್ಳೆಂದು ಸಾಬೀತು ಮಾಡಲು ಹೋರಾಟ ನಡೆಸಿದರು. ಇವರ ವಿರುದ್ಧ ಡಾರ್ವಿನ್ ಸಿದ್ಧಾಂತದ ಪರ ಥಾಮಸ್ ಹೆನ್ರಿ ಹೆಕ್ಲಿ, ಜೋಸೆಫ್ ಹುಕಲ್ ಮತ್ತು ಅಗಾಸ್ಟೆ ಸಾಕ್ಷಿ-ಪುರಾವೆಗಳನ್ನು ಮತ್ತಷ್ಟು ಸಂಗ್ರಹಿಸಿ ಸೈದ್ಧಾಂತಿಕವಾಗಿ ಸುಮಾರು ವರ್ಷ ಹೋರಾಡಿದರು.

1863ರಲ್ಲಿ ಥಾಮಸ್ ಹೆಕ್ಲಿ ಡಾರ್ವಿನ್ ಸಿದ್ಧಾಂತದಿಂದ ಪ್ರೇರಿತನಾಗಿ ಡಾರ್ವಿನನಿಗಿಂತ ಸುಂದರವಾಗಿ ಮಾನವನ ಉಗಮದ ಸಿದ್ಧಾಂತ ಮಂಡಿಸಿದ "Man's place in Nature" ಪುಸ್ತಕ ಪ್ರಕಟಿಸಿದ. ಇದರಲ್ಲಿ ಮಾನವ-ಕಪಿ-ಗೊರಿಲ್ಲಾ ಸಂಬಂಧವನ್ನು ವಿವರಿಸಿ ಮಂಗನಿಂದ ಮಾನವ ಎಂದು ನೇರವಾಗೇ ನಿರೂಪಿಸಿದ (ಡಾರ್ವಿನ್‌ಗೆ ಬಹುಶಃ ಆ ಧೈರ್ಯ ಇರಲಿಲ್ಲ)

ಡಾರ್ವಿನ್ ಸಿದ್ಧಾಂತವನ್ನು ಒಂದು ವಿಜ್ಞಾನವನ್ನಾಗಿ ರೂಪಿಸಿದ ಖ್ಯಾತಿ ತಳಿ ವಿಜ್ಞಾನದ್ದು. ಅದು ನವ-ಡಾರ್ವಿನ್‌ವಾದ(New-Darvinism) ಎನ್ನುವ ಸಿದ್ಧಾಂತವನ್ನು ಹುಟ್ಟು ಹಾಕಿತು. ಗ್ರ್ಯಾಗರ್ ಮೆಂಡಲ್ ಈ ಸಿದ್ಧಾಂತದ ಸಹಾಯದಿಂದ ಅನುವಂಶೀಯತೆಯನ್ನು ಪ್ರತಿಪಾದಿಸಿದ.

ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಎಂಗೆಲ್ಸರಿಗೆ ಸಮಾಜದ ರಚನೆಯನ್ನು ಅರಿಯಲು ಮತ್ತು ಆ ಮೂಲಕ ಮಾರ್ಕ್ಸವಾದವನ್ನು ಒಂದು ಸಮಾಜ ವಿಜ್ಞಾನವನ್ನಾಗಿ ರೂಪಿಸಲು ಸಾಧ್ಯವಾಯಿತು. ಮಾರ್ಕ್ಸ ತಾನು ಜಾಗತಿಕವಾಗಿ ಮಂಡಿಸಲಿರುವ ದ್ವಂದ್ವಮಾನ ಮತ್ತು ಚಾರಿತ್ರಿಕ ಮೂಲಭೂತ ಭೌತವಾದದ ಮೂಲಕ ಸಮಾಜದ ಸಂರಚನೆ ತಿಳಿಸಲು ಡಾರ್ವಿನನ ಗ್ರಂಥ ಪ್ರಬಲವಾದ ಪುರಾವೆ ಒದಗಿಸುತ್ತದೆ ಎಂದು ಎಂಗೆಲ್ಸಗೆ ಬರೆದ ಪತ್ರದಲ್ಲಿ ತಿಳಿಸಿದ್ದರು. ಮಾತ್ರವಲ್ಲ, ನಾನು ಡಾರ್ವಿನ್ನರ ಪ್ರಾಮಾಣಿಕ ಅಭಿಮಾನಿ ಎಂದು ಮಾರ್ಮಿಕವಾಗಿ ನುಡಿದಿದ್ದರು. ಒರಟು ಶೈಲಿಯಲ್ಲಿದ್ದರೂ ವಸ್ತುವಾದಿ ಸಿದ್ಧಾಂತದ ಗಟ್ಟಿತನಕ್ಕೆ ಡಾರ್ವಿನ್ ಸಂಶೋಧನೆ ನೆರವಾಗಿದೆ ಎಂದರು. ಪ್ರಕೃತಿಯಲ್ಲಾದ ವಿಕಾಸ, ಈ ವಿಕಾಸದಿಂದಾಗಿಯೇ ಆಗಿರುವ ಬದಲಾವಣೆಗಳು ಒಂದು ನಿರ್ದಿಷ್ಟ ನಿಯಮಗಳ ಪ್ರಕಾರವೇ ಆಗಿದೆ ಎಂಬುದನ್ನು 19ನೇ ಶತಮಾನದ ಹಲವಾರು ವೈಜ್ಞಾನಿಕ ಆಧಾರಗಳ ಮೇಲೆ ಫೆಡ್ರಿಕ್ ಎಂಗೆಲ್ಸ್ ನಿರೂಪಿಸಲು, ಭೌತಶಾಸ್ತ್ರ, ರಸಾಯನಶಾಸ್ತ್ರದ ಅಂದಿನ ಸಿದ್ಧಾಂತಗಳಲ್ಲದೆ, ಜೀವಶಾಸ್ತ್ರದ ಡಾರ್ವಿನ್ ಸಿದ್ಧಾಂತ ಸಹ ಒಂದು ಪ್ರಮುಖ ಆಕರವಾಗಿತ್ತು.

1953 ರಲ್ಲಿ ಜೇಮ್ಸ್ ವ್ಯಾಟ್ಸನ್ ಮತ್ತು ಫ್ರಾನ್ಸಿಸ್ ಕ್ರಿಕ್ ವಂಶವಾಹಕ ಕಣಗಳ ರಾಸಾಯನಿಕ ರಚನೆಯನ್ನು ಕಂಡು ಹಿಡಿದ ನಂತರ ತಳಿವಿಜ್ಞಾನದಲ್ಲಿ ಕ್ರಾಂತಿಕಾರಕ ಬದಲಾವಣೆಯಾಯಿತು ಅಣು ಅನುವಂಶೀಯ ವಿಜ್ಞಾನ (Molecular genetics) ಡಾರ್ವಿನ್ ಸಿದ್ಧಾಂತವನ್ನು ಗಟ್ಟಿಮಾಡಿ ಬೆಳೆಯಿತು. ಇಂದು ತಳಿವಿಜ್ಞಾನ, ಜೀವ ವಿಜ್ಞಾನ ಬಹುಮುಖಿಯಾಗಿ ಬೆಳೆಯಲು ಡಾರ್ವಿನ್ ಬಹುಮುಖ್ಯ ಕಾರಣ. ಇದುವೇ ಜನವಿಜ್ಞಾನಿಯೊಬ್ಬನ ಸಾಧನೆ.

JANASHAKTHI KANNADA VARA PATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**